ಬೆಲೆ : ರೂ ೧೦-೦೦

ಉತ್ಥಾನ

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೬ ಡಿಸೆಂಬರ್ -೨೦೧೫ ಸಂಚಿಕೆ - ೫

ಹಿಂಸೆ × ಹಿಂಸೆ = ಅಹಿಂಸೆ?

*

"ಇಸ್ಲಾಂಮಿಕ್ ಸ್ಟೇಟ್"ನ ಅಂತರಂಗ ಮತ್ತು ಬಹಿರಂಗ

*

ನ್ಯಾಯಾಧೀಶರ ನೇಮಕಾತಿ ವ್ಯವಸ್ಥೆ 'ಕೊಲಿಜಿಯಂ'

*

ಟಿಪ್ಪು ಜಯಂತಿ : ಲಾಭಾಲಾಭದ ವಿಚಾರ

ಜನಪದ ವಿಚಾರದಲ್ಲಿ

ಧರ್ಮದ ಹೆಸರಿನಲ್ಲಿ, ರಾಜಕಾರಣದ ಹೆಸರಿನಲ್ಲಿ, ವೈಚಾರಿಕತೆಯ ಹೆಸರಿನಲ್ಲಿ ಎಲ್ಲೆಲ್ಲೂ ಹಿಂಸೆ ವ್ಯಾಪಿಸುತ್ತಿದೆ. ಹಿಂಸೆಯಿಂದ ಹಿಂಸೆಯನ್ನು ತಡೆಗಟ್ಟುವ ಪ್ರಯತ್ನ ಮಾಡಲಾಗುತ್ತಿದೆ. ಹಿಂಸೆ – ಪ್ರತಿಹಿಂಸಯಿಂದ ಶಾಂತಿ ಮತ್ತು ಅಹಿಂಸೆ ಹುಟ್ಟುಬಹುದೇನೊ ಎಂಬ ಆಶಯ ಈ ಲೇಖನದ್ದು.

ಜಗತ್ತಿಗೆಲ್ಲ ತಲೆಶೂಲೆಯಾಗಿರುವ ಇಸ್ಲಾಮಿಕ್ ಸ್ಟೇಟ್ ಎಂಬ ಮತಾಂಧ ಸಂಸ್ಥೆಯ ಮೇಲೆ ಬೆಳಕು ಚೆಲ್ಲುತ್ತದೆ ಈ ಲೇಖನ.

ಗೌರವಾನ್ವಿತ ವ್ಯಕ್ತಿಯಾಗಿದ್ದೂ ಐತಿಹಾಸಿಕವಾಗಿ ವಿವಾದಗಳಿಗೆ ತುತ್ತಾಗಿರುವ ಟಿಪ್ಪುಸುಲ್ತಾನನ ಜಯಂತಿಯ ಹಿಂದೆ ರಾಜಕಾರಣದ ಲಾಭಲಾಭದ ವಿಚಾರವಿದೆ ಎಂಬುದನ್ನು ತಿಳಿಸುವ ಪ್ರಯತ್ನದಲ್ಲಿ ಈ ಲೇಖನ.

ಕನ್ನಡತಿ ಸಂಧ್ಯಾ ರವೀಂದ್ರನಾಥ್ ಅಮೇರಿಕಾದಲ್ಲಿ ಕನ್ನಡದ ದೀಪ ಹಚ್ಚಿರುವ ಈ ಕಥೆಯನ್ನು ಎಲ್ಲರೂ ಓದಬೇಕು.

ಕೊಲಿಜಿಯಂ ವ್ಯವಸ್ಥೆಯ ಬಗ್ಗೆ ದೇಶಾದ್ಯಂತ ಚರ್ಚೆ ನಡೆದಿದೆ. ಆ ಕುರಿತಾದ ವಿವಿಧ ದೃಷ್ಟಿಕೋನಗಳ ಮೂರು ಲೇಖನಗಳು ಇಲ್ಲಿವೆ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಡಿಸೆಂಬರ್ - ೨೦೧೫

ಸಂಪುಟ - ೧೬

ಸಂಚಿಕೆ - ೫

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್ (ರಿ)

ಮೇಲುಕೋಟೆ - 571431

ಮಂಡ್ಯ ಜಿಲ್ಲೆ

ಫೋನ್ : 9141700812

08236 - 299854

email : janapada@yahoo.com

Web: janapada.org

ಸೌಂದರ್ಯ ಸೂಕ್ತ

ಸುಂದರವಾಗಿರು: ಈ ಸೌಂದರ್ಯ,
ನಿನಗದೆ ಬಾಳಿನ ಸರ್ವೋತ್ತಮ ಕಾರ್ಯ!
ಸೌಂದರ್ಯವೆ ಶಿವಕರ್ತವ್ಯ;
ಸೌಂದರ್ಯವೆ ಸರ್ವೋತ್ತಮ ಗಂತವ್ಯ!
ಸೌಂದರ್ಯವೆ ಸತ್,
ಸೌಂದರ್ಯವೆ ಚಿತ್,
ಸೌಂದರ್ಯವೆ ಆನಂದ:
ಆ ಸಾಧನೆಗಾಗಿಯೆ ಈ ಸೃಷ್ಟಿಯ ಬಂಧ,
ಆ ಸಿದ್ಧಿಗೆ ಮಿಸಲು ಮುಕ್ತಿಯ ನಿತ್ಯಾನಂದ!

ಸುಂರವಾಗಿರು: ಈ ಸೌಂದರ್ಯ,
ಇಂದ್ರಿಯ ಸೌಂದರ್ಯ,
ಪ್ರಾಣದ ಸೌಂದರ್ಯ,
ಚಿತ್ತದ ಸೌಂದರ್ಯ,
ಆತ್ಮದ ಸೌಂದರ್ಯ,
ಈ ಸೌಂದರ್ಯವೆ ಜೀವನಪುರುಷಾರ್ಥದ
ಶಿವಕರ್ತವ್ಯ;
ಈ ಸೌಂದರ್ಯವೆ ಆ ಪುರುಷೋತ್ತಮ
ಚಿರಗಂತವ್ಯ!

ಸುಂದರವಾಗಿರು:
ಸೌಂದರ್ಯದ ಸೇವೆಯೆ ನೀ ಮಾಡುವ
ಮಹದುಪಕಾರ!
ಸುಂದರವಾಗಿರು:
ಸೌಂದರ್ಯದಿ ಸಿದ್ಧಿಪುದಾ ಭಗವತ್
ಸಾಕ್ಷಾತ್ಕಾರ!

— ಕುವೆಂಪು

(ಡಿಸೆಂಬರ್ ೨೯ ಕುವೆಂಪುರವರ ಜನ್ಮ ತಿಂಗಳು. ಅದರ ಸವಿನೆನಪಿಗಾಗಿ)

ಚಿಂತನೆಗೊಂದು ಸಂಗತಿ

ದೇಶದ ತುಂಬ ಸಹಿಷ್ಣುತೆ ಮತ್ತು ಅಸಹಿಷ್ಣುತೆಯ ಮಾತು ಕೇಳಿಬರುತ್ತಿದೆ. ಈ ಮಾತುಗಳು ಭಾರತದ ಸಂಸ್ಕೃತಿಯ ಮಟ್ಟಿಗೆ ವಿದೇಶೀ ವಿಚಾರಗಳು. ಏಕೆಂದರೆ ಆಚಾರ್ಯ ವಿನೋಬಾ ವ್ಯಾಖ್ಯಾನಿಸುವಂತೆ "ಹಿಂದೂ ಎಂದರೆ ಹಿಂಸೆಯಿಂದ ಯಾರ ಮನಸ್ಸು ದುಃಖಿಯಾಗುವುದೊ ಅವನು ಹಿಂದು ಎನಿಸುತ್ತಾನೆ". ಪ್ರಾಚೀನತಮವಾದ ಭಾರತದ ಯಾವ ಪಂಚಭೂತಗಳಲ್ಲಿಯೂ ಅಸಹಿಷ್ಣುತೆಯ ಗಂಧ ಇರುವುದಿಲ್ಲ. ಇಲ್ಲಿಯ ನೆಲ-ಜಲ-ಕಾಡು-ಪ್ರಕೃತಿ ಎಲ್ಲವೂ ಸಹಿಷ್ಣುತೆಗೆ ಜನ್ಮ ಕೊಟ್ಟಿದೆ ಮತ್ತು ಪೋಷಿಸಿವೆ ಹಾಗೂ ಬೆಳೆಸಿವೆ. ಪುರುಷಮ್ ಸೌಮ್ಯಂ ಪುರುಷತ್ವಮ್ ಸೌಮ್ಯತ್ವಂ ಎಂಬುದು ಈ ದೇಶದ ಮನುಷ್ಯನ ಸ್ವರೂಪದ ವರ್ಣನೆ. ಜ್ಞಾನದ ಭಂಡಾರಗಳಾದ ವೇದ ಮತ್ತು ಉಪನಿಷತ್ತುಗಳು ಸಹಿಷ್ಣುತೆಯನ್ನೇ ಸಾರಿವೆ. ಪರಬ್ರಹ್ಮ ಅನ್ವೇಷಕರಾಗಿದ್ದ ಋಷಿಗಳು ಪಿತಾ ಅಪಿತಾಭವತಿ, ಮಾತಾ ಅಮಾತಾ, ದೇವ ಅದೇವಾಃ, ವೇದಾ ಅವೇದಾಃ ಎಂದು ಹೇಳಿ ಇವೆಲ್ಲ ಮಿತಿಗಳನ್ನು ಮೀರಿ ಜ್ಞಾನ ಪಡೆಯಬೇಕು ಎಂಬ ಮಾತನ್ನು ಸಾರಿದ ಭಾರತದಲ್ಲಿ ಅಸಹಿಷ್ಣುತೆಯ ವಿಚಾರಕ್ಕೆ ಸ್ಥಳವೂ ಇಲ್ಲ ಅವಕಾಶವೂ ಇಲ್ಲ. ಆದರೆ ಈಗ ಈ ೨೧ನೇ ಶತಮಾನದ ಭಾರತದಲ್ಲಿ ಅಸಹಿಷ್ಣುತೆಯ ಮಾತು ಬಂದದ್ದೇಕೆ? ಪ್ರಜಾಪ್ರಭುತ್ವ ಆಡಳಿತ ಪದ್ಧತಿಯನ್ನು ಅಳವಡಿಸಿಕೊಂಡ ಮೇಲೆ, ರಾಜಕೀಯ ಪಕ್ಷಗಳ ಸ್ಪರ್ಧಾತ್ಮಕ ರಾಜಕೀಯ ಕಾರಣದಿಂದ ಪ್ರಾರಂಭವಾಯಿತು. ಯಾವ ರಾಜಕೀಯ ಪಕ್ಷಗಳು ಸಂವಿಧಾನವನ್ನು ಎತ್ತಿ ಹಿಡಿಯುವ ಮಾತನ್ನು ಆಡುತ್ತವೆಯೊ ಅವೇ ಸಂವಿಧಾನದ ಆಶಯಗಳನ್ನು ನಾಶಮಾಡುತ್ತಿವೆ. ತಾವು ಮಾಡುವ ರಾಜಕೀಯ ಕುಕಾರ್ಯಗಳಿಂದಾಗಿ ಉಂಟಾಗುವ ಸಾಮಾಜಿಕ ಕ್ಷೋಭೆಗಳಿಗೆ ಅಸಹಿಷ್ಣುತೆಯ ಆರೋಪವನ್ನು ಹೊರಿಸುವುದು ಎಷ್ಟು ಸಮಂಜಸ ಎಂಬುದು ಜ್ವಲಂತ ಚಿಂತನೆಯ ಸಂಗತಿಯಾಗಿದೆ.

ಹಿಂಸೆ X ಹಿಂಸೆ = ಅಹಿಂಸೆ?

– ಸುರೇಂದ್ರ ಕೌಲಗಿ

ಗಣಿತಶಾಸ್ತ್ರದ ಸೂತ್ರಾನ್ವಯವಾಗಿ ಒಂದು ಸಂಖ್ಯೆಯನ್ನು ಅದೇ ಸಂಖ್ಯೆಯ ಜೊತೆಗೆ ಗುಣಿಸಿದಲ್ಲಿ ಆ ಸಂಖ್ಯೆ ದ್ವಿಗುಣಗೊಳುತ್ತದೆ. ಉದಾಹರಣೆಗೆ 2×2=4 ಇತ್ಯಾದಿ. ಆದರೆ ಇಲ್ಲಿ ಹಿಂಸೆಯ ಬಗ್ಗೆ ಯೋಚಿಸುವಾಗ ಅದನ್ನು ಗಣಿತಶಾಸ್ತ್ರದ ಅನ್ವಯದಂತೆ ಪರಿಗಣಿಸದೆ ಅದೊಂದು ಮಾನವೀಯ ವಿಷಯವೆಂದು ಪರಿಗಣಿಸಲಾಗಿದೆ. ಇದುವರೆಗಿನ ಮಾನವನ ಅನುಭವದ ಪ್ರಕಾರ ಮತ್ತು ಇತಿಹಾಸದ ಪ್ರಕಾರ ಹಿಂಸೆಯಿಂದ ಹಿಂಸೆಯನ್ನು ತಡೆಯಲು ಹೋದಾಗ ಅಹಿಂಸೆಯ ಮತ್ತು ಶಾಂತಿಯ ವಾತಾವರಣ ಉಂಟಾದುದನ್ನು ಕಾಣುತ್ತೇವೆ. ಮೊದಲನೇ ಮಹಾಯುದ್ಧದಲ್ಲಿ ಆದ ಹಿಂಸೆಯ ಪರಿಣಾಮದಿಂದಾಗಿ ಜಗತ್ತಿನಲ್ಲಿ ಶಾಂತಿ ನೆಲೆಸುವಂತೆ ಮಾಡುವ ಪ್ರಯತ್ನದ ಅಂಗವಾಗಿ ಲೀಗ್ ಆಫ್ ನೇಷನ್ಸ್ ಹುಟ್ಟಿಕೊಂಡಿತು. ಆ ತರುವಾಯವು ಎರಡನೇ ಮಹಾಯುದ್ಧ ನಡೆಯಿತು. ಆ ಸಮಯದಲ್ಲಿ ಉಂಟಾದ ಭೀಕರ ಪ್ರಾಣಹಾನಿ ಮತ್ತು ಭೌತಿಕ ಹಾನಿಯನ್ನು ಗಮನಿಸಿ ಭವಿಷ್ಯದಲ್ಲಿ ಯುದ್ಧರಹಿತ ಜಗತ್ತನ್ನು ನಿರ್ಮಿಸುವುದಕ್ಕಾಗಿ ವಿಶ್ವರಾಷ್ಟ್ರ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯ ಕಾರಣದಿಂದಾಗಿ ಮೂರನೇ ಮಹಾಯುದ್ಧಕ್ಕೆ ಕಾರಣವಾಗಬಹುದಾಗಿದ್ದ ಅನೇಕ ಸಮಸ್ಯೆಗಳು ಮಾತುಕತೆಯ ಮೂಲಕ ಪರಿಹಾರಗೊಂಡಿವೆ. ಅಷ್ಟರ ಮಟ್ಟಿಗೆ ಶಾಂತಿ ನೆಲೆಸಿದೆ. ಇಂದೂ ಕೂಡ ಅನೇಕ ಅಂತರರಾಷ್ಟ್ರೀಯ ವಿವಾದಗಳು ವಿಶ್ವರಾಷ್ಟ್ರ ಸಂಸ್ಥೆಯ ಮುಂದೆ ಇವೆ. ಪರಿಹಾರಕ್ಕಾಗಿ ಚರ್ಚೆ ನಡೆಯುತ್ತಲೇ ಇದೆ. ಅಷ್ಟರ ಮಟ್ಟಿಗೆ ಯುದ್ಧಕ್ಕೆ ತಡೆಹಾಕಲಾಗಿದೆ. ಅಶೋಕ್ ಸಾಮ್ರಾಟನು ಕಳಿಂಗ ಯುದ್ಧದಲ್ಲಿ ಆದ ರಕ್ತಪಾತವನ್ನು ನೋಡಿ ಮುಂದೆ ಯುದ್ಧ ಮಾಡುವುದನ್ನೇ ನಿಲ್ಲಿಸಿದ. ಅಹಿಂಸಾ ಧರ್ಮವನ್ನು ಬೋಧಿಸುವ ಬೌದ್ಧಧರ್ಮವನ್ನು ಸ್ವೀಕರಿಸಿ ಅದರ ಪ್ರಚಾರ ಕೈಗೊಂಡ. ಮಹಾಭಾರತ ಯುದ್ಧದಲ್ಲಿ ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧಕ್ಕೆ ಸನ್ನದ್ಧರಾಗಿದ್ದ ಯೋಧರನ್ನು ನೋಡಿದ ಅರ್ಜುನ ಯುದ್ಧ ಸನ್ಯಾಸ ತೆಗೆದುಕೊಳ್ಳಲು ನಿಶ್ಚಯಿಸಿದ. ಅಲ್ಲಿ ನೆರೆದಿದ್ದವರೆಲ್ಲ ತನ್ನ ಬಂಧುಗಳೇ ಎಂದು ತಿಳಿದ ಅರ್ಜುನ ಅವರನ್ನು ಕೊಂದು ಯಾವ ಸುಖಕ್ಕೆ ರಾಜ್ಯವಾಳಬೇಕೆಂದು ಯೋಚಿಸಿ ತನ್ನ ಕೈಯಲ್ಲಿದ್ದ ಧನುಸ್ಸನ್ನು ಕೆಳಗೆ ಎಸೆದ. ಹಿಂಸೆಗೆ ಹಿಂಸೆ ಎದುರಾದಾಗ ಅಹಿಂಸೆಯ ವಿಚಾರ ಮನುಷ್ಯನ ಮನದಲ್ಲಿ ಬರುತ್ತದೆಂಬುದಕ್ಕೆ ಇವು ಕೆಲವು ಉದಾಹರಣೆಗಳು. ಈಗ ಜಗತ್ತಿನಲ್ಲಿ ಹಿಂಸೆಯ ವಿರುದ್ಧ ಹಿಂಸೆಯ ಪ್ರಯೋಗ ನಡೆಯುತ್ತಿದೆ. ಸಿರಿಯಾದಲ್ಲಿ ತನ್ನ ಕೇಂದ್ರವನ್ನು ಮಾಡಿಕೊಂಡಿರುವ ಇಸ್ಲಾಮಿಕ್ ಸ್ಟೇಟ್ ಎಂಬ ಧಾರ್ಮಿಕ ಮೂಲಭೂತವಾದಿ

ಸಂಸ್ಥೆ ಜಾಗತಿಕವಾಗಿ ಹಿಂಸಾಚಾರದಲ್ಲಿ ತೊಡಗಿದೆ. ಅಪಹರಿಸಿಕೊಂಡು ಹೋದ ಅಥವಾ ಸೆರೆಸಿಕ್ಕ ವ್ಯಕ್ತಿಗಳ ಶಿರಚ್ಛೇದಮಾಡುವುದು ಆ ಸಂಘಟನೆಗೆ ಸಹಜ ವೃತ್ತಿಯಾಗಿದೆ. ಅಮಾಯಕ ಮಕ್ಕಳನ್ನು ಮತ್ತು ಮಹಿಳೆಯರನ್ನು ನಿರ್ದಾಕ್ಷಿಣ್ಯವಾಗಿ ಸಾಯಿಸುತ್ತದೆ. ಆ ಸಂಘಟನೆಗೆ ಸೇರಿದವರಿಗೆ ಬುದ್ಧಿಯ ಸಮತೋಲನವನ್ನು ಕಳೆದುಕೊಳ್ಳುವಂಥ ಮದ್ಯವನ್ನು ಸೇವಿಸುವ ಚಟವನ್ನು ಅಂಟಿಸುತ್ತೊದೆ. ಆ ಮದ್ಯವನ್ನು ಸೇವಿಸಿದ ವ್ಯಕ್ತಿ ಸಾಕ್ಷಾತ್ ರಾಕ್ಷಸನೇ ಆಗುತ್ತಾನೆ. ತನ್ನ ವಿವೇಚನಾ ಶಕ್ತಿಯನ್ನು ಪೂರ್ಣವಾಗಿ ಕಳೆದುಕೊಳ್ಳುತ್ತಾನೆ. ತತ್‌ಪರಿಣಾಮವಾಗಿ ಅವನು ಎಂಥ ಹೇಯ ಕೃತ್ಯಗಳಿಗೂ ಸಿದ್ಧನಾಗುತ್ತಾನೆ. ಇಸ್ಲಾಮಿಕ್ ಸ್ಟೇಟ್ ಸಂಘಟನೆಯ ವಿರುದ್ಧ ವಿಶ್ವರಾಷ್ಟ್ರಸಂಸ್ಥೆ ಯುದ್ಧಸಾರಿದೆ. ಈಗಾಗಲೇ ಫ್ರಾನ್ಸ್ ಮತ್ತು ರಷ್ಯಾ ಮತ್ತು ಅಮೇರಿಕಾ ಆ ಸಂಘಟನೆಯ ನೆಲೆಗಳ ಮೇಲೆ ದಾಳಿಮಾಡಿವೆ. ಆ ಸಂಘಟನೆಗೆ ಸೇರಿದ ಸೈನಿಕರನ್ನು ಸಾಯಿಸಿವೆ. ಪಾಕಿಸ್ತಾನ ಈ ಸಂಘಟನೆಗೆ ತನ್ನ ನೈತಿಕ ಬೆಂಬಲ ಕೊಡುವುದರೊಂದಿಗೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುತ್ತಿದೆ, ಧನ ಸಹಾಯವನ್ನು ಮಾಡುತ್ತಿದೆ. ಬಾಂಗ್ಲಾ ದೇಶದಿಂದ ಕಳ್ಳತನದಿಂದ ಶಸ್ತ್ರಾಸ್ತ್ರಗಳು ಆ ಸಂಘಟನೆಯ ಸೈನಿಕರ ಕೈ ಸೇರುತ್ತಿವೆ. ಭಾರತವು ಸೇರಿದಂತೆ ಇನ್ನೂ ಕೆಲವು ದೇಶಗಳಲ್ಲಿಯ ಯುವಕ ಯುವತಿಯರು ಇಸ್ಲಾಮಿಕ್ ಸ್ಟೇಟ್ ಸಂಘಟನೆಗೆ ಸೇರುತ್ತಿದ್ದಾರೆ. ಹೀಗೆ ಹಿಂಸೆಯ ಜ್ವಾಲೆ ಜಗತ್ತನ್ನು ವ್ಯಾಪಿಸುತ್ತಿದೆ. ತುಂಬಾ ಇತ್ತೀಚೆಗೆ ರಷ್ಯಾಕ್ಕೆ ಸೇರಿದ ಯುದ್ಧ ವಿಮಾನವೊಂದನ್ನು ಸಿರಿಯಾವು ಹೊಡೆದುರುಳಿಸಿದೆ. ಈ ಕಾರಣದಿಂದಾಗಿ ರಷ್ಯಾ ಮತ್ತು ಟರ್ಕಿ ದೇಶದ ಸಂಬಂಧ ಕೆಟ್ಟು ಹೋಗಿದೆ. ಸಿರಿಯಾದಲ್ಲಿಯ ಅಧ್ಯಕ್ಷ ಬಷರ್ ಅಲ್ ಅಸಾದ್‌ನ ಆಳ್ವಿಕೆಯ ಸಮರ್ಥನೆ ಮತ್ತು ವಿರೋಧ ಮಾಡುತ್ತಿರುವ ರಷ್ಯಾ ಮತ್ತು ಅಮೇರಿಕಾದ ಮಧ್ಯೆ ಈಗ ತೀವ್ರತರ ಭಿನ್ನಾಭಿಪ್ರಾಯ ಉಂಟಾಗಿದೆ. ಆ ಎರಡು ರಾಷ್ಟ್ರಗಳ ಮಧ್ಯದ ಈ ಭಿನ್ನಾಭಿಪ್ರಾಯ ಯಾವ ಹಂತಕ್ಕೆ ಹೋಗಿ ಮುಟ್ಟುತ್ತದೆಂಬುದನ್ನು ಭವಿಷ್ಯವೇ ನಿರ್ಣಯಿಸಬೇಕು.

ಫ್ರಾನ್ಸ್ ಇಸ್ಲಾಮಿಕ್ ಸ್ಟೇಟ್ ವಿರುದ್ಧ ಯುದ್ಧವನ್ನು ಸಾರಿದೆ. ಜಗತ್ತಿನ ಬೇರೆಲ್ಲ ರಾಷ್ಟ್ರಗಳ ಸಹಾಯ ಕೋರಿದೆ. ರಷ್ಯಾ ಟರ್ಕಿಯ ಮೇಲೆ ಆರ್ಥಿಕ ದಿಗ್ಬಂಧನೆ ಮಾಡಿದೆ. ತನ್ನ ಯುದ್ಧ ವಿಮಾನವೊಂದನ್ನು ಟರ್ಕಿ ಹೊಡೆದುರುಳಿಸಿದ್ದಕ್ಕಾಗಿ ಈ ಪ್ರತಿರೋಧ ಮಾಡಿದೆ. ಈ ಎಲ್ಲಾ ಕಾರಣಗಳಿಂದಾಗಿ ಇಸ್ಲಾಮಿಕ್ ಸ್ಟೇಟ್ ಇನ್ನೂ ಹೆಚ್ಚು ಉಗ್ರರೂಪ ತಾಳುತ್ತಿದೆ. ಹೆಚ್ಚಿನ ಪ್ರತಿದಾಳಿಗಾಗಿ ಅವಕಾಶಗಳಿಗಾಗಿ ಹೊಂಚುಹಾಕುತ್ತಿದೆ. ಇದರ ಪರಿಣಾಮ ಹಿಂಸೆಗೆ ಪ್ರತಿ ಹಿಂಸೆ ಉಂಟಾಗುತ್ತಿದೆ. ಒಂದು ಯುದ್ಧವನ್ನು ನಿಲ್ಲಿಸುವುದಕ್ಕಾಗಿ ಇನ್ನೊಂದು ಯುದ್ಧ ಮಾಡಿದರೆ ಅದರ ಪರಿಣಾಮ ಮೂರನೆಯ ಯುದ್ಧಕ್ಕೆ ಕಾರಣವಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಹೀಗೆ ಹಿಂಸೆ ಬೆಳೆಯುತ್ತಾ ಹೋದರೇನೆ ಜಗತ್ತಿನಲ್ಲಿ ಅಹಿಂಸಾ ವಾತಾವರಣ

ಹುಟ್ಟಿಕೊಳ್ಳುವ ಸಾಧ್ಯತೆ ಇದೆ. ಅಹಿಂಸಾ ವ್ರತವನ್ನು ಪಾಲಿಸುವುದು ಕಷ್ಟಸಾಧ್ಯ. ಪರಸ್ಪರ ದ್ವೇಷ ಮತ್ತು ಪೈಪೋಟಿ ಇಟ್ಟುಕೊಂಡಿರುವ ದೇಶಗಳ ಸರ್ಕಾರಗಳಂತೂ ಅಹಿಂಸೆಯನ್ನು ಪಾಲಿಸುವುದು ಅತ್ಯಂತ ಕಷ್ಟಸಾಧ್ಯ. ಭಾರತ ಮತ್ತು ಪಾಕಿಸ್ತಾನದ ನಡುವೆ ಇರುವುದು ಮುಖ್ಯವಾಗಿ ಅವಿಶ್ವಾಸ ಮತ್ತು ಅಸಹಿಷ್ಣುತೆ. ಈ ಎರಡು ಅನಪೇಕ್ಷಿತ ಕಾರಣಗಳ ಬೆಂಕಿಗೆ ಎಣ್ಣೆ ಹಾಕಿದಂತೆ ಇರುವ ಎರಡು ದೇಶಗಳಲ್ಲಿಯ ಶಸ್ತ್ರಾಸ್ತ್ರ ಸಂಗ್ರಹ. ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದುವುದರಲ್ಲಿ ಎರಡೂ ದೇಶಗಳ ಮಧ್ಯೆ ತೀವ್ರತರವಾದ ಸ್ಪರ್ಧೆ ಇದೆ. ಎರಡೂ ದೇಶದ ಪ್ರಧಾನಿಗಳು ಅಮೇರಿಕಾ, ರಷ್ಯಾ, ಫ್ರಾನ್ಸ್, ಜರ್ಮನಿ ಮುಂತಾದ ದೇಶಗಳಿಗೆ ಭೇಟಿಕೊಟ್ಟಾಗ ಆ ದೇಶಗಳಿಂದ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ತಯಾರಿಕೆ ಮತ್ತು ಕೊಳ್ಳುವಿಕೆಗಳ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಗುತ್ತದೆಯೇ ವಿನಃ ನಮ್ಮ ನಮ್ಮಲ್ಲಿಯ ಶಸ್ತ್ರಾಸ್ತ್ರಗಳನ್ನು ಕಡಿಮೆಮಾಡಿಕೊಳ್ಳೋಣ ಎಂದು ಒಪ್ಪಂದ ಮಾಡಿಕೊಳ್ಳುವುದೇ ಇಲ್ಲ. ಜಗತ್ತನ್ನು ಹತ್ತಾರು ಸಲ ಭಸ್ಮಮಾಡಿಬಿಡುವಂಥ ಬಾಂಬುಗಳು ಈಗ ಎಲ್ಲ ದೇಶಗಳಲ್ಲಿವೆ. ಒಂದು ರೀತಿಯಲ್ಲಿ ಜಗತ್ತು ಜ್ವಾಲಾಮುಖಿಯ ಶಿಖರದ ಮೇಲೆ ಕುಳಿತಂತಿದೆ. ವಿನಾಶದ ಕತ್ತಿ ಅದರ ತಲೆಯ ಮೇಲೆ ಸದಾ ನೇತಾಡುತ್ತಿದೆ. ಇಂಥ ವಿಷ ಗಳಿಗೆಯ ಉದರದಿಂದಲೇ ಅಹಿಂಸೆ ಹುಟ್ಟುವ ಸಾಧ್ಯತೆ ಇದೆ. ಮೊದಲು ಶಾಂತಿಗಾಗಿ ಹಾತೊರೆಯುವಿಕೆ ಉಂಟಾಗಿ ನಂತರ ಅಹಿಂಸೆಯ ಉಗಮವಾಗಬಹುದೆಂದೆನಿಸುತ್ತದೆ. ಸಮುದ್ರಮಂಥನದ ಕಾಲದಲ್ಲಿ ವಿಷದ ನಂತರ ಅಮೃತವೂ ಬಂದಂತೆ ಹಿಂಸೆಗೆ ಪ್ರತಿ ಹಿಂಸೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಅಹಿಂಸೆ ಬರುತ್ತದೆ ಎಂದು ಆಶಿಸಬೇಕಾಗುತ್ತದೆ. ಇದಕ್ಕೂ ಮೊದಲು ಜಗತ್ತಿನಲ್ಲೆಲ್ಲಾ ವ್ಯಾಪಿಸಿರುವ ಧರ್ಮಾಂಧತೆಯನ್ನು ಹೋಗಲಾಡಿಸುವ ಪ್ರಯತ್ನ ಗಂಭೀರವಾಗಿ ನಡೆಯಬೇಕು. ಹಿಂಸೆಯನ್ನೇ ನಂಬಿ ಕಾರ್ಯಪ್ರವೃತ್ತರಾಗಿದ್ದ ನಕ್ಸಲೀಯರು ಇಂದು ಪರಿವರ್ತಿತಗೊಂಡು ಮುಖ್ಯವಾಹಿನಿಗೆ ಬರುತ್ತಿದ್ದಾರೆ. ಅವರೊಂದಿಗೆ ಸರ್ಕಾರ ನಡೆಸಿದ ಮಾತುಕತೆಗಳೂ ಸಹ ಇದಕ್ಕೆ ಕಾರಣವಾಗಿದೆ. ತೀವ್ರ ಭಿನ್ನಾಭಿಪ್ರಾಯವಿದ್ದರೂ ಪ್ರಚೋದನಕಾರಿ ಘಟನೆಗಳು ನಡೆಯುತ್ತಿದ್ದಾಗ್ಯೂ ಕೂಡ ಭಾರತ ಮತ್ತು ಪಾಕ್ ಮಾತುಕತೆಯ ಮೂಲಕ ದ್ವೇಷವನ್ನು ಶಮನಮಾಡಿಕೊಳ್ಳಲು ಪ್ರಯತ್ನಿಸುತ್ತಿವೆ. ದಕ್ಷಿಣ ಕೊರಿಯಾ ಮತ್ತು ಉತ್ತರ ಕೊರಿಯಾಗಳ ಮಧ್ಯೆ ಇದ್ದ ಅನೇಕ ವರ್ಷಗಳ ವೈರ ಹೋಗಿ ಮೈತ್ರಿ ಸ್ಥಾಪನೆಯಾಗಿದೆ. ಮಾತುಕತೆಗಳ ಮೂಲಕ ಎಂಥಾ ವೈರತ್ವವನ್ನೂ ಶಮನಮಾಡುವ ಸಾಧ್ಯತೆ ಇರುವಾಗ ಇಸ್ಲಾಮಿಕ್ ಸ್ಟೇಟ್‌ನ ಮುಖಂಡರೊಂದಿಗೆ ಮಾತುಕತೆ ನಡೆಸಬಹುದಲ್ಲವೆ. ಇಂಥ ಒಂದು ಸಲಹೆಯನ್ನು ಪೋಪ್ ಫ್ರಾನ್ಸಿಸ್ ನೀಡಿದ್ದಾರೆ. ಅವರ ಪ್ರಕಾರ " ಧಾರ್ಮಿಕ ನಾಯಕರು ಶಾಂತಿದೂತರಂತೆ ಕಾರ್ಯನಿರ್ವಹಿಸಬೇಕು. ಇಸ್ಲಾಮಿಕ್ ತೀವ್ರವಾದಿಗಳೊಂದಿಗೆ ಮಾತುಕತೆ ನಡೆಸಿ

ಅವರ ಮನದಲ್ಲಿ ಶಾಂತಿಯ ಬೀಜ ಬಿತ್ತಬೇಕು. ಹಿಂಸೆಯನ್ನು ಸಮರ್ಥಿಸಿಕೊಳ್ಳಲು ಧರ್ಮದ ಹೆಸರನ್ನು ಬಳಸುವುದು ಸರಿಯಲ್ಲ. ಯುವ ಮನಸ್ಸುಗಳಿಗೆ ಈ ವಿಷಯವನ್ನು ಅರ್ಥಮಾಡಿಸಬೇಕು". ಪೋಪರ ಈ ಸಲಹೆಯ ಸೂತ್ರವನ್ನು ಹಿಡಿದು ವಿಶ್ವರಾಷ್ಟ್ರ ಸಂಸ್ಥೆ ಇಸ್ಲಾಮಿಕ್ ಸ್ಟೇಟ್‌ನ ವಿಧ್ವಂಸಕರ ನೀತಿಯನ್ನು ಬದಲಾಯಿಸಿ ಮಾನವ ಧರ್ಮದ ಪುನಃ ಸ್ಥಾಪನೆಗೆ ಪ್ರಯತ್ನ ಮಾಡಬೇಕು. ಕನ್ನಡದ ರಾಷ್ಟ್ರಕವಿ ಕುವೆಂಪುರವರು ಪಾಕಿಸ್ತಾನ ಕುರಿತು ೧೯೬೫ರಲ್ಲಿ ಬರೆದ ಕವನ ಪಾಕಿಸ್ತಾನಕ್ಕೂ ಮತ್ತು ಇಸ್ಲಾಂ ಸ್ಟೇಟಿಗೂ ಹಾಗೂ ಇನ್ನಿತರ ಧರ್ಮಾಂಧರಿಗೂ ಅನ್ವಯವಾಗುವಂಥದ್ದಾಗಿದೆ. ಆ ಕವಿತೆಯನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಸಾಕಾಯಿತೆ ರಕ್ತಸ್ನಾನ?

ಸಾಕಾಯಿತೆ ರಕ್ತಸ್ನಾನ?
ಇನ್ನಾದರು ಬುದ್ಧಿಯ ಕಲಿ, ಓ ಪಾಕಿಸ್ತಾನ!
ಹಿತವನೆ ನಿನಗೆಂದಾದರು ಆ ಪ್ರಾಚೀನ,
ರಾಕ್ಷಸ ತೃಷ್ಣೆಯ ಖಲ ಚೀನ?
ಕೊನೆಗೂ ನಿನಗೆ ಸಹೋದರ – ಹಿಂದೂಸ್ತಾನ!

ದ್ವೇಷಕೆ ಹುಟ್ಟಿದೆ; ದ್ವೇಷದಿ ಬೆಳೆದೆ;
ದ್ವೇಷವ ಸಾಧಿಸೆ ವೈರವ ತಳೆದೆ.
ಸರ್ವಾಧಿಕಾರಕೆ ಬಲಿಯಾದೆ;
ಸರ್ವ ಧಿಕ್ಕಾರದಿ ಕಲಿಯಾದೆ;
ಗರ್ವಕೆ ತುತ್ತಾದೆ; ಲೋಕಕೆ ಕುತ್ತಾದೆ!
ಕಾಲ್ಕೆರೆದೆಯೆ ಕದನಕೆ ಬಂದೆ,
ಭರತನಂತೆ ಬಾಹುಬಲಿಯ ಮುಂದೆ!
ಎತ್ತಿ ನಿನ್ನಯ ಕುಕ್ಕಿ
ಹೊಟ್ಟೆಪಚ್ಚೆಯ ಹೊರಡಿಸಬಹುದಿತ್ತು.
ಆದರೆ ಸೋದರ ಬಾಹುಬಲಿ
ಕ್ಷಮಾ ಔದಾರ್ಯದ ಧೀರಕಲಿ!
ಇನ್ನಾದರು ಹಿತವರಾರೆಂದು ತಿಳಿ:
ಇನ್ನಾದರು ಬದುಕು, ಬುದ್ಧಿಯ ಕಲಿ!
ಓ ಪಾಕಿಸ್ತಾನ, ಸಾಕಾಯಿತೆ ರಕ್ತ ಸ್ನಾನ?

ಹಿಂಸೆಗೆ ಪ್ರತಿಹಿಂಸೆ ಬೆಳೆಯದೆ ಅಹಿಂಸೆ ಉದ್ಭವವಾಗಲೆಂದು ಎಲ್ಲರೂ ಹಾರೈಸೋಣ. ಜಗತ್ತಿಗೆಲ್ಲ ಜಯವಾಗಲಿ.

ಜಾಗತೀಕರಣ ಗ್ರಾಮಗಳ ಅಭಿವೃದ್ಧಿಗೆ ಪೂರಕವಾಗಿಲ್ಲ

– ಪ್ರಕಾಶ.ಎನ್

ಗಾಂಧಿ ಎಂಬ ಶಬ್ದದಲ್ಲಿ ದೊಡ್ಡ ವಿಸ್ಮಯವೇ ಇದೆ. ಭಾರತ ಮಾತ್ರವಲ್ಲದೇ ವಿಶ್ವದ ಪ್ರತಿಯೊಂದು ರಾಷ್ಟ್ರದಲ್ಲಿಯೂ ಇಂದಿಗೂ ನೆನಪಾಗುವ ವ್ಯಕ್ತಿ–ಶಕ್ತಿಯೇ ಮಹಾತ್ಮಗಾಂಧಿ. ಜಾಗತೀಕರಣದ ವ್ಯಾಖ್ಯಾನ ಎಲ್ಲರಿಗೂ ತಿಳಿದೇ ಇದೆ. ಆದರೆ ಪ್ರಸ್ತುತ ಆರ್ಥಿಕ ವ್ಯವಸ್ಥೆಯಲ್ಲಿ ಜಾಗತೀಕರಣದ ವ್ಯಾಖ್ಯೆ ವಿಸ್ತಾರವಾಗುತ್ತದೆ. ಜಾಗತೀಕರಣದ ವ್ಯಾಖ್ಯಾನಗಳಲ್ಲಿ ಒಂದು ನೆನಪಾಗುತ್ತದೆ. ಅದೆಂದರೆ 'ಒಂದು ವಿಶ್ವವೇ ಹಳ್ಳಿ ಇದ್ದಂತೆ'. ಆದರೆ ಹಳ್ಳಿ ಎಂಬ ಶಬ್ದವನ್ನು ಜಾಗತೀಕರಣದ ವ್ಯಾಖ್ಯಾನಕ್ಕೆ ಸೀಮಿತಗೊಳಿಸುತ್ತಿದ್ದೇವೆ ವಿನಃ ಗಾಂಧೀಜಿಯವರ ಪರಿಕಲ್ಪನೆಯ ಗ್ರಾಮೀಣ ಭಾರತದ ನಿರ್ಮಾಣ ಈ ಜಾಗತೀಕರಣದಿಂದ ಆಗುತ್ತಿದೆಯೇ ಎಂಬುದರ ವಿಮರ್ಶೆ ಆಗಬೇಕಿದೆ.

ಗಾಂಧಿಯವರ ಕನಸಿನ ಭಾರತ ಗ್ರಾಮೀಣ ಭಾಗದ ಅಭಿವೃದ್ಧಿಯಲ್ಲಿತ್ತು. ಗ್ರಾಮೀಣ ಭಾಗದಲ್ಲಿ ಸ್ವಾವಲಂಬನೆ ಸಾಧಿಸುವುದು ಅವಶ್ಯಕ. ಇದು ಸಾಧನೆ ಆಗಬೇಕಾದರೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯ ಮೂಲಕ ಉದ್ಯೋಗಾವಕಾಶಗಳು ಹೆಚ್ಚಳವಾಗಬೇಕು. ಇದರಿಂದ ಗ್ರಾಮೀಣ ಭಾಗದ ಜನರ ಅಭಿವೃದ್ಧಿ ಮತ್ತು ಸರ್ವ ಭಾರತದ ಅಭಿವೃದ್ಧಿ ಸಾಧ್ಯ ಎಂದು ಗಾಂಧಿಯವರ ಪ್ರತಿಪಾದನೆ–ಯಾಗಿತ್ತು. ಆದರೆ ಗ್ರಾಮೀಣ ಭಾರತದ ಅಭಿವೃದ್ಧಿಯಲ್ಲಿ ಜಾಗತೀಕರಣದ ಪ್ರಭಾವ ಶೂನ್ಯವೆನಿಸುತ್ತದೆ. ಜಾಗತೀಕರಣದ ಹೆಸರಿನಲ್ಲಿ ನಡೆಯುತ್ತಿರುವ ವಿದೇಶಿ ವ್ಯಾಪಾರ, ವಿದೇಶಿ ಹೂಡಿಕೆ, ಉತ್ಪಾದನಾಂಗಗಳ ಮುಕ್ತ ಚಲನೆ, ಪ್ರವಾಸಿಗರ ಹೆಚ್ಚಳ ಮತ್ತು ಪರಸ್ಪರ ಸಹಾಯ, ಅನುದಾನಗಳು, ನಗರ ಪ್ರದೇಶಗಳಿಗೆ ಹಾಗೂ ಸರ್ಕಾರದ ಬೊಕ್ಕಸಕ್ಕೆ ಸೀಮಿತವಾಗಿದೆ.

ಗಾಂಧಿಯವರು ಗುಡಿ ಕೈಗಾರಿಕೆಗಳು, ಸಣ್ಣ ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿ, ಖಾದಿ ಉದ್ಯಮದ ಮೂಲಕ ಸ್ವಯಂ ಉದ್ಯೋಗಿಗಳಾಗಿ ಜನರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಮೂಲಕ ಭಾರತದ ಅಭಿವೃದ್ಧಿ

ಆಗಬೇಕು ಎಂದು ಬಲವಾಗಿ ವಾದಿಸುತ್ತಿದ್ದರು. ಆದರೆ ಜಾಗತೀಕರಣದ ಪ್ರಭಾವದಿಂದ ಬೃಹತ್ ಕೈಗಾರಿಕೆಗಳು ಶೀಘ್ರವಾಗಿ ಬೆಳೆದು ಸಣ್ಣ ಕೈಗಾರಿಕೆಗಳಿಗೆ ಪೈಪೋಟಿ ನೀಡುತ್ತಾ ಅವುಗಳ ನಾಶಕ್ಕೆ ಕಾರಣವಾಗುತ್ತಿವೆ. ಗಾಂಧೀಜಿಯವರ ಮತ್ತೊಂದು ಪರಿಕಲ್ಪನೆ ಸ್ವದೇಶಿ ವ್ಯವಹಾರಕ್ಕೆ ಆದ್ಯತೆ ನೀಡುವುದು. ಅಂದರೆ ನಮ್ಮ ಜನರ ಅಗತ್ಯ ಸರಕು-ಸೇವೆಗಳನ್ನು ವಿದೇಶಗಳ ಮೇಲೆ ಅವಲಂಬಿತವಾಗದೇ ನಮ್ಮ ದೇಶದೊಳಗೆ ಉತ್ಪಾದಿಸಿ ವಿತರಿಸುವುದಾಗಿದೆ. ಗಾಂಧೀಜಿಯವರ ಈ ಕಲ್ಪನೆಯೇ ಪ್ರಸ್ತುತದಲ್ಲಿ ರೂಪಿತವಾಗಿರುವ"ಒಚಿಇಜ ಏಟಿ ಖಟಿಜುಚಿ"ಕಾರ್ಯಕ್ಕೆ ಬುನಾದಿ ಆಗಿದೆ. ಆದರೆ ಈ ಕಾರ್ಯದ ಮೂಲಕ ಮತ್ತು ವಿದೇಶಗಳನ್ನು ಅಥವಾ ವಿದೇಶಗಳ ನೇರ ಹೂಡಿಕೆಯನ್ನು ಅವಲಂಬಿಸುತ್ತಿರುವುದು ವಿಪರ್ಯಾಸವಾಗಿದೆ. ಪ್ರಸ್ತುತ ಕೇಂದ್ರ ಸರ್ಕಾರದ ಈ ಯೋಜನೆಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಉತ್ಪಾದನಾ ಚಟುವಟಿಕೆಗಳು ವಿಸ್ತರಣೆಯಾಗಿ ಗ್ರಾಮೀಣ ಜನರಿಗೆ ಉದ್ಯೋಗಾವಕಾಶಗಳು ಹೆಚ್ಚಾಗಬೇಕು. ಆದರೆ ಈ ಯೋಜನೆಯು ನಗರ ಕೇಂದ್ರಿತವಾಗುತ್ತಿರುವುದು ದುರಂತವಾಗಿದೆ.

ಗ್ರಾಮೀಣ ಭಾರತದ ಅಭಿವೃದ್ಧಿ ಉದ್ಯೋಗಾವಕಾಶಗಳ ಸೃಷ್ಟಿಯ ಮೇಲೆ ನಿಂತಿರುತ್ತದೆ ಎಂಬುದು ಗಾಂಧಿಯವರ ಚಿಂತನೆ ಆಗಿತ್ತು. ಇದಕ್ಕೆ ಪೂರಕವಾಗಿ ಅವರದೇ ಹೆಸರಿನಲ್ಲಿ ನಿರೂಪಿಸಿರುವ "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ"ಯ ಮಹತ್ವಪೂರ್ಣವಾದ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವ-ಕಾಶಗಳನ್ನು ಹೆಚ್ಚು ಮಾಡುವುದಾಗಿದೆ. ಆದರೆ ಜಾಗತೀಕರಣದ ಪ್ರಭಾವದಿಂದ ಬಂಡವಾಳ ಸಾಂದ್ರ ತಂತ್ರಜ್ಞಾನ ಹೆಚ್ಚಾಗಿದ್ದು ಈ ಕಾರ್ಯಕ್ರಮದಡಿಯಲ್ಲಿ ನಡೆಯುವ ಕಾಮಗಾರಿಗಳಲ್ಲಿ ಶ್ರಮಿಕರ ಬದಲಿಗೆ ಯಂತ್ರೋಪಕರಣಗಳನ್ನು ಬಳಸುತ್ತಿದ್ದು ಈ ಯೋಜನೆಯ ನಿಜವಾದ ಉದ್ದೇಶ ಈಡೇರಿಕೆಯಾಗುತ್ತಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ ಅಭಿವೃದ್ಧಿಶೀಲ ಭಾರತಕ್ಕೆ ಗಾಂಧೀಜಿಯವರ ಚಿಂತನೆಗಳು ವ್ಯವಸ್ಥಿತವಾಗಿ ಜಾರಿಗೆ ಬಂದು ಜಾಗತೀಕರಣದಿಂದಾಗುವ ದುಷ್ಪರಿಣಾಮಗಳನ್ನು ತಿಳಿದು ಸರ್ಕಾರಗಳ ನೀತಿಗಳಲ್ಲಿ ರಚನಾತ್ಮಕ ಬದಲಾವಣೆಗಳನ್ನು ತರುವುದು ಆಗತ್ಯವಾಗಿದೆ.

"ಇಸ್ಲಾಂಮಿಕ್ ಸ್ಟೇಟ್"ನ ಅಂತರರಂಗ ಮತ್ತು ಬಹಿರಂಗ

– ಸತ್ಯಪ್ರಿಯ

ದಿನಾಂಕ ೨೬ ಜೂನ್ ೨೦೧೫. ಉತ್ತರ ಆಫ್ರಿಕಾದ ಸಮುದ್ರತೀರದ ಟ್ಯುನೀಶಿಯಾ ಪ್ರಾಂತ್ಯದ 'ಸೋಜೀಪಟ್ಟಣ, ರಜಾದಿನದ ಆನಂದವನ್ನು ಸವಿಯಲು ಮೋಜುಗಾರರ ತಂಡಗಳು ಬಂದಿಳಿದಿವೆ. ಸಮುದ್ರ ತೀರದಲ್ಲಿರುವ ಹೋಟೆಲ್ ಒಂದರ ಭಾಗವಾಗಿದ್ದ ಪ್ರೈವೇಟ್ ಬೀಚ್‌ನಲ್ಲಿ ಮೋಜಿನಲ್ಲಿ ಜನರ ಗುಂಪು ಮೈಮರೆತಿದೆ. ಅಚಾನಕ್ಕಾಗಿ ಒಬ್ಬ ನವಯುವಕ ಅವತರಿಸುತ್ತಾನೆ. ತನ್ನ ಕೈಯಲ್ಲಿ ಹಿಡಿದಿದ್ದ ಕ್ಲೋಶ್ನಿಕೋವ್ ಬಂದೂಕಿನಿಂದ ಎರ್ರಾಬಿರ್ರಿಯಾಗಿ ಗುಂಡು ಹಾರಿಸುತ್ತಾನೆ. ಆಗ ಅಲ್ಲಿ ಬಿದ್ದ ಹೆಣಗಳ ಸಂಖ್ಯೆ ೩೮. ಹಾಹಾಕಾರ ಉಂಟಾಗುತ್ತದೆ. ಕಣ್ಣು ಮುಚ್ಚಿ ತೆರೆಯುವುದರೊಳಗಾಗಿ ಆ ರೆಸಾರ್ಟ್ ಖಾಲಿಯಾಗಿ ಬಿಡುತ್ತದೆ. ಸುರಕ್ಷಾ ಸಿಬ್ಬಂದಿಯವರ ಕಾರ್ಯಾಚರಣೆಯಲ್ಲಿ ಯುವಕ ಹತನಾಗುತ್ತಾನೆ. ಆದ್ರೆ ಅವನು ಯಾರು, ಅವನ ಉದ್ದೇಶ್ಯವೇನು ಎಂಬ ಪ್ರಶ್ನೆಗಳನ್ನು ಎಲ್ಲರ ಪಾಲಿಗೆ ಹಾಗೇ ಬಿಟ್ಟು ಹೋಗುತ್ತಾನೆ. ಬದುಕುಳಿದ ಕೆಲವರು, ಗುಂಡು ಹಾರಿಸುವ ಮುನ್ನ ತಾವು ಅವನನ್ನು ನೋಡಿದ್ದುದಾಗಿ ಹೇಳುತ್ತಾರೆ. ಅವರು ಹೇಳಿದ ಪ್ರಕಾರ ಆ ಯುವಕನು ಅಲ್ಲಿ ಅನೇಕರ ಜೊತೆ ಕಲೆತು – ಬೆರೆತು ಮಾತನಾಡುತ್ತಿದ್ದನು. ನಗುತ್ತ ನಲಿಯುತ್ತ ತಮಾಷೆಯಾಗಿ ಮಾತನಾಡುತ್ತ ಇದ್ದ ಅವನನ್ನು ಹಾವಭಾವಗಳನ್ನು ನೋಡಿದವರಾರಿಗೂ ಅವನು ಕೆಲವೇ ಕ್ಷಣಗಳಲ್ಲಿ ಜಘನ್ಯ ಕೃತ್ಯವೊಂದು ನಡೆಸಲಿದ್ದಾನೆ ಎಂಬುದರ ಸಣ್ಣ ಸುಳಿವೂ ಸಿಗುವಂತಿರಲಿಲ್ಲ. ತನಿಖಾ ತಂಡಗಳು ಹೇಳಿವಂತೆ ಅವನು ಜನರೊಂದಿಗೆ ಮಿಳಿತನಾಗಿ ತನ್ನ ಟಾರ್‌ಗೆಟ್‌ನ್ನು ಹುಡುಕುತ್ತಿದ್ದನು. ಅವನ ಬೇಟೆಯಲ್ಲಿ ಅತಿ ಹೆಚ್ಚಾಗಿದ್ದವರು ಬ್ರಿಟಿಷ್ ಹಾಗೂ ಫ್ರೆಂಚ್ ನಾಗರಿಕರಾಗಿದ್ದರು. ಶೂಟರ್‌ನ ಹೆಸರು ಸೈಫುದ್ದೀನ್ ರೇಜಗಿ. ಅವನೊಬ್ಬ ವಿದ್ಯಾರ್ಥಿಯಾಗಿದ್ದ. ಅವನೊಂದಿಗೆ ವ್ಯವಹರಿಸುವವರು ಅವನು ಇಂಥಹ ಭಯಾನಕ ಕೃತ್ಯ ನಡೆಸಬಹುದೆಂದು ಆಲೋಚಿಸಲೂ ಸಾಧ್ಯವಿರಲಿಲ್ಲ. ಇವನು ಯಾವ ಭಯೋತ್ಪಾದಕ ಸಂಘಟನೆಯೊಂದಿಗೆ ಸಂಬಂಧಿಸಿದ್ದನು? ಹೌದು, ಇದೇ ಉಗ್ರವಾದದ ಹೊಸ ಚಹರೆ, ಪ್ರಪಂಚದ ಆತಂಕದ ಹೊಸ ಪ್ರವಾದಿಯ ಸಂದೇಶ. ಇದರ ಹೆಸರೇ ಇಸ್ಲಾಮಿಕ್ ಸ್ಟೇಟ್ ಆಫ್ ಸಿರಿಯಾ ಅಂಡ್ ಇರಾಕ್ ಅಂದರೆ ಐಸಿಸ್.

ಕಳೆದ ಹಲವು ದಶಕಗಳಿಂದ ವಿಶ್ವವು ಆತಂಕದ ಅಥವಾ ಭಯೋತ್ಪಾದನೆಯ

ಅನೇಕ ಆಘಾತಗಳನ್ನು ಎದುರಿಸಿದೆ. ಆದರೂ ಇದರ ನಿಯಂತ್ರಣದಲ್ಲಿ ಕಿಂಚಿತ್ತಾದರೂ ಸಫಲತೆ ಅಭಿಸಿದಂತೆ ಕಾಣುವುದಿಲ್ಲ. ವಸ್ತುತಃ ಎಲ್ಲಾ ಕಾರ್ಯಗಳಿಗೂ ಕಾರಣ ಇದ್ದೇ ಇರುತ್ತದೆ. ಕಾರಣದ ನಾಶವಾಗುವವರಗೂ ಕಾರ್ಯದ ಅಂದರೆ ಭಯೋತ್ಪಾದನೆಯ ಅಸ್ತಿತ್ವ ಇದ್ದೇ ಇರತ್ತದೆ. ಯಾವ ಜನರು ವ್ಯಕ್ತಿಯೊಬ್ಬನ ಅಥವಾ ಸಮುದಾಯದ ಅತ್ಯಾಚಾರಕ್ಕೊಳಗಾಗುತ್ತಾರೋ ಅವರು ಬಂಡಾಯವೆದ್ದು ಮಾಡುವ ಕಾರ್ಯಾಚರಣೆಯನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಆದರೆ ಇಂತಹ ಕಾರ್ಯಾಚರಣೆಯ ಸಂದರ್ಭದಲ್ಲಿ ನಿರ್ದೋಷಿಗಳ ಹತ್ಯೆ, ಸಂಬಂಧಪಡದ ಪ್ರದೇಶಗಳ ಮೇಲಿನ ದಾಳಿಯಿಂದ ಆಗುವ ಹತ್ಯೆಗಳು ನಡೆದಾಗ ಇದರ ಹಿಂದೆ ಯಾವ ವಿಚಾರಧಾರೆ ಕೆಲಸ ಮಾಡುತ್ತಿದೆ ಎಂಬುದು ವಿಶ್ಲೇಷಣಾತ್ಮಕ ವಿಷಯ. ದೇವರ ಅಸ್ತಿತ್ವ, ವ್ಯಕ್ತಿಯ ಸುತ್ತಲೂ ಸ್ಥಾಪಿತ ಮಾನ್ಯತೆಗಳು ಬೇಕಾದರೆ ಆ ವ್ಯಕ್ತಿಯ ಸ್ವಂತ ಆಚರಣೆಯೊಂದಿಗೆ ಸಂಬಂಧಿಸಿದುದಾಗಲಿ, ಉಪಾಸನೆಯೊಂದಿಗೆ ಅಥವಾ ಸಾಮಾಜಿಕ ಜೀವನದೊಂದಿಗೆ ಸಂಬಂಧಿಸಿದುದಾಗಲಿ ಇವುಗಳಲ್ಲಿ ವಿಭಿನ್ನತೆ ಕಂಡುಬರುತ್ತದೆ. ಪ್ರತಿಯೊಬ್ಬನೂ ತನ್ನ ಹಾಗೂ ತನ್ನ ಸಮುದಾಯದ ಚಿಂತನೆಯನ್ನೇ ಸರಿಯೆಂದು ತಿಳಿಯುತ್ತಾನೆ; ಅದನ್ನೇ ಬೇರೆಯವರೂ ಅನುಸರಿಸಲಿ, ತನ್ಮೂಲಕ ಇಂಥಹ ಚಿಂತನೆಯವರ ಸಂಖ್ಯೆ ಬೆಳೆಯಲಿ ಎಂದು ಬಯಸುತ್ತಾನೆ. ಮಾನವನ ಮನೋವಿಜ್ಞಾನವನ್ನು ನೋಡಿದರೆ ಇಲ್ಲಿಯವರೆಗೆ ಯಾವುದೇ ಅಚ್ಚರಿಯಿಲ್ಲ. ಆಧ್ಯಾತ್ಮಿಕ, ದಾರ್ಶನಿಕ, ಸಾಮಾಜಿಕ ಮೊದಲಾದವುಗಳ ದೃಷ್ಟಿಯಿಂದ ಒಂದೇ ರೀತಿಯ ವಿಚಾರ ಮಾಡುವವರನ್ನು ಸ್ಥೂಲವಾಗಿ ಮತ, ಮಜಹಬ್, ರಿಲಿಜನ್ ಎಂಬ ಹೆಸರಿನಿಂದ ಕರೆದರೆ, ತಮ್ಮ ಮತ ಬೆಳೆಯಲೆಂದೇ ಪ್ರತಿಯೊಬ್ಬರೂ ಬಯಸುತ್ತಾರೆ. ಆದರೆ ಈ ವೃದ್ಧಿ ಹೇಗಾಗಬೇಕೆಂಬುದೇ ಮುಖ್ಯ ಸಂಗತಿ. ಭಾರತದ ಪರಿಪ್ರೇಕ್ಷದಲ್ಲಿ ನೋಡಿದರೆ ವಿಚಾರಗಳ ಭಿನ್ನತೆಗೆ ಇಲ್ಲಿ ಕೊರತೆಯೇ ಇಲ್ಲ. ಅವರಲ್ಲಿ ಪರಸ್ಪರ ದ್ವೇಷವಿರುವುದನ್ನೂ ಕಾಣುತ್ತೇವೆ. ವಾಣಿ ಹಾಗೂ ಲೇಖನಗಳಿಂದ ವಿಷವಮನವೂ ನಡೆದಿದೆ. ಎಲ್ಲೋ ಒಂದೆರಡು ಅಪವಾದಗಳನ್ನು ತ್ಯಜಿಸಿದರೆ ತನ್ನದರ್ಶನವನ್ನೂ ಒಪ್ಪುವಂತೆ ಮಾಡುವ ಒತ್ತಾಯದ ಪದ್ಧತಿ ಇಲ್ಲಿ ಇಲ್ಲ. ವಿಚಾರ ವಿನಿಮಯ ಅಥವಾ ಶಾಸ್ತ್ರಾರ್ಥ ಭಾರತಭೂಮಿಯ ಪ್ರಿಯ ವಿಷಯವಾಗಿದೆ. ಇದೇ ಮನುಷ್ಯ ಜೀವನದ ಶೋಭೆಯೂ ಆಗಿದೆ. ಖಡ್ಗ ಅಥವಾ ಬಲಪ್ರಯೋಗದಿಂದ ಮತದ ಪ್ರಚಾರದ ಪರಂಪರೆ ಶತಮಾನಗಳ ಕಾಲ ಭಾರತೇತರ ವಿಶ್ವದಲ್ಲಿತ್ತು. ಕ್ರೂಸೇಡ್, ಜಿಹಾದ್‌ಗಳು ಇದರ ಉದಾಹರಣೆ.

ಭಾರತ ವಿಭಜನೆಯ ನಂತರ ಭಾರತ ಭೂಮಿಯ ಮೇಲೆ ಅಧಿಕಾಂಶ ಭಯೋತ್ಪಾದನೆಯ ಆಕ್ರಮಣ ಪಾಕಿಸ್ತಾನದ ಮೂಲಕ ಪ್ರಾಯೋಜಿಸಲ್ಪಟ್ಟಿದೆ. ಇದರಲ್ಲಿ ಮತ ಪ್ರಚಾರಕ್ಕಿಂತಲೂ ದ್ವೇಷ ಹಾಗೂ ರಾಜನೀತಿಯೇ ಪ್ರೇರಕವಾಗಿದೆ. ಆದರೆ

ಇದನ್ನು ಸಾಧಿಸಲು ಪಾಕಿಸ್ತಾನವು ಭಯೋತ್ಪಾದಕರನ್ನು ತಯಾರಿಸಲು, ಅವರನ್ನು ಮತಾಂಧರನ್ನಾಗಿ ಮಾಡಲು ಅವರಿಗೆ ಅಲ್ಲಾಹ್‌ನ ಕಾರ್ಯಮಾಡುತ್ತಿದ್ದೇವೆಂಬ ಮತೀಯ ಭಾವನೆಯನ್ನು ಮುಕ್ತವಾಗಿ ಉಪಯೋಗಿಸಿಕೊಂಡಿತು. ಈಗ ವಿಶ್ವದೆಲ್ಲೆಡೆ ಹೆಚ್ಚುತ್ತಿರುವ ಉಗ್ರರ ಆಕ್ರಮಣದಲ್ಲಿ ಮತೀಯ ಮಾನಸಿಕತೆ ಹೆಚ್ಚುತ್ತಿದೆ. ಏಕೆಂದರೆ ಉನ್ಮಾದದ ಪಾರಮ್ಯವನ್ನು ಸ್ಪರ್ಶಿಸುವ ಉಗ್ರವಾದಿಗಳನ್ನು ತಯಾರಿಸುವ ಕಾರ್ಯಾಗಾರಗಳು ಸಿದ್ಧವಾಗುತ್ತಿವೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಒಸಾಮಾ ಬಿನ್ ಲಾಡೆನ್‌ನಿಗೆ ತನ್ನದೇ ಆದ ಒಂದು ಸಾಮ್ರಾಜ್ಯ ಇರಲಿಲ್ಲ. ಅವನು ಇತರ ದೇಶಗಳ ನೆಲದಿಂದಲೇ ತನ್ನ ಭಯೋತ್ಪಾದನೆಯ ವ್ಯಾಪಾರವನ್ನು ನಡೆಸುತ್ತಿದ್ದನು. ಈ ಸಂದರ್ಭದಲ್ಲಿ ಐ.ಎಸ್.ಐ.ಎಸ್. ಈವರೆಗಿನ ಎಲ್ಲ ಉಗ್ರ ಸಂಘಟನೆಗಳಿಗಿಂತ ಭಿನ್ನವಾಗಿದೆ, ಅಧಿಕ ಇಸ್ಲಾಮೀಯವಾಗಿದೆ. ಅಧಿಕ ವ್ಯಾಪಕ ಮತ್ತು ಎಲ್ಲಕ್ಕಿಂತ ಹೆಚ್ಚು ಅಪಾಯಕಾರಿಯಾಗಿದೆ. ಸ್ವಯಂ ಐಸಿಸ್‌ನ ಕರ್ತೃ, ಧರ್ತೃಗಳ ನಂಬಿಕೆಯಂತೆ ಇತರ ಉಗ್ರ ಸಂಘಟನೆಗಳು ಇಸ್ಲಾಮೀಯವಲ್ಲ. ಶುದ್ಧ ಇಸ್ಲಾಮನ್ನು ತಮ್ಮ ದೃಷ್ಟಿಯಿಂದ ಯಾರೂ ಪ್ರವರ್ತಿಸುತ್ತಿಲ್ಲ; ಮುಸ್ಲಿಮರೆಂದು ಕರೆದುಕೊಳ್ಳುವ ದೇಶಗಳು ಶುದ್ಧ ಇಸ್ಲಾಮೀಯವಲ್ಲ. ಆದ್ದರಿಂದ ಈ ಹೊಣೆಯನ್ನು ತಾವು ನಿರ್ವಹಿಸುತ್ತಿದ್ದೇವೆ. ಆದ್ದರಿಂದ ತಮ್ಮ ಕಾರ್ಯಪದ್ಧತಿ ಶುದ್ಧ ಇಸ್ಲಾಮಿಕ್ ಆಗಿದೆ. ಈ ವಿಚಾರಧಾರೆಯನ್ನು ಅನೇಕ ವೀಡಿಯಾಗಳ ಮೂಲಕ ಮುಕ್ತವಾಗಿ ಪ್ರಚಾರ ಮಾಡುತ್ತಿದ್ದಾರೆ. ಅವರ ರಿಕ್ರೂಟಿಂಗ್ ಏಜೆಂಟ್ಸ್ ಅನೇಕ ಕಡೆಗಳಲ್ಲಿ ಕಾರ್ಯಗೈಯುತ್ತಿದ್ದಾರೆ. ಜಗತ್ತಿನ ಎಲ್ಲೆಡೆಗಳಿಂದ ಐ.ಎಸ್.ಐ.ಎಸ್‌ನಲ್ಲಿ ಸೇರಲು ನೂರಾರು ಅಲ್ಲ, ಸಾವಿರಾರು ಜನಯುವಕರು ಸಿರಿಯಾ ತಲುಪುತ್ತಿದ್ದಾರೆ ಎಂಬುದು ಅತಿ ದೊಡ್ಡ ಚಿಂತಾಜನಕ ಸಂಗತಿ.

ಐಎಸ್‌ಐಎಸ್, ಇಸ್ಲಾಮಿಕ್ ಸ್ಟೇಟ್‌ನಲ್ಲಿ ಖಿಲಾಫತ್‌ನ ಸ್ಥಾಪನೆ ಮಾಡುವುದು ಅತ್ಯಾವಶ್ಯಕವೆಂದು ತಿಳಿಯುತ್ತದೆ, ಆದ್ದರಿಂದ ತಮ್ಮ ವಶದಲ್ಲಿ ಯಾವುದಾದರೂ ಭೂಭಾಗ ಇರಬೇಕಂದು ಭಾವಿಸುತ್ತಾರೆ. ಈಗ ಸಿರಿಯಾದ ಒಂದು ಭೂಪ್ರದೇಶದ ಮೇಲೆ ಐಎಸ್‌ಐಎಸ್‌ನ ಅಧೀನವಾದ ಕೂಡಲೇ ಅದರ ಪ್ರಮುಖ ಬಗ್ದಾದಿಯು ತನ್ನನ್ನು ಖಲೀಫನೆಂದು ಘೋಷಿಸಿಕೊಂಡು ಅದರ ನಾಮಕರಣವನ್ನು ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಅಂಡ್ ಸಿರಿಯಾ(ಐ.ಎಸ್.ಐ.ಎಸ್) ಎಂದು ಮಾಡಿದ್ದಾನೆ. ಇದು ವಿಶ್ವದ ಅತ್ಯಂತ ಕ್ರೂರ ಸಂಘಟನೆ. ತಲೆ ಕತ್ತರಿಸುವುದರ ವೀಡಿಯೋ ತೋರಿಸಿ ಜನರ ಮನದಲ್ಲಿ ಭಯ ಹುಟ್ಟಿಸುವುದು ಇವರ ಯೋಜನೆಯ ಒಂದು ಭಾಗವಾಗಿದೆ.

ಐ.ಎಸ್.ಐ.ಎಸ್ ಬೇರೆ ಮತ-ಸಂಪ್ರದಾಯಗಳೊಂದಿಗೆ ಹೇಗೆ ವರ್ತಿಸುತ್ತದೆ ಎಂಬುದು ಗಮನಾರ್ಹವಾದ ವಿಷಯವಾಗಿದೆ. ಇರಾಕ್‌ನ ಒಂದು ಪಟ್ಟಣ ಕಾರ್‌ಕೋಶ್. ಅಲ್ಲಿ ಕ್ರೈಸ್ತರ ಬಾಹುಳ್ಯವಿದೆ. ಐ.ಎಸ್.ಐ.ಎಸ್, ಆಗಸ್ಟ್ ೨೦೧೪ರಲ್ಲಿ ಇವರಿಗೆ

ವಿದ್ಯುತ್ತು, ನೀರು, ಖಾದ್ಯ ಪದಾರ್ಥಗಳ ಸರಬರಾಜನ್ನು ನಿಲ್ಲಿಸಿತು. ನೀವು ಇಸ್ಲಾಮನ್ನು ಸ್ವೀಕರಿಸಿ ಇಲ್ಲವೇ ಸಾಯಲು ಸಿದ್ಧರಾಗಿ ಎಂದು ಕ್ರೈಸ್ತರಿಗೆ ಹೇಳಲಾಯಿತು. ಐಎಸ್‌ಐಎಸ್ ವಿಚಾರಧಾರೆಯಲ್ಲಿ ಒಂದು ವಿಷಯ ಎದ್ದು ಕಾಣುತ್ತಿದೆ. ಅದೇನೆಂದರೆ ಮುಸ್ಲಿಮರಾಗಿದ್ದೂ ಇಸ್ಲಾಮಿನ ನಿಯಮಗಳನ್ನು ಪಾಲನೆ ಮಾಡದವರಿಗೆ ಯಾವುದೇ ರಿಯಾಯಿತಿಯನ್ನು ಅವರು ನೀಡುವುದಿಲ್ಲ. ಅವರಿಗೆ ಕ್ರೈಸ್ತರಿಗೆ ನೀಡಿದಂತೆ ಯಾವುದೇ ಚಾಯ್ಸ್‌ನ್ನು ನೀಡಲಾಗುವುದಿಲ್ಲ. ಈ ರೀತಿ ಧರ್ಮಭ್ರಷ್ಟರಾದ ಮುಸ್ಲಿಮರಿಗೆ ಚಿ೦ಥ- ಣಚಿಣಜ ಎಂದು ಕರೆಯಲಾಗುತ್ತಿದ್ದು, ಸ್ವತಃ ಯಾವುದೇ ವಿಚಾರಣೆಯಿಲ್ಲದೆ ಅವರಿಗೆ ಮೃತ್ಯುದಂಡ ನೀಡಲಾಗುವುದು. ಸಿರಿಯಾದ ಐಎಸ್‌ಐಎಸ್‌ನ ಅಧಿಕೃತ ಕ್ಷೇತ್ರದ ಕ್ರೈಸ್ತರಿಗೆ ಅಧೀನತೆಯನ್ನು ಸ್ವೀಕಾರ ಮಾಡುವ ಹಾಗೂ ಜಜಿಯಾ ತೆರಿಗೆಯನ್ನು ಸಲ್ಲಿಸುವ ಕರಾರಿನ ಮೇಲೆ ಅವರನ್ನು ಬದುಕಲು ಬಿಟ್ಟಿದ್ದಾರೆ. ಭಾರತದಲ್ಲಿ ಔರಂಗಜೇಬನು ಹಿಂದೂಗಳ ಮೇಲೆ ವಿಧಿಸಿದ್ದ ತೆರಿಗೆ ಇದೇ ಆಗಿತ್ತು. ಐಎಸ್‌ಐಎಸ್ ಕೇವಲ ಒಂದು ಭಯೋತ್ಪಾದನೆಯ ಸಂಘಟನೆಯಾಗಿರದೆ ವಿಶ್ವದ ಬಹುದೊಡ್ಡ ಭೂಪ್ರದೇಶವನ್ನು ಆವರಿಸಿದ ವಿಶುದ್ಧ ಇಸ್ಲಾಮೀ ಸಾಮ್ರಾಜ್ಯ ಸ್ಥಾಪನೆಯ ಉದ್ದೇಶ್ಯವನ್ನು ಹೊಂದಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಅವರು ೭ನೆಯ ಶತಮಾನದ ಇಸ್ಲಾಮನ್ನು ಯಥಾವತ್ತಾಗಿ ತಮ್ಮ ಈ ಅಧಿಕೃತ ಕ್ಷೇತ್ರದಲ್ಲಿ ಜಾರಿಮಾಡಲು ಬಯಸುತ್ತಾರೆ. ಅಷ್ಟೇ ಅಲ್ಲ, ಅವರು ೨೦೨೦ರ ಒಳಗಾಗಿ ತಮ್ಮ ಗುರಿಯನ್ನು ತಲುಪುವ ಬಗ್ಗೆ ಅಪಾರ ಆಶಾವಾದಿಗಳಾಗಿದ್ದಾರೆ.

ಜನ ಸಾಮಾನ್ಯರಿಗೆ ಇದು ತಿರುಕನ ಕನಸಿನಂತೆ ಕಾಣಬಹುದು. ಆದರೆ ಆ ಸಂಘಟನೆಯ ಪ್ರಮುಖರಿಗೆ ಈ ಬಗ್ಗೆ ಪೂರ್ಣ ವಿಶ್ವಾಸವಿದೆ. ಅದಕ್ಕಾಗಿ ಅವರು ಒಂದು ನಕಾಶೆಯನ್ನು ರೂಪಿಸಿದ್ದು ೨೦೨೦ರ ಒಳಗಾಗಿ ಸ್ಥಾಪನೆಯಾಗುವ ಇಸ್ಲಾಂ ಸಾಮ್ರಾಜ್ಯದ ಗಡಿಗಳನ್ನು ಗುರುತಿಸಿದ್ದಾರೆ. ಪಶ್ಚಿಮದ ಸ್ಪೈನ್‌ನಿಂದ ಹಿಡಿದು ಪೂರ್ವದಲ್ಲಿ ಚೀನಾದ ತನಕ ಈ ಸಾಮ್ರಾಜ್ಯ ವ್ಯಾಪಿಸಿರುತ್ತದೆ. ಇದರಲ್ಲಿ ಭಾರತವೂ ಸೇರಿದೆ. ಇಂದು ಜಗತ್ತಿನ ಎಲ್ಲ ದೇಶಗಳು ಹಿಂಸೆಯನ್ನು ಯುದ್ಧವನ್ನು ತ್ಯಜಿಸುವುದು ಅನಿವಾರ್ಯ ಧರ್ಮವೆಂದು ತಿಳಿಯುತ್ತಿವೆ. ಆದರೆ ಐಎಸ್‌ಐಎಸ್‌ನ ವಿಚಾರದಲ್ಲಿ ಯುದ್ಧ ಮತ್ತು ಹಿಂಸೆಯನ್ನು ಅಪರಿಹಾರ್ಯ ಹಾಗೂ ಇಸ್ಲಾಂ ಸಮರ್ಥಿತ ಎಂದು ಹೇಳುವುದರಲ್ಲಿ ಯಾವುದೇ ಸಂಕೋಚವನ್ನು ತೋರುವುದಿಲ್ಲ. ಕ್ರೌರ್ಯ ಅವರ ಬಳಿಯ ಶೋಭೆ ಹಾಗೂ ಕರ್ತವ್ಯ. ನಿರಪರಾಧೀ, ನಿಃಶಸ್ತ್ರ ಜನರ ತಲೆ ಕಡಿಯುವ ಹಾಗೂ ಅವರ ಕೈಗಳನ್ನು ಹಿಂದಕ್ಕೆ ಕಟ್ಟಿ ಗುಂಡು ಹಾರಿಸಿ ಅವರನ್ನು ಕ್ಷತವಿಕ್ಷತರನ್ನಾಗಿ ಮಾಡುವ, ವೀಡಿಯೋಗಳಲ್ಲಿನ ಅವರ ಕ್ರೌರ್ಯ ಹಾಗೂ ಮುಖಮುದ್ರೆಗಳು ಬಹಳಷ್ಟನ್ನು ಸಾರುತ್ತಿವೆ. ತಮ್ಮ ರಣನೀತಿಯ ನಿರ್ಮಾಣದಲ್ಲಿ ಅವರಿಗೆ ಹಾನಿಯುಂಟಾದರೂ ಅವರ ದೃಷ್ಟಿಯಲ್ಲಿ ಯಾವುದು ಇಸ್ಲಾಂನ ಸರಿಯಾದ ವ್ಯಾಖ್ಯಾನವೆಂದು

ಕಂಡುಬಂದಿದೆಯೋ ಅದನ್ನು ಬಿಡಲು ತಯಾರಿಲ್ಲ. ಕುರ್ದಿಸ್ತಾನದ ರಾಜಧಾನಿ ಎರ್ಬಿಲ್‌ನ ಕಡೆಗೆ ಸೈನ್ಯವನ್ನು ನಡೆಸಿ ಅದನ್ನು ವಶಕ್ಕೆ ತೆಗೆದುಕೊಳ್ಳಲು ಎರ್ಬಿಲ್‌ನಲ್ಲಿ ಅಮೆರಿಕಾದ ನಾಗರೀಕರು ಭಾರೀ ಸಂಖ್ಯೆಯಲ್ಲಿದ್ದಾರೆಂದೂ ಅವರ ಈ ಹೆಜ್ಜೆ ಅಮೆರಿಕಾ ಯುದ್ಧಕ್ಕೆ ಧುಮುಕಲು ಆಹ್ವಾನ ನೀಡಿದಂತಾಗುವುದೆಂದು ಅವರಿಗೆ ಗೊತ್ತಿತ್ತು. ಆದರೆ ಅವರು ಯುದ್ಧದಿಂದ ವಿರತರಾಗಲಿಲ್ಲವೆಂಬುದು ಅಮೆರಿಕಾದ ಇಬ್ಬರು ಪತ್ರಕರ್ತರಾದ ಜೇಮ್ಸ್ ಫೌಲಿ ಮತ್ತು ಸ್ಟೀವನ್‌ರ ತಲೆಗಳನ್ನು ಕತ್ತರಿಸಿ ಅದನ್ನು ವೀಡಿಯೋ ಮಾಡಿರುವುದರಿಂದ ತಿಳಿಯಬಹುದು. ಇರಾಕ್‌ನ ಸಿಂಜಾರ್ ಪ್ರಾಂತ್ಯದಲ್ಲಿ ೨ಲಕ್ಷದ ಜನಸಂಖ್ಯೆಯಲ್ಲಿ ಹೆಚ್ಚಿನವರು ಅಲ್ಪಸಂಖ್ಯಾತ ಮಜಹಬ್‌ನ್ನು ನಂಬುವ 'ಯಜೀದಿ'ಗಳು. ಐಎಸ್‌ಐಎಸ್ ಆಗಸ್ಟ್ ೩, ೨೦೧೪ಕ್ಕೆ ಸಿಂಜಾರ್ ಮೇಲೆ ಆಕ್ರಮಣ ಮಾಡಿ ತನ್ನ ವಶಕ್ಕೆ ತೆಗೆದುಕೊಂಡಿತು. ಸುಮಾರು ೨೦,೦೦೦ ಯಜೀದಿಗಳು ಸಿಂಜಾರ್ ಪರ್ವತದ ಮೇಲೆ ಆಶ್ರಯಪಡೆದಿದ್ದಾರೆ. ಅವರ ಜೊತೆ ನಡೆಸುವ ಕ್ರೂರ ವ್ಯವಹಾರವು ಎದೆ ನಡುಗಿಸುವಂತಹುದು. ಕುರ್ದಿಶ್ ಸೇನೆಯು ಡಿಸೆಂಬರ್ ೧೪, ೨೦೧೪ರಂದು ಆಕ್ರಮಣದಿಂದ ಮುಕ್ತಗೊಳಿಸಿದೆ.

ಬಗದಾದಿಯು ಒಮ್ಮೆ ಮಾತ್ರ ಜಗತ್ತಿನೆದುರು ಕಾಣಿಸಿಕೊಂಡಿದ್ದಾನೆ. ಆದರೆ ಅವರಿಗೆ ಪ್ರಚಾರದ ಅನೇಕ ಸಾಧನಗಳಿವೆ. ಮಹಮ್ಮದ್ ಅಲ್ ಅದನಾನಿಯು ಈ ಸಂಘಟನೆಯ ಮುಖ್ಯ ವಕ್ತಾರ. ಕಳೆದ ಸೆಪ್ಟೆಂಬರ್‌ನಲ್ಲಷ್ಟೆ ಪಶ್ಚಿಮದ ಮುಸಲ್ಮಾನರಿಗೆ ಮುಖ್ಯವಾಗಿ ಕೆನಡಾ ಹಾಗೂ ಫ್ರಾನ್ಸ್‌ನ ಮುಸ್ಲಿಂ ಯುವಕರಿಗೆ, ಕಾಫಿರರನ್ನು ಹಿಡಿದು ಕಲ್ಲಿನಿಂದ ಅವರ ತಲೆಗಳನ್ನು ಚೂರು ಚೂರು ಮಾಡಲು, ಅವರಿಗೆ ವಿಷ ಉಣಿಸಲು, ಅವರ ಮೇಲೆ ವಾಹನಗಳನ್ನು ನಡೆಸಿ ಉಜ್ಜಿ ಹಾಕಲು, ಅವರ ಹೊಲಗದ್ದೆಗಳನ್ನು ನಾಶ ಮಾಡಲು ಆಹ್ವಾನ ಇತ್ತಿದ್ದಾನೆ. ಅವರ ಪ್ರಕಾರ ಈ ಸಂಘಟನೆಯ ಈ ಕಾರ್ಯಕ್ರಮಗಳು ಶುದ್ಧ ಇಸ್ಲಾಮಿಕ್.

ಐಎಸ್‌ಐಎಸ್ ತನ್ನ ಅಧೀನವಿರುವ ಪ್ರದೇಶಗಳಲ್ಲಿ ಸ್ವ-ಮತಾನುಸಾರದ ಪ್ರಶಾಸನವನ್ನು ಸ್ಥಾಪಿತಗೊಳಿಸಿದೆ. ಸರಕಾರದಂತೆಯೇ ತೆರಿಗೆ ವಿಧಿಸುವುದು, ಬೆಲೆಗಳನ್ನು ನಿಯಂತ್ರಿಸುವುದು, ನ್ಯಾಯಾಲಯಗಳ ಸ್ಥಾಪನೆ, ಆರೋಗ್ಯಸೇವೆ, ಶಿಕ್ಷಣ ವ್ಯವಸ್ಥೆ, ಸಂಚಾರ ಸೌಲಭ್ಯಗಳನ್ನು ಪ್ರಾರಂಭಿಸಿದೆ. ಒಂದು ಸಂತಸದ ವಿಷಯವೆಂದರೆ ಭಾರತ ಸಹಿತ ಜಗತ್ತಿನೆಲ್ಲೆಡೆಯ ಮುಖ್ಯ ಇಸ್ಲಾಮಿಕ್ ಸಂಘಟನೆಗಳು ಐಎಸ್‌ಐಎಸ್‌ನ್ನು ಇಸ್ಲಾಂ ಬಾಹಿರವೆಂದು ತಿಳಿಯುತ್ತದೆ. ಭಯೋತ್ಪಾದಕ ಸಂಘಟನೆಗಳ ಇತಿಹಾಸಜ್ಞ ಹೈಕೆಲ್ ಎಂಬಾತನ ಪ್ರಕಾರ ಈ ಐಎಸ್‌ಐಎಸ್ ಪುರಾತನ ಕಾಲದ ಇಸ್ಲಾಮಿನ ಪುನರುತ್ಥಾನ ಮಾಡಲು ಬಯಸುತ್ತಿದೆ. ಇಂದಿನ ಇಸ್ಲಾಂನಲ್ಲಿ ಯಾವ ಪದ್ಧತಿಯ ಚರ್ಚೆಯೇ ಇಲ್ಲವೋ ಅದನ್ನು ಈ ಉಗ್ರ ಸಂಘಟನೆ ಮುಕ್ತವಾಗಿ ಪುನಸ್ಥಾಪಿಸಲು

ಪ್ರಯತ್ನಶೀಲವಾಗಿದೆ. ದಾಸ್ಯ ಪದ್ಧತಿ, ತಲೆ ಕತ್ತರಿಸುವುದು ಮೊದಲಾದವನ್ನು ಇಂದಿನ ಐಎಸ್‌ಐಎಸ್‌ನಿಂದ ಗೆಲ್ಲಲ್ಪಟ್ಟ ಪ್ರದೇಶದಲ್ಲಿ ವಿಫುಲವಾಗಿ ನೋಡಬಹುದು. ಸೆರೆ ಹಿಡಿಯಲ್ಪಟ್ಟ ಜನರಲ್ಲಿ ಮಹಿಳೆಯರನ್ನು ದಾಸಿಯರನ್ನಾಗಿ ಮಾಡುವುದು, ಅವರನ್ನು ಮಾರುವುದು, ಅವರನ್ನು ಸೆಕ್ಸ್ ಸ್ಲೇವ್ಸ್ ರೂಪದಲ್ಲಿ ಬಳಸಿಕೊಳ್ಳುವುದು ಪವಿತ್ರಕಾರ್ಯವೆಂದು ತಿಳಿಯಲಾಗುತ್ತದೆ. ಯಜೀದಿ ಸಮುದಾಯದ ಕೆಲವು ಮಹಿಳೆಯರು ಅವರ ಸೆರೆಯಿಂದ ಹೇಗೋ ತಪ್ಪಿಸಿಕೊಂಡು ಬಂದವರು ವರ್ಣಿಸಿದ, ತಾವು ಅನುಭವಿಸಿದ ನಾರಕೀಯ ವೇದನೆಗಳನ್ನು ಕೇಳಿದರೆ ಎಂಥಹ ಕಲ್ಲೆದೆಯೂ ಕರಗೀತು! ಆದರೆ ಈ ಉಗ್ರರಿಗೆ ಅದು 'ಧರ್ಮ'ಕ್ಕಾಗಿ ನಡೆಸುವ ಪವಿತ್ರ ಕಾರ್ಯ! ಅವರಲ್ಲಿ ೧೧, ೧೧೨ ವರ್ಷದ ಬಾಲಿಕೆಯರೂ ಇದ್ದಾರೆ. ಅಂಥಹ ಒಬ್ಬ ಬಾಲಿಕೆ ಹೇಳಿದ ಪ್ರಕಾರ ಆಕೆಯನ್ನು ರೇಪ್ ಮಾಡಿದ ರೇಪಿಸ್ಟ್ ಉಗ್ರನು ಹಾಗೆ ರೇಪ್ ಮಾಡುವ ಮೊದಲು ಮತ್ತು ನಂತರ ಪ್ರಾರ್ಥನೆ ಮಾಡಿದನು. ಇದು ಆ ಉಗ್ರರ ಮಾನಸಿಕತೆ!

ಅದನಾನಿಯು ಐಎಸ್‌ಐಎಸ್‌ನ ಮುಖ್ಯ ವಕ್ತಾರ. ಆತನು ಪಶ್ಚಿಮದವರಿಗೆ ಸಂದೇಶ ನೀಡುತ್ತ ಹೇಳುತ್ತಾನೆ. 'ನಾವು ನಿಮ್ಮ ರೋಮ್‌ನ್ನು ಧ್ವಂಸ ಮಾಡುವೆವು. ನಿಮ್ಮ ಕ್ರಾಸ್‌ನ್ನು ಮುರಿದು ಹಾಕುವೆವು; ನಿಮ್ಮ ಹೆಂಗಸರನ್ನು ನಮ್ಮ ಗುಲಾಮರನ್ನಾಗಿ ಮಾಡಿಕೊಳ್ಳುವೆವು. ನಾವು ಹೀಗೆ ಮಾಡಲಾಗದಿದ್ದರೆ ನಮ್ಮ ಮಕ್ಕಳು ಆ ಕಾರ್ಯ ಮಾಡುವರು. ಅಷ್ಟೇ ಅಲ್ಲದೆ ೧,೦೦೦ ವರ್ಷಗಳ ಹಿಂದೆ ಸಮಾಪ್ತವಾಗಿದ್ದ ಖಿಲಾಫತನ್ನು ಪುನಃ ತರುತ್ತೇವೆ' ಎಂಬ ಘೋಷಣೆಯನ್ನು ಬಗದಾದಿ ಮಾಡಿದ್ದಾನೆ. ಶಿಯಾಗಳನ್ನು ಅವರು ಧರ್ಮಭ್ರಷ್ಟ ಮುಸ್ಲಿಮರೆಂದು ಹೇಳಿ ಅವರಿಗೆ ಮೃತ್ಯುದಂಡ ವಿಧಿಸಬೇಕೆನ್ನುತ್ತಾರೆ. ಯಜೀದಿಗಳು ಮುಸ್ಲಿಮರಲ್ಲದ ಕಾರಣ ಅವರನ್ನು ದಾಸರನ್ನಾಗಿ ಮಾಡಕೊಳ್ಳಬಹುದೆಂದು ಘೋಷಿಸಿ ಆ ರೀತಿ ಮಾಡುತ್ತಿದ್ದಾರೆ. ಶರೀಯತ್‌ನ್ನು ಪಾಲಿಸದ ಮುಸ್ಲಿಂ ರಾಷ್ಟ್ರಾಧ್ಯಕ್ಷನು ಮೃತ್ಯುದಂಡಕ್ಕೆ ಅರ್ಹನೆನ್ನುತ್ತಾರೆ. ಮುಸ್ಲಿಂ ರಾಷ್ಟ್ರಗಳನ್ನು ನಿಜವಾದ ಶುದ್ಧ ಇಸ್ಲಾಮಿಕ್ ಆಗಿ ಮಾಡುವುದು, ಮುಸ್ಲಿಮೇತರರನ್ನು ಯುದ್ಧ ಮಾಡಿ ಗೆಲ್ಲುವುದು ಅವರ ಅಜೆಂಡಾದಲ್ಲಿದೆ. ಭಾರತವನ್ನು ಇಸ್ಲಾಮಿಕ್ ದೇಶವಾಗಿ ಮಾಡುವುದು ಐಎಸ್‌ಐಎಸ್‌ನ ಗುರಿಯಾಗಿದೆ. ಭಾರತೀಯ ಮಹಾದ್ವೀಪದಲ್ಲಿ ಕಾರ್ಯನಿರತವಾಗಿರುವ ಉಗ್ರ ಸಂಘಟನೆಗಳನ್ನು ತನ್ನ ನೇತೃತ್ವದಲ್ಲಿ ತೆಗೆದುಕೊಂಡು ಭಾರತವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಇರಾದೆ ಅವರದಾಗಿದೆ. ಭಾರತೀಯ ಯುವಕರೂ ಈ ಉಗ್ರ ಸಂಘಟನೆಗೆ ಸೇರಲು ತವಕಿಸುತ್ತಿದ್ದಾರೆಂಬ ಆತಂಕಕಾರೀ ಸಂಗತಿ ಬೆಳಕಿಗೆ ಬಂದಿದೆ. ಹೈದರಾಬಾದ್, ಅಜಂಗಢ, ಲಕ್ನೋ ಹಾಗೂ ಕೇರಳ ಮುಂತಾದ ಕಡೆ ಇದಕ್ಕಾಗಿ ರಿಕ್ರೂಟಿಂಗ್ ಏಜೆನ್ಸಿಗಳು ಕಾರ್ಯನಿರತವಾಗಿವೆ ಎಂದು 'ರಾ' ಮುಂತಾದವು ಹೇಳುತ್ತಿವೆ. ಒಟ್ಟಿನಲ್ಲಿ ಐಎಸ್‌ಐಎಸ್ ಉಗ್ರ ಸಂಘಟನೆ ಎಲ್ಲಾ

ವಿರೋಧಾಭಾಸಗಳ ನಡುವೆಯೂ ಬೆಳೆಯುತ್ತಿದೆ.

ಐಎಸ್‌ಐಎಸ್ ಉಗ್ರ ಸಂಘಟನೆ ಎಲ್ಲೋ ದೂರದಲ್ಲಿ ನಡೆಯುತ್ತಿರುವ ಸುದ್ದಿಯ ಚೂರಲ್ಲ. ಅದು ನಮ್ಮ ಮನೆಯ ಬಾಗಿಲ ಬಳಿಗೇ ಬಂದು ಬಿಟ್ಟಿದೆ ಎಂದಾಗ ಈ ಬಗ್ಗೆ ನಾನೇನು ಮಾಡಬೇಕು ಎಂದು ಯೋಚಿಸಬೇಕಾಗುತ್ತದೆ. ಸ್ವತಃ ಮುಸ್ಲಿಮರೊಂದಿಗೇ ಕ್ರೂರವಾಗಿ ವರ್ತಿಸುವ ಇವರು ಮುಸ್ಲಿಮೇತರರೊಂದಿಗೆ ಹೇಗೆ ನಡೆದುಕೊಳ್ಳಬಹುದು? ಎಂಬುದನ್ನು ನಾವು ವಿಚಾರ ಮಾಡಬೇಕು. ಭಾರತದಲ್ಲಿ ಸಹ ಮುಸ್ಲಿಮ್ ಸಮಸ್ಯೆ ಇದೆ. ಆದರೆ ಭಾರತದ ಬಹುಸಂಖ್ಯಾತ ಮುಸ್ಲಿಂರು ಅಥವಾ ಮುಸ್ಲಿಮರಲ್ಲಿ ಬಹುಸಂಖ್ಯಾತರು ನಿಜಕ್ಕೂ ಒಳ್ಳೆಯವರು. ಮಾನವೀಯತೆಗೆ ಪ್ರಾಧಾನ್ಯ ನೀಡುವವರು. ಆದರೆ ಅವರಲ್ಲೇ ಕೆಲವರು ಉಗ್ರ ಸಂಘಟನೆಗಳಿಗೆ ಬೆಂಬಲವಾಗಿರುವುದು ಕೂಡ ವಾಸ್ತವ. ಒಳ್ಳೆಯವರು ನಿಷ್ಕ್ರಿಯರಾಗಿದ್ದರೆ, ಸಮಾಜಘಾತಕರು ಕ್ರಿಯಾಶೀಲರಾಗಿದ್ದಾರೆ. ಹೀಗಾಗಿ ಅನಾಹುತಗಳು ಆಗಾಗ್ಗೆ ನಡೆಯುತ್ತಲೇ ಇವೆ.

ಭಾರತೀಯ ಸಂದರ್ಭದಲ್ಲಿ ಹಿಂದೂ-ಮುಸ್ಲಿಮರು ಜೊತೆಯಾಗಿ ಅಣ್ಣ ತಮ್ಮಂದಿರಂತೆ ಬಾಳಬೇಕಾದ ಅಗತ್ಯವಿದೆ. ಹೀಗೆ ಬಾಳುವುದರಲ್ಲೇ ಇವರಿಬ್ಬರ ಹಿತ ಅಡಗಿದೆ. ಹಿಂದೂಗಳನ್ನು ಬಹುಸಂಖ್ಯಾತರೆಂದೂ, ಮುಸ್ಲಿಮರನ್ನು ಅಲ್ಪಸಂಖ್ಯಾತರೆಂದೂ ವಿಭಜಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ರಾಜಕೀಯದ ಮಂದಿ ಬ್ರಿಟಿಷರಿಂದ ಈ ಕುತಂತ್ರವನ್ನು ಎರವಲಾಗಿ ಪಡೆದು ಈಗ ಗುರುವನ್ನೇ ಮೀರಿಸಿದ ಶಿಷ್ಯರಾಗಿದ್ದಾರೆ. ಈ ರಾಜಕೀಯದ ಮಂದಿಗಿಂತಲೂ ಅಪಾಯಕಾರಿಗಳಾದವರು ಬುದ್ಧಿಜೀವಿಗಳು, ಸಾಹಿತ್ಯ ಜೀವಿಗಳು ಎಂಬ ವರ್ಗ. ಈ ದೇಶದಲ್ಲಿ ಹಿಂದೂ-ಮುಸ್ಲಿಂ ಸಮಸ್ಯೆ ಜ್ವಲಂತವಾಗಿ ಕಾಡಲು ಕಾರಣವೇ ಈ ರಾಜಕಾರಣಿಗಳು ಹಾಗೂ ಬುದ್ಧಿಜೀವಿವರ್ಗ. ಅದರಲ್ಲಿಯೂ ಇವರಲ್ಲಿ ಸಿಂಹಪಾಲು ಹಿಂದುಗಳೆನಿಸಿದವರದೇ ಎಂಬುದು ಕಠೋರವಾಸ್ತವ. ಈ 'ಹಿಂದೂ'ಗಳ ಮನಸ್ಥಿತಿಯನ್ನು ಕಾರ್ಯಾಚರಣೆಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡರೆ ಇವರೇ ಹಿಂದೂ-ಮುಸ್ಲಿಂ ಸಮಸ್ಯೆಯ ಕಾರಣ ಪುರುಷರು (ಮಹಿಳೆಯರೂ ಇದ್ದಾರೆ!) ಎಂಬುದು ಅರಿವಾಗುತ್ತದೆ. ಹಲವಾರು ಇಸ್ಲಾಮಿಕ್ ದೇಶಗಳಿಗಿಂತ ಹೆಚ್ಚಾಗಿ ಮುಸ್ಲಿಮರಿರುವ ದೇಶ ಭಾರತ. ಅವರು ತಮಗಿಂತ ನಾಲ್ಕು ಪಾಲು ಹೆಚ್ಚಿಗೆ ಇರುವ ಹಿಂದುಗಳೊಂದಿಗೆ ಸೌಹಾರ್ದದಿಂದ ಬಾಳದಿದ್ದರೆ ಅವರಿಗೂ ಸುಖವಿಲ್ಲ. ಹಿಂದೂಗಳಿಗೂ ಸುಖವಿಲ್ಲ. ದೇಶಕ್ಕೆ ಶಾಂತಿಯಿಲ್ಲ! ಎಂಬುದನ್ನು ಅವರಿಗೆ ಮನವರಿಕೆ ಮಾಡುವವರು ಬೇಕಾಗಿದೆ. ಭಾರತದ ಸಂದರ್ಭದಲ್ಲಿ ಮುಸ್ಲಿಮರು ಸೌಹಾರ್ದದಿಂದ ಬಾಳಲು ಸಿದ್ಧರಿದ್ದಾರೆ. ಆದರೆ ಅವರನ್ನು ಹಾಗೆ ಬಾಳಗೊಡರು ಈ ರಾಜಕೀಯ ಕುತಂತ್ರಿಗಳು, ಬುದ್ಧಿಜೀವಿಗಳೆನಿಸಿದವರ 'ಸೆಕ್ಯುಲರಿಸ್ಟ್' ಬಿರುದಾಂಕಿತರು. ಇವರೆಲ್ಲರೂ

ಹಿಂದುಗಳೇ. ಇವರೇನೂ ಹಿಂದೂಗಳಲ್ಲಿ ಬಹುಸಂಖ್ಯಾತರಲ್ಲ, ಅಲ್ಪಸಂಖ್ಯಾತರೇ! ಆದರೆ ತುಂಬಾ ಕ್ರಿಯಾಶೀಲರು. ಇವರು ಮುಸ್ಲಿಮರು ಹಿಂದೂಗಳೊಂದಿಗೆ ಸೌಹಾರ್ದದಿಂದ ಬಾಳಲಾಗದಂತಹ ತಂತ್ರಗಳನ್ನು ಹೊಸೆಯುತ್ತಾರೆ; ಘೋಷಣೆಗಳನ್ನು ಕೂಗುತ್ತಾರೆ, ಪುಸ್ತಕಗಳನ್ನು ಬರೆಯುತ್ತಾರೆ; ಮಾಧ್ಯಮಗಳಲ್ಲಿ ಬಿಂಬಿಸುತ್ತಾರೆ ಇವರ ಬಗೆಗೆ ಸಜ್ಜನ ರಾಷ್ಟ್ರಪ್ರೇಮೀ ಮುಸ್ಲಿಮರು ಜಾಗರೂಕರಾಗಿರಬೇಕು!

– ಸಾಭಾರ – ವೇದತರಂಗ

ನಾಲ್ಕೂ ನಿಟ್ಟಿನಿಂದ....

ಈಗಾಗಲೇ ನಾಡಿನ ಟಿಪ್ಪು ಅಭಿಮಾನಿಗಳು ಯಾವ ಅನುದಾನವನ್ನೂ ನಿರೀಕ್ಷಿಸದೆ ಖಾಸಗಿಯಾಗಿ ಟಿಪ್ಪು ಜಯಂತಿಯನ್ನು ಆಚರಿಸಿಕೊಂಡೆ ಬರುತ್ತಿದ್ದಾರೆ. ಅದೇ ರೀತಿ ಕನಕ, ವಾಲ್ಮೀಕಿ ಮುಂತಾದವರ ಜಯಂತಿಗಳನ್ನು ಆಚರಿಸುತ್ತ ಬರಲಾಗಿದೆ. ಇಂಥ ವ್ಯಕ್ತಿಗತ ಅಭಿಮಾನ ಸಮಾನ ಮನಸ್ಕತೆಯಿಂದಷ್ಟೇ ಸಾಂಸ್ಕೃತಿಕ ಪ್ರಜ್ಞೆ ಮತ್ತು ಸಾಂಸ್ಕೃತಿಕ ಚಟುವಟಿಕೆ ಅರ್ಥಪೂರ್ಣವೆನಿಸುವುದು. ಸರ್ಕಾರ ಹಸ್ತಕ್ಷೇಪಮಾಡಿದೊಡನೆಯೆ ಸಂಸ್ಕೃತಿಯ ಅಂತಃಸತ್ವವೇ ಜೀವಹೀವನಾಗಿ ಬಿಡುವುದನ್ನು ಚರಿತ್ರೆ ಸಾಬೀತುಮಾಡಿದೆ.

– ಡಾ.ಟಿ.ಎನ್.ವಾಸುದೇವಮೂರ್ತಿ

******

ಅರೆತಿಳುವಳಿಕೆಯ ರಾಜಕಾರಣಿಗಳು ಮತ್ತು ಬುದ್ಧಿ ಜೀವಿಗಳು ಮಾತನಾಡಿ ಹಿಂಸೆ – ಸಾವು – ನೋವುಗಳು ಸಂಭವಿಸಿದರೆ ಅದರ ಜವಾಬ್ದಾರಿಯನ್ನು ಕರ್ನಾಟಕದ ಇತಿಹಾಸಕಾರರು ಹೊರಬೇಕು.

– ಪೃಥ್ವಿ ದತ್ತ ಚಂದ್ರ ಶೋಭಿ

******

ಕರ್ನಾಟಕವೆಂದರೆ ಒಂದೇ ಮಾದರಿಯಲ್ಲ. ಒಂದೇ ವಿನ್ಯಾಸದ ಭಾಷೆಯಲ್ಲ; ಒಂದೇ ಸಂಸ್ಕೃತಿಯ ಬದುಕಲ್ಲ; ಒಂದೇ ಪ್ರದೇಶದ ಪ್ರಾಬಲ್ಯವಲ್ಲ. ಕರ್ನಾಟಕವನ್ನು ಕಟ್ಟಬೇಕಾದರೆ ನಮ್ಮ ಜಾಲಿ, ಹೊಂಗೆ, ಹುಣಿಸೆಗಳಿಗೂ ನಾವು ಹೆಮ್ಮೆ ಪಡಬೇಕು; ಬತ್ತಿದ ಹಳ್ಳಕೊಳ್ಳಗಳಲ್ಲಿ ನೀರು ಹರಿಯಬೇಕು. ಕೆರೆಗಳ ಬಿರುಕಿನಲ್ಲಿ ಬರುವ ನಿಟ್ಟುಸಿರು ನಮಗೆ ತಟ್ಟಬೇಕು. ಕೋಗಿಲೆ – ಕಾಗೆಗಳಲ್ಲಿ ಮೇಲು ಕೀಳು ಅಳಿಯಬೇಕು. ಗಿಡುಗ ಸಿಡಿಲಾಗುವ ಬದಲು ಗುಬ್ಬಚ್ಚಿಗೆ ಗೌರವ ಕೊಡಬೇಕು. ನನ್ನ ಈ ಕಳಕಳಿಯ ಕನ್ನಡ ಪ್ರಜ್ಞೆಯಲ್ಲಿರುವ ಧ್ವನಿಪೂರ್ಣ ಆಯಾಮವನ್ನು ದಯವಿಟ್ಟು ಅರ್ಥಮಾಡಿಕೊಳ್ಳಬೇಕು.

– ಬರಗೂರು ರಾಮಚಂದ್ರಪ್ಪ

ಟಿಪ್ಪು ಜಯಂತಿ : ಲಾಭಾಲಾಭದ ವಿಚಾರ

– ಅನ್ನಪೂರ್ಣ.ಬಿ

(ವಿವಾದಾತ್ಮಕ ಐತಿಹಾಸಿಕ ವ್ಯಕ್ತಿಗಳು ಉತ್ಸವಾಚರಣೆಗೆ ವಸ್ತುವಾಗಕೂಡದು ಅವರನ್ನು ರಾಜಕಾರಣದ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸಬೇಕು ಎಂಬ ವಿಚಾರ ಈ ಲೇಖನದಲ್ಲಿದೆ.)

ಟಿಪ್ಪು ಜಯಂತಿ ಆಚರಣೆ ಬಗ್ಗೆ ವಿವಾದ ನಡೆಯುತ್ತಿದೆ. ಈ ಕೆಳಗೆ ಕೆಲ ಐತಿಹಾಸಿಕ ಸಂಗತಿಗಳನ್ನು ಪರಾಮರ್ಶಿಸಲಾಗಿದೆ. ಅವು ಮೈಸೂರು ಹುಲಿ ಟಿಪ್ಪು ಬಗ್ಗೆ ಇವೆ. ಟಿಪ್ಪು ಓರ್ವ ವಿವಾದಾತ್ಮಕ ಐತಿಹಾಸಿಕ ವ್ಯಕ್ತಿ. ನಿಗೂಢವ್ಯಕ್ತಿಯೂ ಕೂಡ. ಆಧುನಿಕ ಇತಿಹಾಸಕಾರರಿಗೆ ಟಿಪ್ಪುವಿನ ಚರಿತ್ರೆಯನ್ನು ಬಹಿರಂಗಗೊಳಿಸುವುದು ಒಂದು ಸವಾಲಾಗಿದೆ.

ಅವನ ತಂದೆ ಹೈದರ್‌ಆಲಿ ದಳವಾಯಿ ನಂಜರಾಜಯ್ಯನ ಕೆಳಗೆ ಒಬ್ಬ ಸಾಮಾನ್ಯ ಸೈನಿಕನಾಗಿದ್ದ. ಎರಡನೇ ಕೃಷ್ಣರಾಜ ಒಡೆಯರ್‌ರವರ ರಾಜಕೀಯ ಅಸ್ಥಿರತೆ ಮತ್ತು ಅದಕ್ಷತೆಯ ಕಾರಣದಿಂದಾಗಿ ನರಸರಾಜಯ್ಯ ಮೈಸೂರನ್ನು ಆಳುತ್ತಿದ್ದ. ಹೈದರ್ ಈ ಅವಕಾಶವನ್ನು ಉಪಯೋಗಿಸಿಕೊಂಡು ೧೭೬೧ರಲ್ಲಿ ಮೈಸೂರಿನ ಮಹಾರಾಜರನ್ನು ರಾಜತ್ವದಿಂದ ಪದಚ್ಯುತಗೊಳಿಸಿ ರಾಜಸಿಂಹಾಸನವನ್ನು ತನ್ನ ಕೈಗೆ ತೆಗೆದುಕೊಂಡ.. ಈ ಘಟನೆಯಿಂದ ಟಿಪ್ಪು ಅಧಿಕಾರಕ್ಕೆ ವಂಶಪಾರಂಪರ್ಯವಾಗಿಯಾಗಲೀ ಅಥವಾ ಯುದ್ಧದ ಮೂಲಕವಾಗಲೀ ಅಧಿಕಾರಕ್ಕೆ ಬರದೆ ರಾಜತ್ವವನ್ನು ವಹಿಸಿಕೊಂಡನೆಂದು ಗೊತ್ತಾಗುತ್ತದೆ. ನಂತರ ಟಿಪ್ಪು ಸ್ವಾಭಾವಿಕ ಉತ್ತರಾಧಿಕಾರಿಯಾಗಿ ರಾಜನಾದ ಮತ್ತು ಮೈಸೂರು ರಾಜ್ಯವನ್ನು ತನ್ನ ಕೈಗೆ ತೆಗೆದುಕೊಂಡ. ಇಂಗ್ಲಿಷರ ವಿರುದ್ಧ ಗುಡುಗಿದ ರಾಜಕಾರಣಿಯೆಂದು, ಓರ್ವ ದಕ್ಷ ಆಡಳಿತಗಾರನೆಂದೂ ಭಾರತೀಯ ಇತಿಹಾಸದಲ್ಲಿ ಅವನಿಗೆ ಗೌರವ ಸಲ್ಲುತ್ತದೆ. ಆದರೆ ಟಿಪ್ಪುವಿನ ಗುಡುಗು ರಾಷ್ಟ್ರೀಯತೆಯ ಲಕ್ಷಣಉಳ್ಳದಾಗಿರಲಿಲ್ಲ. ಏಕೆಂದರೆ ಟಿಪ್ಪು ಇದ್ದ ಕಾಲದಲ್ಲಿ ರಾಷ್ಟ್ರೀಯತೆಯ ವಿಚಾರಗಳಾಗಲಿ ಮತ್ತು ಜಾತ್ಯಾತೀತೆಯ ವಿಚಾರಗಳಾಗಲಿ ಪ್ರಚಲಿತವಾಗಿರಲಿಲ್ಲ.

೧೮ನೇ ಶತಮಾನದ ಭಾರತದಲ್ಲಿ ಈ ಪದಗಳು ಅಸ್ತಿತ್ವದಲ್ಲೆ ಇರಲಿಲ್ಲ. ೧೮೮೫ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೊಂಡಾದ ಮೇಲೆ ೧೯ನೇ ಶತಮಾನದಲ್ಲಿ ಅವು ಜನಪ್ರಿಯಗೊಳಿಸಲ್ಪಟ್ಟವು. ಕಾಂಗ್ರೆಸ್ ಆಗ ಭಾರತದಲ್ಲಿ

ರಾಷ್ಟ್ರೀಯತೆಯ ಭಾವನೆಯನ್ನು ಜಾಗೃತಗೊಳಿಸಿತ್ತು. ಬ್ರಿಟೀಷರ ವಿರುದ್ಧ ಟಿಪ್ಪುವಿನ ಹೋರಾಟ ಮುಖ್ಯವಾಗಿ ತನ್ನ ಸಾಮಾಜ್ರ್ಯವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಇತ್ತೆ ವಿನಃ ಭಾರತವನ್ನು ಬ್ರಿಟೀಷರ ನೊಗದಿಂದ ಬಿಡಿಸಿಕೊಳ್ಳುವುದಕ್ಕಾಗಿ ಇರಲಿಲ್ಲ.

ಟಿಪ್ಪು ಮಾಡಿದ ಎರಡು ಮೈಸೂರು ಯುದ್ಧಗಳು ಈ ಮಾತನ್ನು ಪುಷ್ಟೀಕರಿಸುತ್ತವೆ. ಮೂರನೇ ಮೈಸೂರು ಯುದ್ಧ ನಡೆಯುವುದಕ್ಕೆ ಕಾರಣ ೧೭೯೦ರಲ್ಲಿ ಬ್ರಿಟೀಷರ ಸಹವರ್ತಿಯಾಗಿದ್ದ ಟ್ರಾವಣ್‌ಕೋರ್ ರಾಜ್ಯದ ಮೇಲೆ ಟಿಪ್ಪು ಯುದ್ಧ ಸಾರಿದ್ದು ಕಾರಣ. ಲಾರ್ಡ್‌ಕಾರನ್‌ವಾಲಿಸ್ ಈ ಕಾರಣಕ್ಕಾಗಿ ಶ್ರೀರಂಗಪಟ್ಟಣಕ್ಕೆ ಬ್ರಿಟೀಷ್ ಸೈನ್ಯವನ್ನು ತೆಗೆದುಕೊಂಡು ಬಂದ ಮತ್ತು ಟಿಪ್ಪುವನ್ನು ಸೋಲಿಸಿದ. ೧೭೯೯ರಲ್ಲಿ ಟಿಪ್ಪು ನಡೆಸಿದ ನಾಲ್ಕನೇ ಮೈಸೂರು ಯುದ್ಧಕ್ಕೆ ಕಾರಣ ವೆಲ್ಲೆಸ್ಲಿ ಜಾರಿಮಾಡಿದ ಸಹಾಯಕ ಸೇನಾ ಪದ್ಧತಿ. ಬ್ರಿಟೀಷರೊಂದಿಗೆ ಒಪ್ಪಂದ ಮಾಡಿಕೊಂಡ ಯಾವುದೇ ಸಂಸ್ಥಾನ ತನ್ನಲ್ಲಿ ಇರಿಸಲಾಗಿದ್ದ ಬ್ರಿಟೀಷ್ ಸೈನ್ಯದ ಮತ್ತು ಬ್ರಿಟೀಷ್ ರಾಜ ದೂತನ ಖರ್ಚನ್ನು ನಿರ್ವಹಿಸಬೇಕೆಂಬುದಾಗಿತ್ತು. ಆದರೆ ಟಿಪ್ಪು ಈ ಒಪ್ಪಂದಕ್ಕೆ ಸಹಿ ಮಾಡಲು ಮತ್ತು ತನ್ನನ್ನು ಬ್ರಿಟೀಷರಿಗೆ ಅಧೀನಗೊಳಿಸಿಕೊಳ್ಳಲು ಒಪ್ಪದೆ ಇದ್ದುದರಿಂದ ಜನರಲ್ ಹ್ಯಾರಿಸ್ ಎಂಬ ಇಂಗ್ಲೀಷ್ ಸೈನ್ಯಾಧಿಕಾರಿ ಮೈಸೂರಿನ ಮೇಲೆ ದಾಳಿ ಮಾಡಿದ.

ಟಿಪ್ಪು ತನ್ನ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳಲು ಇಂಗ್ಲೀಷರ ವಿರುದ್ಧ ಶೂರತನದಿಂದ ಕಾದಾಡಿದ ಮತ್ತು ಯುದ್ಧ ಮಾಡುತ್ತಲೇ ರಣಾಂಗಣದಲ್ಲಿ ಬಿದ್ದು ಮರಣವನ್ನಪ್ಪಿದ. ಅವನು ತೋರಿಸಿದ ಶೌರ್ಯಕ್ಕೆ ಅನುಸಾರವಾಗಿ ಇತಿಹಾಸದಲ್ಲಿ ಅವನನ್ನು "ಮೈಸೂರು ಹುಲಿ" ಎಂದು ನಮೂದಿಸಲಾಗಿದೆಯೆ ಹೊರತು "ಭಾರತದ ಹುಲಿ" ಎಂದಲ್ಲ. ೧೭೯೦ರವರೆಗೂ ನಮ್ಮ ಸ್ವಾತಂತ್ರ್ಯ ಚಳುವಳಿ ಪ್ರಾರಂಭವಾಗೆ ಇರಲಿಲ್ಲ. ಆದ್ದರಿಂದ ಟಿಪ್ಪುವನ್ನು ದೊಡ್ಡ ದೇಶಾಭಿಮಾನಿಯೆಂದು ಮತ್ತು ಸ್ವಾತಂತ್ರ್ಯ ಹೋರಾಟಗಾರನೆಂದು ಬಣ್ಣಿಸುವುದು ಅನಗತ್ಯವಾದ ವಿವಾದಗಳಿಗೆ ಕಾರಣವಾಗುತ್ತದೆ. ಟಿಪ್ಪುಸುಲ್ತಾನ್, ಕಿತ್ತೂರು ರಾಣಿ ಚೆನ್ನಮ್ಮ ಮಧ್ಯದ ಹೋಲಿಕೆ ಮೇಲ್ಕಾಣಿಸಿದ ಮಾತನ್ನು ಅಧಿಕೃತಗೊಳಿಸುತ್ತದೆ. ಚೆನ್ನಮ್ಮ ಕೂಡ ಇಂಗ್ಲೀಷರ ವಿರುದ್ಧ ದತ್ತು ಸ್ವೀಕೃತಿಯ ಸಿದ್ಧಾಂತ ಕಾರ್ಯಗತಗೊಳ್ಳದೆ ಇದ್ದಾಗ ಹೋರಾಟ ಮಾಡಿದರು. ನಿಜವಾಗಿಯೂ ಹೇಳುವುದಾದರೆ ಝಾನ್ಸಿರಾಣಿ ಲಕ್ಷ್ಮೀಬಾಯಿ ಮತ್ತು ಹಜರತ್ ಬೇಗಂ ಮಹಲ್ ಇವರಿಗಿಂತ ಮೊದಲು ಇಂಗ್ಲೀಷರ ವಿರುದ್ಧ ಹೋರಾಡಿದ ಮೊದಲ ಮಹಿಳೆಯಾಗಿದ್ದಳು.

ಚೆನ್ನಮ್ಮ ಆಗಲಿ ಟಿಪ್ಪುಸುಲ್ತಾನ್ ಆಗಲಿ ತಮ್ಮ ರಾಜ್ಯಗಳನ್ನು ಕಿತ್ತುಕೊಳ್ಳಲು ಬ್ರಿಟೀಷರ ದಮನಕಾರಿ ನೀತಿಯ ವಿರುದ್ಧ ಹೋರಾಡಿದರೆ ಹೊರತು ರಾಷ್ಟ್ರೀಯ ಉದ್ದೇಶಕ್ಕಾಗಿ ಅಲ್ಲ. ನಮ್ಮ ರಾಜಕೀಯ ಮುಖಂಡರು ಬ್ರಿಟೀಷರ ವಿರುದ್ಧದ

ಹೋರಾಟವನ್ನು ಸ್ವಾತಂತ್ರ್ಯದ ಹೋರಾಟವೆಂದು ಎತ್ತಿಹಿಡಿಯುವಾಗ ಚೆನ್ನಮ್ಮನನ್ನು ಏಕೆ ಮರೆಯುತ್ತಾರೆ.

ಟಿಪ್ಪುವಿನ ವ್ಯಕ್ತಿತ್ವವನ್ನು ಎರಡು ಪಾರ್ಶ್ವಗಳಿಂದ ಅಧ್ಯಯನ ಮಾಡಬಹುದು. ಒಂದು ಬ್ರಿಟೀಷರೊಂದಿಗೆ ಹೋರಾಡಿದ ಓರ್ವ ನ್ಯಾಯಪ್ರಿಯ ಮತ್ತು ಜಾತ್ಯಾತೀತ ರಾಜ ಎಂಬುದಾಗಿ ಮತ್ತು ಇನ್ನೊಂದು ಅವನು ಕೈಗೊಂಡ ಸುಧಾರಣಾ ಕ್ರಮಗಳು. ಅವನ ಆ ಸುಧಾರಣೆಗಳು ಅನೇಕ ಕ್ಷೇತ್ರಗಳಲ್ಲಿದ್ದವು. ಉದಾಹರಣೆಗೆ ನಾಣ್ಯ ಚಲಾವಣೆ ಹಣಕಾಸು, ವಾಣಿಜ್ಯ ವ್ಯವಹಾರ, ವ್ಯವಸಾಯ, ಕೈಗಾರಿಕೆ, ನೌಕಾಪಡೆ ಇತ್ಯಾದಿ. ಅವನು ದೇವಸ್ಥಾನಗಳಿಗೆ ಭೂದಾನ ಕೂಡ ಮಾಡಿದ. ನಾಶಮಾಡಲ್ಪಟ್ಟ ದೇವಸ್ಥಾನಗಳನ್ನು ಪುನರ್ ನಿರ್ಮಾಣ ಮಾಡಿದ ಬಗ್ಗೆ ದಾಖಲೆಗಳಿವೆ. ಅಂಥ ಒಂದು ಪ್ರಸಿದ್ಧ ದೇವಸ್ಥಾನ ಶೃಂಗೇರಿಯದು. ಮರಾಠರು ಮೈಸೂರನ್ನು ಮುತ್ತಿಗೆ ಹಾಕಿ ನಾಶ ಮಾಡಿದ್ದ ದೇವಸ್ಥಾನವನ್ನು ಪುನರ್ ಸಂಸ್ಥಾಪಿಸಲು ಸಹಾಯ ಮಾಡಲೆಂದು ಆ ದೇವಸ್ಥಾನದ ಅರ್ಚಕರು ಟಿಪ್ಪು ಸುಲ್ತಾನನಿಗೆ ಮಾಡಿಕೊಂಡ ಮನವಿಯ ಮೇರೆಗೆ ಟಿಪ್ಪು ಗೌರವ ಪೂರ್ವಕವಾಗಿ ಕನ್ನಡದಲ್ಲಿ ಬರೆದ ೩೦ ಪತ್ರಗಳಿವೆ. ಅವನಿಗೆ ಇಂಗ್ಲೀಷರ ಬಗ್ಗೆ ತುಂಬಾ ತಿರಸ್ಕಾರದ ಭಾವನೆ ಇತ್ತು. ಆದ್ದರಿಂದ ಅವರನ್ನು ದೇಶದಿಂದ ಹೊರಗೆ ಹಾಕಲು ಯಾರೊಂದಿಗಾದರೂ ಸ್ನೇಹ ಬೆಳೆಸಲು ಸಿದ್ಧನಿದ್ದನು. ವಿಶೇಷತಃ ಅವರ ಶತ್ರುವಾಗಿದ್ದ ಫ್ರೆಂಚರೊಂದಿಗೆ.

ಅದೇ ಟಿಪ್ಪುವಿನ ೨ನೇ ವ್ಯಕ್ತಿತ್ವ ದಮನಕಾರಿ ನೀತಿಯದ್ದಾಗಿದೆ. ಈ ಸಂಗತಿಯನ್ನು ಟಿಪ್ಪು ಕೊಡಗು, ಮಂಗಳೂರು ಮತ್ತು ಮಲಬಾರ್ ಪ್ರದೇಶಗಳ ಮೇಲೆ ಮಾಡಿದ ದಾಳಿಗಳಿಂದ ಹಾಗೂ ಅವನು ಸಾವಿರಾರು ಜನರ ಹತ್ಯೆಮಾಡಿದ್ದು ಮತ್ತು ಇಸ್ಲಾಂ ಮತಕ್ಕೆ ಅನೇಕರನ್ನು ಬಲವಂತವಾಗಿ ಮತಾಂತರಗೊಳಿಸಿದ್ದನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ. ಅವನ ಕ್ರೂರತನ ಮತ್ತು ಧರ್ಮಾಂಧತೆ ಮುಂತಾದವುಗಳು ಇಂದಿಗೂ ಅವನ ವ್ಯಕ್ತಿತ್ವಕ್ಕೆ ಕಳಂಕಪ್ರಾಯವಾಗಿವೆ. ಟಿಪ್ಪುವಿನ ಪುರೋಗಾಮಿ ಕೃತಿಗಳು ಮೆಚ್ಚುವಂಥದ್ದಾಗಿದ್ದರೂ ಈ ಐತಿಹಾಸಿಕ ಸಂಗತಿಗಳನ್ನು ಮರೆಮಾಚಲು ಸಾಧ್ಯವಿಲ್ಲ.

ವೈರುಧ್ಯಗಳ ವ್ಯಕ್ತಿತ್ವ ಹೊಂದಿದ್ದ ಐತಿಹಾಸಿಕ ವ್ಯಕ್ತಿಯ ಜೀವನದಲ್ಲಿ ವರ್ತಮಾನದ ರಾಜಕಾರಣಿಗಳು ಅನಗತ್ಯವಾಗಿ ಪ್ರವೇಶ ಮಾಡಿದ್ದಾರೆ ಮತ್ತು ಅನಾವಶ್ಯಕವಾಗಿ ಧಾರ್ಮಿಕ ಭಾವನೆಗಳನ್ನು ಕೆರಳಿಸಿದ್ದಾರೆ. ವಿವಾದಾತ್ಮಕ ಐತಿಹಾಸಿಕ ವ್ಯಕ್ತಿಗಳನ್ನು ಉತ್ಸವಮೂರ್ತಿಗಳನ್ನಾಗಿ ಮಾಡಕೂಡದು. ಅಂಥ ವ್ಯಕ್ತಿಗಳನ್ನು ಪ್ರಸ್ತುತ ರಾಜಕಾರಣದ ಕಪಿಮುಷ್ಠಿಯಿಂದ ಬಿಡುಗಡೆ ಮಾಡಬೇಕಿದೆ. ಆ ವ್ಯಕ್ತಿಗಳನ್ನು ಕೇವಲ ಶೈಕ್ಷಣಿಕ ಅಧ್ಯಯನಕ್ಕೆ ಮಾತ್ರ ಒಳಪಡಿಸಬೇಕು. ಮತ್ತು ಅವರ ಕಾಲದ ಪರಿಪ್ರೇಕ್ಷೆ ಮತ್ತು ಪರಿಸ್ಥಿತಿಗಳ ಆಧಾರದ ಮೇಲೆ ತೀರ್ಮಾನಿಸಬೇಕೆ ಹೊರತು ಪ್ರಚಲಿತ ವಿದ್ಯಮಾನಗಳ

ಆಧಾರದ ಮೇಲೆ ಅಲ್ಲ.

ಯಾವುದೇ ಒಂದು ಸಮುದಾಯದೊಂದಿಗೆ ಗುರುತಿಸಿಕೊಂಡ ಯಾವುದೇ ರಾಜನ ಪರಂಪರೆ ಶಾಂತಿಗೆ ಮತ್ತು ಧಾರ್ಮಿಕ ಸಾಮರಸ್ಯತೆಗೆ ಅಪಾಯಕಾರಿಯಾಗಿರುತ್ತದೆ. ದೇಶದ ಕ್ಯಾಲೆಂಡರ್‌ನಲ್ಲಿರುವ ವಾರ್ಷಿಕ ಜಯಂತಿಗಳ ದಿನವನ್ನು ಗಮನಿಸಿದರೆ ಜಯಂತಿಯ ಆಚರಣೆಗೆ ಯೋಗ್ಯವಾದ ವ್ಯಕ್ತಿಗಳ ಹಿನ್ನಲೆ ಆಧ್ಯಾತ್ಮಿಕವಾದುದು ಮತ್ತು ಮುಂದಿನ ಪೀಳಿಗೆಗೆ ಮಹಾ ಆದರ್ಶಗಳನ್ನು ತೋರಿದವರಾಗಿರುತ್ತಾರೆ.

ಗಾಂಧೀ ಜಯಂತಿ ಆಗಿರಬಹುದು, ಮಹಾವೀರ ಜಯಂತಿ, ಬಸವ ಜಯಂತಿ, ವಾಲ್ಮೀಕಿ ಜಯಂತಿ ಅಥವಾ ಕನಕದಾಸ ಜಯಂತಿ ಇತ್ಯಾದಿ ಈ ಎಲ್ಲ ಜಯಂತಿಯ ಐತಿಹಾಸಿಕ ವ್ಯಕ್ತಿಗಳಾಗಿದ್ದರೂ ಕೂಡ ಅವರು ಎಂದೂ ಬೇರೆ ಬೇರೆ ಜನಾಂಗದಲ್ಲಿ ವಿವಾದಗಳನ್ನಾಗಲೀ, ಘರ್ಷಣೆಗಳನ್ನಾಗಲೀ ಉಂಟಾಗುವಂತೆ ಮಾಡಿರಲಿಲ್ಲ. ಇವರ ಜೀವನ ಮತ್ತು ಪ್ರತಿಪಾದಿಸಿದ ಅವರ ಭೋದನೆಗಳು ಮಾನವ ಕುಲದ ಮುಂದೆ ಉದಾತ್ತ ಮೌಲ್ಯಗಳನ್ನು ಇರಿಸಿದ್ದವು. ಮತ್ತು ಕಾಲ ಕಳೆದಂತೆ ಕೂಡ ಜ್ಞಾಪಿಸಲ್ಪಡುತ್ತವೆ ಎಂಬ ಕಾರಣದಿಂದಾಗಿ ಸರ್ಕಾರ ಇವರೆಲ್ಲರ ಜಯಂತಿಯನ್ನು ಆಚರಿಸಲು ಆಯ್ಕೆಮಾಡಿಕೊಂಡಿತು.

ಟಿಪ್ಪು ಜಯಂತಿಯನ್ನು ಆಚರಿಸಬೇಕೆಂಬ ಕರ್ನಾಟಕ ಸರ್ಕಾರದ ನಿರ್ಣಯ ಚರ್ಚೆಗೆ ದಾರಿಮಾಡಿಕೊಟ್ಟಿದೆ. ಟಿಪ್ಪುವಿನ ಪರಂಪರೆ ವಿವಾದಾಸ್ಪದವಾಗಿರುವಾಗ ಅವನ ಜಯಂತಿಯನ್ನು ಆಚರಿಸುವ ಅಗತ್ಯವೇನಿತ್ತು ಎಂದು ಪ್ರಶ್ನಿಸುವಂಥ ಸನ್ನಿವೇಶ ಉಂಟಾಗಿದೆ. ಸರ್ಕಾರವು ಈಗಾಗಲೇ ಕಲುಷಿತಗೊಂಡಿರುವ ನೀರಿನಲ್ಲಿ ಮೀನು ಹಿಡಿಯುತ್ತಿದೆ.

ಅನು : ಸುರೇಂದ್ರ ಕೌಲಗಿ

ಸಾಭಾರ : ಡೆಕ್ಕೆನ್ ಹೆರಾಲ್ಡ್

ಅಮೆರಿಕದಲ್ಲಿ ಕನ್ನಡ ಬಳ್ಳಿ

– ಸಹನಾ ಕಾಂತಬೈಲು

ಅಮೆರಿಕದಲ್ಲಿರುವ ನನ್ನ ತಂಗಿಯ ಮಗಳು ಒಂಬತ್ತು ವರ್ಷದ ಉಪಾಸನಾ ಸ್ಪಷ್ಟವಾಗಿ ಓದುತ್ತಾಳೆ ಹಾಗೂ ತಪ್ಪಿಲ್ಲದಂತೆ ಬರೆಯುತ್ತಾಳೆ. ಇದು ಹೇಗೆ ಸಾಧ್ಯ ಎನ್ನುವುದು ನನ್ನ ಕುತೂಹಲ. ನಮ್ಮ ಕನ್ನಡನಾಡಿನ ಮಕ್ಕಳೇ ಕನ್ನಡದಲ್ಲಿ ಮಾತಾಡಲು ಹಾಗೂ ಬರೆಯಲು ತಡವರಿಸುತ್ತಿರುವ ದಿನಗಳಲ್ಲಿ ಅಮೆರಿಕದಲ್ಲಿನ ಕನ್ನಡ ಕುಟುಂಬದ ಹುಡುಗಿಯೊಬ್ಬಳು ಸುಲಿದ ಬಾಳೆಯ ಹಣ್ಣಿನಂದದಿ ಕನ್ನಡ ಕಲಿಯುವುದು ತಮಾಷೆಯೇ?

ಉಪಾಸನಳ ಸಾಧನೆಗೆ, ಅವಳ ಕನ್ನಡ ಪ್ರೇಮಕ್ಕೆ ಕಾರಣ ಉತ್ತರ ಕ್ಯಾಲಿಫೋರ್ನಿಯಾದ 'ಕನ್ನಡ ಕಲಿ' ಶಾಲೆ. ಉದ್ಯೋಗ ನಿಮಿತ್ತ ಕನ್ನಡನಾಡಿನಿಂದ ದೂರ ಇದ್ದರೂ ತಾಯ್ನಾಡು, ತಾಯ್ನಾಡಿಗಾಗಿ ಹಂಬಲಿಸುವ ಕನ್ನಡಿಗರು ಒಟ್ಟು ಸೇರಿ ತಮ್ಮ ಮಕ್ಕಳಿಗೆ ಕನ್ನಡ ಕಲಿಸುವ ಉದ್ದೇಶದಿಂದ ೧೦ ವರ್ಷದ ಹಿಂದೆ ಶಾಲೆಯೊಂದನ್ನು ತೆರೆಯುವ ಯೋಚನೆ ಮಾಡಿದರು. ಮಿಲ್‌ಪಿಟಾಸ್‌ನ ಕಾರ್ನಿಂಗ್ ಬೀದಿಯಲ್ಲಿರುವ ಕೃಷ್ಣ ದೇವಸ್ಥಾನದಲ್ಲಿ ಸಂಧ್ಯಾ ರವೀಂದ್ರನಾಥ್ ನೇತೃತ್ವದಲ್ಲಿ 'ಕನ್ನಡ ಕಲಿ' ತರಗತಿ ಪ್ರಾರಂಭಿಸಿಯೇ ಬಿಟ್ಟರು. ವಾರದ ರಜಾದಿನ ಅಂದರೆ ಪ್ರತಿ ಶನಿವಾರ ೪ರಿಂದ ೫ಗಂಟೆವರೆಗೆ ಕನ್ನಡ ಕಲಿಕೆಯ ತರಗತಿ ನಡೆಯುತ್ತದೆ. ೫ವರ್ಷದಿಂದ ಮೇಲ್ಪಟ್ಟ ಮಕ್ಕಳು ಇದಕ್ಕೆ ಸೇರಲು ಅರ್ಹರು. ೧ರಿಂದ ೬ನೇ ಕ್ಲಾಸ್ (ಲೆವೆಲ್) ತನಕ ಇದೆ. ಒಂದು ಕ್ಲಾಸಿನಲ್ಲಿ ೨೦ ಮಕ್ಕಳಂತೆ ೩ಸೆಕ್ಷನ್ ಮಾಡಿದ್ದಾರೆ. ಪ್ರತಿ ಕ್ಲಾಸ್‌ನಲ್ಲೂ ೨೦ ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರು ಮತ್ತು ಒಬ್ಬ ಸಹಾಯಕಿ ಇದ್ದಾರೆ. ಸನ್ನಿವೇಲ್, ಕುಪರ್ಟಿನೊ, ಸಾಂಟಾ ಕ್ಲಾರ, ಸ್ಯಾನ್ ಹುಸೆ, ಫ್ರೀಮಾಂಟ್, ಪ್ಲಸೆಂಟನ್, ಡಬ್ಲಿನ್ – ಹೀಗೆ ಸುತ್ತಮುತ್ತಲ ಪ್ರದೇಶಗಳ ಮಕ್ಕಳು ಈ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಹೆಚ್ಚು ಕಡಿಮೆ ಅಮೆರಿಕ ಶಾಲೆಯ ದಿನಚರಿಗೆ ಅನುಗುಣವಾಗಿ ಇದೂ ನಡೆಯುತ್ತದೆ. ಸೆಪ್ಟೆಂಬರ್‌ನಿಂದ ಮೇವರೆಗೆ ತರಗತಿ ನಡೆಯುವ ದಿನಗಳು. ಡಿಸೆಂಬರ್‌ನಲ್ಲಿ ೨ವಾರ ಕ್ರಿಸ್‌ಮಸ್ ರಜೆ. ಉಳಿದಂತೆ ಜೂನ್ ನಿಂದ ಆಗಸ್ಟ್‌ವರೆಗೆ ವಾರ್ಷಿಕ ರಜೆ. ಕರ್ನಾಟಕದಲ್ಲಿನ ಕನ್ನಡ ಶಾಲೆಗಳ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ. ಆದರೆ, ಅಮೆರಿಕದಲ್ಲಿನ 'ಕನ್ನಡ ಕಲಿ' ಶಾಲೆಯಲ್ಲಿ ಆರಂಭದಲ್ಲಿ

೬೦ ಮಕ್ಕಳಿದ್ದರು; ಈಗ ೨೦೦ ಮಕ್ಕಳಿರುವುದು ಶಾಲೆಯ ಜನಪ್ರಿಯತೆಗೆ ಸಾಕ್ಷಿ.

ತಾಯಿಯೇ ಮೊದಲ ಗುರು ಎಂಬಂತೆ ಇಲ್ಲಿ ಕಲಿಸುವವರೆಲ್ಲರೂ ಮಹಿಳೆಯರೇ! ಎಲ್ಲರೂ ಎಂಜಿನಿಯರ್, ಅಕೌಟೆಂಟ್, ಟೀಚರ್, ಡಾಕ್ಟರ್ ಇತ್ಯಾದಿ ಜವಾಬ್ದಾರಿಯುತ ಉದ್ಯೋಗ ಮಾಡುವವರು. ವೃತ್ತಿಯ ಒತ್ತಡದ ನಡುವೆ ಬಿಡುವು ಮಾಡಿಕೊಂಡು, ಪ್ರತಿಫಲಾಪೇಕ್ಷೆ ಇಲ್ಲದೆ ಉಚಿತವಾಗಿ ಮಕ್ಕಳಿಗೆ ಕನ್ನಡ ಕಲಿಸುತ್ತಾರೆಂದರೆ ಅವರ ಕನ್ನಡಾಭಿಮಾನವನ್ನು ಮೆಚ್ಚಲೇಬೇಕು. ಪುಸ್ತಕ ಮತ್ತು ಕಟ್ಟಡ ಬಾಡಿಗೆಯ ಹಣ ಮಾತ್ರ ಅವರು ಸಂಗ್ರಹಿಸುತ್ತಾರೆ.

ಈಗಿನ ಪ್ರಿನ್ಸಿಪಾಲರ ಹೆಸರು ಜ್ಯೋತಿ ಶೇಖರ್. ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್. ವಿಪರ್ಯಾಸವೆಂದರೆ ಅವರು ಕನ್ನಡಿಗರಲ್ಲ, ಒರಿಸ್ಸಾದವರು. ತೆಲಗು ಅವರ ಮಾತೃಭಾಷೆ. ಮದುವೆಯಾಗಿ ಬೆಂಗಳೂರಿಗೆ ಬಂದ ಮೇಲೆ ಕನ್ನಡ ಕಲಿತವರು. ಅವರ ಜೊತೆ ೨೦ ಮಂದಿ ನಗುಮುಖದ, ಲವಲವಿಕೆಯ ಟೀಚರ್‌ಗಳಿದ್ದಾರೆ. ಮಕ್ಕಳು ಕನ್ನಡ ಪಾಠ ಮಾತ್ರ ಇಲ್ಲಿ ಕಲಿಯುತ್ತಿಲ್ಲ. ಹಾಡು, ನಾಟಕ, ನೃತ್ಯ ಇತ್ಯಾದಿಗಳನ್ನೂ ಕಲಿಯುತ್ತಾರೆ. ಇದಕ್ಕಾಗಿ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುತ್ತಾರೆ. 'ಉತ್ತರ ಕ್ಯಾಲಿಫೋರ್ನಿಯ ಕನ್ನಡಕೂಟ' ದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮಕ್ಕಳಿಗೆ ತರಬೇತಿ ಕೊಡುತ್ತಾರೆ. ಅದರ ವಾರ್ಷಿಕ ಸಂಚಿಕೆ 'ಸುವರ್ಣ ಸೇತು'ಗೆ ಬರಹಗಳನ್ನೂ ಬರೆಸುತ್ತಾರೆ.

"ಇಲ್ಲಿನ ಮಕ್ಕಳಿಗೆ ಕನ್ನಡನಾಡು – ನುಡಿಯ ಬಗ್ಗೆ ತಿಳಿಸಿಕೊಡಬೇಕು. ಇಂಗ್ಲೀಷ್ ವಾತಾವರಣದಲ್ಲಿ ಬೆಳೆದ ಅವರಿಗೆ ಕನ್ನಡ ಅಂದ್ರೆ ಏನು ಅಂತ ಗೊತ್ತಿರುವುದಿಲ್ಲ. ಭಾರತಕ್ಕೆ ಹೋದಾಗ ಅಜ್ಜ – ಅಜ್ಜಿ ಜೊತೆ ಮಾತಾಡುವುದಕ್ಕಾದರೂ ಮಕ್ಕಳು ಕನ್ನಡ ಕಲಿಯಬೇಕು. ತಾಯ್ನೆಲದಿಂದ ದೂರ ಬಂದ ಮೇಲೆ ಅದರ ಬೆಲೆ ಗೊತ್ತಾಗುತ್ತದೆ" ಎಂದು ಹೇಳುತ್ತಾರೆ ಪ್ರಿನ್ಸಿಪಾಲ್ ಜ್ಯೋತಿ ಶೇಖರ್.

ಜ್ಯೋತಿ ಶೇಖರ್ ಅವರ ಇ – ಮೇಲ್ ವಿಳಾಸ

: jyothi-shekar@yahoo.com

ಸಾಭಾರ : ಪ್ರಜಾವಾಣಿ, ೧ ನವೆಂಬರ್ ೨೦೧೫

ನ್ಯಾಯಾಧೀಶರ ನೇಮಕಾತಿ ವ್ಯವಸ್ಥೆ 'ಕೊಲಿಜಿಯಂ'

ಸಂವಿಧಾನದಲ್ಲಿ ಕೊಲಿಜಿಯಂ ವ್ಯವಸ್ಥೆಯ ಬಗ್ಗೆ ಉಲ್ಲೇಖವೇ ಇಲ್ಲ

– ಕೆ.ವಿ.ಧನಂಜಯ
(ಸುಪ್ರೀಂ ಕೋರ್ಟ್‌ನ ವಕೀಲ)

ನ್ಯಾಯಮೂರ್ತಿಗಳನ್ನು ನ್ಯಾಯಮೂರ್ತಿಗಳೇ ನೇಮಿಸುವ ವ್ಯವಸ್ಥೆ ಜಗತ್ತಿನ ಇನ್ನಾವುದೇ ಪ್ರಜಾಪ್ರಭುತ್ವ ಅಥವಾ ಸರ್ವಾಧಿಕಾರಿ ರಾಷ್ಟ್ರದಲ್ಲಿ ಇಲ್ಲ. ಈ ವ್ಯವಸ್ಥೆ ಜಾರಿಯಲ್ಲಿರುವುದು ಭಾರತದಲ್ಲಿ ಮಾತ್ರ – ಅದೂ, ಕಳೆದ ಎರಡು ದಶಕಗಳಿಂದ. ಆದರೆ, ಇಂಥದ್ದೊಂದು ವ್ಯವಸ್ಥೆ ಇರಲಿ ಎಂದು ನಮ್ಮ ಸಂವಿಧಾನ ಎಲ್ಲಿಯೂ ಹೇಳಿಲ್ಲ.

ನಮ್ಮ ಸಂವಿಧಾನವನ್ನು ಒಂದು ಸಾವಿರ ಬಾರಿ ಓದಿದರೂ, ಕೊಲಿಜಿಯಂ ಬಗ್ಗೆ ತೃಣಮಾತ್ರದ ಉಲ್ಲೇಖ ಕೂಡ ಅದರಲ್ಲಿ ಸಿಗದು. ಸುಪ್ರೀಂ ಕೋರ್ಟ್‌ನ ನಾಲ್ವರು ಹಿರಿಯ ನ್ಯಾಯಮೂರ್ತಿಗಳು, ದೇಶದ ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿಗಳನ್ನು ನೇಮಿಸಬೇಕು ಎಂಬ ಸಲಹಾ ಸ್ವರೂಪದ ಮಾತು ಕೂಡ ಸಂವಿಧಾನದಲ್ಲಿ ಎಲ್ಲಿಯೂ ಇಲ್ಲ.

ಆದರೂ, ಸುಪ್ರೀಂ ಕೋರ್ಟ್‌ನ ನಾಲ್ವರು ಹಿರಿಯ ನ್ಯಾಯಮೂರ್ತಿಗಳು ಇಂಥದ್ದೊಂದು ಅಧಿಕಾರ ಚಲಾಯಿಸುತ್ತಿದ್ದಾರೆ. ಇದೊಂದು ದುರಂತ ಅನಿಸುವುದಿಲ್ಲವೇ? ಇದೆಲ್ಲ ಆರಂಭವಾಗಿದ್ದು ೧೯೯೩ರಲ್ಲಿ. ಕಾಕತಾಳೀಯ ಎಂಬಂತೆ, ಆ ವರ್ಷದ ನಂತರದಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದವರೆಲ್ಲವೂ ದುರ್ಬಲ ಸರ್ಕಾರಗಳು!

ಕೆಲವೊಂದು ವಿಚಾರಗಳ ಬಗ್ಗೆ ನಮ್ಮಲ್ಲಿ ಸ್ಪಷ್ಟತೆ ಇರಲಿ; ನ್ಯಾಯಾಲಯಗಳ ತೀರ್ಪುಗಳು ಸರಿಯಾಗಿ ಮತ್ತು ಸಮರ್ಪಕವಾಗಿಯೇ ಇರುತ್ತವೆ ಎಂದು ಬಹುತೇಕರು ಭಾವಿಸುತ್ತಾರೆ. ನೀವೂ ಹಾಗೇ ಭಾವಿಸುತ್ತೀರಿ, ಅಲ್ಲವೇ? ಆದರೆ, ನ್ಯಾಯಾಲಯಗಳು ನೀಡುವ ಆದೇಶಗಳು ಸರಿಯಾಗಿಯೇ ಇರುತ್ತವೆ ಎಂದು ಕಾನೂನು ಭಾವಿಸುವುದಿಲ್ಲ. ನಮ್ಮ ನ್ಯಾಯಶಾಸ್ತ್ರ ಕೂಡ ನ್ಯಾಯಾಲಯಗಳ ಆದೇಶಗಳೆಲ್ಲ ಸರಿಯಾಗಿಯೇ ಇರುತ್ತವೆ ಎಂದು ಹೇಳುವುದಿಲ್ಲ. ಆದರೆ, ನ್ಯಾಯಾಲಯಗಳು ನೀಡಿದ ಆದೇಶಕ್ಕೆ ಸಂಬಂಧಪಟ್ಟವರೆಲ್ಲ ಬದ್ಧರಾಗಬೇಕು ಎಂದಷ್ಟೇ ಕಾನೂನು ನಿರೀಕ್ಷಿಸುತ್ತದೆ.

ಆದ್ದರಿಂದ, ಕಾನೂನಿನ ಜ್ಞಾನವೇ ಇಲ್ಲದೆ, ಸಂಪೂರ್ಣ ಅಸಂಬದ್ಧವಾದ ತೀರ್ಪುಗಳು ಕೂಡ ನ್ಯಾಯಾಲಯಗಳಿಂದ ಹೊರಬರುವ ಸಾಧ್ಯತೆ ನಿಚ್ಚಳವಾಗಿರುತ್ತದೆ. ಆದರೂ ಅಂತಹ ತೀರ್ಪಿಗೆ ತಲೆಬಾಗಬೇಕಾಗುತ್ತದೆ; ತೀರ್ಪಿನಲ್ಲಿ ಹೇಳಿದ್ದನ್ನು ಪಾಲಿಸಬೇಕಾಗುತ್ತದೆ. ಆ ತೀರ್ಪು ಸಂಪೂರ್ಣವಾಗಿ ಸರಿ ಎಂಬ ಕಾರಣಕ್ಕೆ ಅಲ್ಲ, ಆದರೆ ತೀರ್ಪಿಗೆ ಬದ್ಧವಾಗಿರಬೇಕು ಎಂಬ ಕಾರಣಕ್ಕೆ.

ಈ ದೃಷ್ಟಿಕೋನದಿಂದ ನೋಡಿದಾಗ, ವಿವೇಕಯುತವಲ್ಲದ ಸಾಕಷ್ಟು ಆದೇಶಗಳು

ಸುಪ್ರೀಂ ಕೋರ್ಟ್ ಸೇರಿದಂತೆ ನಮ್ಮ ವಿವಿಧ ಹಂತದ ನ್ಯಾಯಾಲಯಗಳಿಂದ ಹೊರಬಂದಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಕಾರ್ಯಾಂಗವನ್ನು ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯಿಂದ ಹೊರಗಿಟ್ಟರೆ ಮಾತ್ರ 'ನ್ಯಾಯಾಂಗದ ಸ್ವಾತಂತ್ರ್ಯ' ರಕ್ಷಣೆಯಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಭಾವಿಸಿದೆ. ಇದು ನಿರರ್ಥಕ ಹಾಗೂ ಅಸಂಬದ್ಧ ನಿಲುವು. ಇಂಥ ನಿಲುವು ತಾಳಲು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶ ಇಲ್ಲ. ಆದರೆ, ಕಾರ್ಯಾಂಗವು ತನ್ನ ಕೈಗೊಂಬೆಗಳನ್ನು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳನ್ನಾಗಿ ನೇಮಿಸುವುದೇ ಇಲ್ಲವೆಂದು ನಾನು ಹೇಳುತ್ತಿಲ್ಲ. ಅಂಥ ಸಾಧ್ಯತೆ ಖಂಡಿತ ಇದೆ. ಅಂಥ ಸಾಧ್ಯತೆ ಇಲ್ಲವೇ ಇಲ್ಲ ಎಂದು ಮೂರ್ಖ ಮಾತ್ರ ಹೇಳಬಲ್ಲ. ತನಗೆ ವಿಧೇಯರಾಗಿರುವ ವ್ಯಕ್ತಿಗಳೇ ನ್ಯಾಯಾಂಗದ ಉನ್ನತ ಹುದ್ದೆಗಳಲ್ಲಿ ಇರಬೇಕು ಎಂದು ಕಾರ್ಯಾಂಗ ಬಯಸುತ್ತದೆ. ಆದರೆ ಇಂಥದ್ದೊಂದು ಅಪಾಯದ ಮುನ್ಸೂಚನೆ ನಮ್ಮ ಸಂವಿಧಾನಕ್ಕೆ ಇರಲಿಲ್ಲವೇ? ಸಂವಿಧಾನ ಅಂತಹ ಅಪಾಯದಿಂದ ರಕ್ಷಣೆ ಪಡೆದಿಲ್ಲವೇ? ಪ್ರಜಾಪ್ರಭುತ್ವ ವ್ಯಯಸ್ಥೆ, ಚುನಾಯಿತ ಸರ್ಕಾರ ಇರುವ ಯಾವುದೇ ವ್ಯವಸ್ಥೆಯಲ್ಲಿ ಇಂಥದ್ದೊಂದು ಅಪಾಯ ಅಂತರ್ಗತವಾಗಿ ಇದ್ದೇ ಇರುತ್ತದೆ. ಹಾಗಾಗಿ, ಈ ಪ್ರಶ್ನೆಯನ್ನೇ ಬುನಾದಿಯನ್ನಾಗಿ ಮಾಡಿಕೊಂಡು, ತರ್ಕ ಶುರುಮಾಡುವುದು ತಪ್ಪು.

ಈ ತಪ್ಪು ಪ್ರಶ್ನೆಯನ್ನು ೧೯೯೩ರಲ್ಲಿ ಪದೇ ಪದೇ ಕೇಳಿಕೊಂಡ ಸುಪ್ರೀಂ ಕೋರ್ಟ್, ಅದಕ್ಕೆ ಕೊಲಿಜಿಯಂ (ನ್ಯಾಯಮೂರ್ತಿಗಳನ್ನು ನ್ಯಾಯಮೂರ್ತಿಗಳೇ ನೇಮಿಸುವ ವ್ಯವಸ್ಥೆ) ರೂಪದಲ್ಲಿ ಅತಿ ಕೆಟ್ಟ ಉತ್ತರವನ್ನು ಪಡೆದುಕೊಂಡಿತು.

ಕೊಲಿಜಿಯಂ ವ್ಯವಸ್ಥೆ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಿದೆ? ಸಂವಿಧಾನ ಹೇಳಿರುವ ನ್ಯಾಯಮೂರ್ತಿಗಳ ನೇಮಕ ವ್ಯವಸ್ಥೆಗಿಂತ ಕೊಲಿಜಿಯಂ ವ್ಯವಸ್ಥೆ ಚೆನ್ನಾಗಿದೆಯೇ? ಇದಕ್ಕೆ ಉತ್ತರವನ್ನು ತೀರಾ ಸಾಮಾನ್ಯನಲ್ಲಿ ಕೇಳಬೇಕು. ಕೊಲಿಜಿಯಂ ವ್ಯವಸ್ಥೆ ಜನ ಸಾಮಾನ್ಯನ ಜೀವನ ಮತ್ತು ಈ ದೇಶದ ವ್ಯವಸ್ಥೆಯಲ್ಲಿ ಯಾವ ಬದಲಾವಣೆಯನ್ನೂ ತಂದಿಲ್ಲ ಎಂದೇ ಹೇಳಬೇಕಾಗುತ್ತದೆ. ಇವತ್ತಿಗೂ ಕೋಟ್ಯಂತರ ಪ್ರಕರಣಗಳು ವಿಚಾರಣೆಯ ಹಂತದಲ್ಲೇ ಕೊಳೆಯುತ್ತಿವೆ. ಕೆಲವು ಪ್ರಕರಣಗಳು ದಶಕಗಳಿಂದ ಹಾಗೇ ಉಳಿದಿವೆ. ನಮ್ಮ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿ ಗಮನಾರ್ಹ ಪ್ರಮಾಣದ ಅಸಾಮರ್ಥ್ಯ ಕೂಡ ಇದೆ.

ಸುಪ್ರೀಂ ಕೋರ್ಟ್ ಎದುರಿದ್ದ ಶೇಕಡ ೭ರಷ್ಟು ಪ್ರಕರಣಗಳು ಮಾತ್ರ ಸಾಂವಿಧಾನಿಕ ಪ್ರಶ್ನೆಗಳನ್ನು ಒಳಗೊಂಡಿದ್ದವು, ಉಳಿದವೆಲ್ಲ ತೀರಾ ಸಾಮಾನ್ಯ ಪ್ರಕರಣಗಳಾಗಿದ್ದವು ಎಂಬುದು ಕಳೆದ ವರ್ಷ ನಾವು ನಡೆಸಿದ ಅಧ್ಯಯನದಿಂದ ಗೊತ್ತಾಯಿತು. ಸೂಕ್ತ ರೀತಿಯಲ್ಲಿ ಪರಿಶೀಲಿಸದೆ, ವಿವಿಧ ವಿಚಾರಗಳ ಬಗ್ಗೆ ಸುಪ್ರೀಂ ಕೋರ್ಟ್ ನೀಡಿರುವ ಪರಸ್ಪರ ತದ್ವಿರುದ್ಧ ಎನ್ನಬಹುದಾದ ಹಲವು ತೀರ್ಪುಗಳ ಪರಿಣಾಮವಾಗಿ, ಕಾನೂನು ನಿರ್ದಿಷ್ಟವಾಗಿ ಏನು ಹೇಳುತ್ತದೆ ಎಂಬುದೇ ತಿಳಿಯದಂತಾಗಿದೆ. ಹೈಕೋರ್ಟ್‌ಗಳ ಬಗ್ಗೆ ಹೆಚ್ಚು ಹೇಳದಿರುವುದೇ ಲೇಸು.

ಪರಸ್ಪರ ತದ್ವಿರುದ್ಧ ತೀರ್ಪುಗಳಿಂದಾಗಿ ಜನಸಾಮಾನ್ಯ ಪಾಲಿಸಬೇಕಾದ ಅನೇಕ

ಕಾನೂನುಗಳು ಗೊಂದಲದ ಗೂಡಾಗಿವೆ. ಪರಿಣಾಮವಾಗಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳಿಗೆ ಕಕ್ಷಿದಾರರು ಹಾಗೂ ವಕೀಲರ ಮೇಲೆ ತೀವ್ರ ಸ್ವರೂಪದ ಅಧಿಕಾರ ಸಿಕ್ಕಿದೆ. ತಮ್ಮ ಪರ ಆದೇಶ ನೀಡಿ ಎಂದು ವಕೀಲರು ನ್ಯಾಯಮೂರ್ತಿಗಳನ್ನು ವಿಧವಿಧವಾಗಿ ಬೇಡಬೇಕಿದೆ. ವಸ್ತುಸ್ಥಿತಿ ಆಧರಿಸದೆ ನ್ಯಾಯಮೂರ್ತಿಗಳು ಆದೇಶ ನೀಡಿದಾಗಲೆಲ್ಲ ಕಾನೂನು ಇನ್ನಷ್ಟು ಮಸುಕಾಗುತ್ತದೆ.

ಕಳೆದ ಎರಡು ದಶಕಗಳಿಂದ ಸುಪ್ರೀಂ ಕೋರ್ಟ್‌ನ ನಾಲ್ಕು ಹಿರಿಯ ನ್ಯಾಯಮೂರ್ತಿಗಳು ಕೇಂದ್ರ ಸರ್ಕಾರವನ್ನು ಬದಿಗೊತ್ತಿ ದೇಶದ ನ್ಯಾಯಾಂಗದ ಆಡಳಿತ ನಡೆಸುತ್ತಿರುವುದರಿಂದ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ಸೇವಾ ಸೌಲಭ್ಯ ಹೆಚ್ಚಿಸಲು ಕೇಂದ್ರ ಸರ್ಕಾರ ಯಾವುದೇ ಆಸಕ್ತಿ ತೋರುತ್ತಿಲ್ಲ – ನೀವೇ ಆಡಳಿತ ನಡೆಸಿಕೊಳ್ಳುತ್ತಿರುವುದರಿಂದ ನಿಮ್ಮ ಸೇವಾ ಸೌಲಭ್ಯಗಳ ಬಗೆಗಿನ ವಿಚಾರಗಳನ್ನು ನೀವೇ ಬಗೆಹರಿಸಿಕೊಳ್ಳಿ ಎಂದು ಕೇಂದ್ರ ಸುಮ್ಮನಾಗಿಬಿಟ್ಟಿದೆ.

ನ್ಯಾಯಮೂರ್ತಿಗಳಿಗೆ ಲಭಿಸುತ್ತಿರುವುದು ಕನಿಷ್ಠ ಮೊತ್ತದ ವೇತನ. ನ್ಯಾಯಮೂರ್ತಿಗಳ ಮೇಲೆ ಕೆಲಸದ ಒತ್ತಡ ದೊಡ್ಡ ಪ್ರಮಾಣದಲ್ಲೇ ಇದೆ. ಆದರೂ ನಾವು ಅವರಿಗೆ ನೀಡುತ್ತಿರುವ ವೇತನ ತೀರಾ ಕಡಿಮೆ.

ಕೊಲಿಜಿಯಂ ವ್ಯವಸ್ಥೆಯ ಕಾರಣ ಹೈಕೋರ್ಟ್‌ಗಳಲ್ಲಿ ಅನರ್ಹರು ಸಾಕಷ್ಟು ಸಂಖ್ಯೆಯಲ್ಲಿ ನೇಮಕಗೊಂಡಿದ್ದಾರೆ. ಅಂಥವರಲ್ಲಿ ಸಾಕಷ್ಟು ಮಂದಿ ಸುಪ್ರೀಂ ಕೋರ್ಟ್‌ಗೆ ಬಡ್ತಿಯನ್ನೂ ಪಡೆದಿದ್ದಾರೆ. ಉತ್ತರದಾಯಿತ್ವ ಮತ್ತು ಪಾರದರ್ಶಕತೆ ಬಗ್ಗೆ ನಮ್ಮ ನ್ಯಾಯಮೂರ್ತಿಗಳಿಗೆ ಅದೆಷ್ಟು ಭಯ ಎಂದರೆ, ನ್ಯಾಯಾಲಯದ ಕಲಾಪಗಳನ್ನು ಎಲೆಕ್ಟ್ರಾನಿಕ್ ಸಾಧನ ಬಳಸಿ ದಾಖಲಿಸಿಕೊಳ್ಳಬೇಕು ಎಂಬ ಬೇಡಿಕೆಗಳನ್ನು ಅವರು ಮತ್ತೆ ಮತ್ತೆ ತಿರಸ್ಕರಿಸಿದ್ದಾರೆ.

ಕೊಲಿಜಿಯಂ ವ್ಯವಸ್ಥೆ ಈ ದೇಶಕ್ಕೆ ಯಾವುದೇ ಮಹತ್ವದ ರೀತಿಯಲ್ಲಿ ಸಹಾಯ ಮಾಡಿದೆ ಎನ್ನಲು ಆಧಾರ ಇಲ್ಲ. ಹೈಕೋರ್ಟ್‌ಗಳಲ್ಲಿ ಮತ್ತು ಸುಪ್ರೀಂ ಕೋರ್ಟ್‌ನ ಕೆಲವೊಂದು ಸ್ತರಗಳಲ್ಲಿ ಸಾಕಷ್ಟು ಪ್ರಮಾಣದ ಭ್ರಷ್ಟಾಚಾರ ಇದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ದೇಶದಾದ್ಯಂತ ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಿಕ್ಕಿಬಿದ್ದ ಪ್ರಬಲ ರಾಜಕಾರಣಿಗಳು ಬಯಸುವ ಆದೇಶಗಳನ್ನೇ ನಮ್ಮ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳು ಹೆಚ್ಚಾಗಿ ನೀಡುತ್ತಿವೆ. ಹಾಗೂ ಅಂತಹ ಪ್ರಕರಣಗಳಲ್ಲಿ ಕಾನೂನನ್ನೇ ವಿಧವಿಧವಾಗಿ ತಿರುಚಿಹಾಕುತ್ತಿದೆ. ಹೀಗಿರುವಾಗ, 'ನ್ಯಾಯಾಂಗ ನೇಮಕಾತಿಯಲ್ಲಿ ಕೇಂದ್ರ ಸರ್ಕಾರವನ್ನು ನಂಬಲು ಆಗದು' ಎಂದು ಹೇಳುವ ನೈತಿಕ ಸ್ಥೈರ್ಯವನ್ನು ಸುಪ್ರೀಂ ಕೋರ್ಟ್ ಖಂಡಿತ ಈಗ ಪಡೆದಿಲ್ಲ. ಹಿಂದೊಮ್ಮೆ ಹೊಂದಿದ್ದರೆ, ಈಗ ಅದನ್ನು ಕಳೆದುಕೊಂಡಿದೆ.

ಕೇಂದ್ರದಲ್ಲಿ ದುರ್ಬಲ ಸರ್ಕಾರ ಇರುವವರೆಗೆ ಕೊಲಿಜಿಯಂ ವ್ಯವಸ್ಥೆ ಮುಂದುವರಿಯುತ್ತದೆ. ದೇಶಕ್ಕೆ ಒಬ್ಬ ಸಮರ್ಥ ಪ್ರಧಾನಿ ದೊರೆತಾಗ ಮಾತ್ರ ಕೊಲಿಜಿಯಂ ವ್ಯವಸ್ಥೆ ಕುಸಿಯುತ್ತದೆ. ಅಲ್ಲಿಯವರೆಗೆ, ಈ ವ್ಯವಸ್ಥೆ ಜೊತೆ ಸಹಬಾಳ್ವೆ ಅನಿವಾರ್ಯ.

ಮೊದಲೇ ಹೇಳಿದಂತೆ, ನ್ಯಾಯಾಲಯದ ತೀರ್ಪಿಗೆ ಒಳಪಟ್ಟವರೆಲ್ಲ ಅದಕ್ಕೆ

ಬದ್ಧರಾಗಿರಲೇಬೇಕು. ಆದರೆ, ಈ ನಿಯಮಕ್ಕೂ ಒಂದು ವಿನಾಯಿತಿ ಇದೆ. ಎಲ್ಲಿಯವರೆಗೆ ನ್ಯಾಯಾಂಗ ತನ್ನ ವ್ಯಾಪ್ತಿ ಮೀರದೆ ನಡೆದುಕೊಳ್ಳುವುದೋ, ಅಲ್ಲಿಯವರೆಗೆ ಮಾತ್ರ ಆದೇಶಕ್ಕೆ ಬದ್ಧರಾಗಿರಬೇಕಾಗುತ್ತದೆ. ನ್ಯಾಯಾಲಯ ತನ್ನ ವ್ಯಾಪ್ತಿ ಮೀರಿ ಆದೇಶ ಹೊರಡಿಸಿದಾಗ, ಆಗ ಉಳಿದ ಅಂಗಗಳ ಜೊತೆ ಸಂಘರ್ಷಕ್ಕೆ ನ್ಯಾಯಾಂಗವೇ ಎಡೆಮಾಡಿಕೊಟ್ಟಂತೆ ಆಗುತ್ತದೆ. ಆದೇಶವನ್ನು ಕೆಲವರು ಧಿಕ್ಕರಿಸಲೇಬೇಕಾದ ಅನಿವಾರ್ಯತೆಯನ್ನು ನ್ಯಾಯಾಂಗವೇ ತಂದುಕೊಟ್ಟಂತೆ ಆಗುತ್ತದೆ. ನ್ಯಾಯಾಂಗವು ತನ್ನ ವ್ಯಾಪ್ತಿಯನ್ನು ಮೀರಿ ಆದೇಶ ಹೊರಡಿಸಿದೆಯೇ ಎಂಬ ಪ್ರಶ್ನೆ ಸಾಮಾನ್ಯ ಸಂದರ್ಭಗಳಲ್ಲಿ ಎದುರಾಗುವುದಿಲ್ಲ. ಅದರ ವ್ಯಾಪ್ತಿ ಏನೆಂಬುದು ಎಲ್ಲರಿಗೂ ತಿಳಿದಿರುತ್ತದೆ.

ಕೊಲಿಜಿಯಂ ಎಂಬ ವ್ಯವಸ್ಥೆಯ ಬಗ್ಗೆ ಸಂವಿಧಾನದಲ್ಲಿ ಉಲ್ಲೇಖ ಇದೆ ಎಂದು ಸುಪ್ರೀಂ ಕೋರ್ಟ್ ಕೂಡ ಹೇಳುತ್ತಿಲ್ಲ. ಸಂವಿಧಾನವನ್ನು ಕಾಪಾಡುವ ನೆಪದಲ್ಲಿ ತನ್ನ ವ್ಯಾಪ್ತಿಯನ್ನು ಮೀರಿ ವರ್ತಿಸಿದ್ದೇನೆ ಎಂದು ಸುಪ್ರೀಂ ಕೋರ್ಟ್‌ಗೆ ಸ್ಪಷ್ಟವಾಗಿ ತಿಳಿದಿದೆ. ಈ ದೇಶಕ್ಕೆ ಒಬ್ಬ ಪ್ರಬಲ ಪ್ರಧಾನಿ ದೊರೆತಾಗ ಆತ ನ್ಯಾಯಾಲಯಕ್ಕೆ ಗೌರವಪೂರ್ವಕವಾಗಿ, 'ತೀರ್ಪು ನಿಮ್ಮ ವ್ಯಾಪ್ತಿಯನ್ನು ಮೀರಿದೆ. ಹಾಗಾಗಿ ಅದನ್ನು ಪಾಲಿಸಲಾಗದು' ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಆಗ ಸುಪ್ರೀಂ ಕೋರ್ಟ್‌ಗೆ ತನ್ನ ಆದೇಶ ಹಿಂಪಡೆಯದೆ ಬೇರೆ ದಾರಿ ಇರುವುದಿಲ್ಲ. ನ್ಯಾಯಾಲಯಕ್ಕೆ ಇಷ್ಟು ಮಾತು ಹೇಳುವ ಧೈರ್ಯವನ್ನು ೧೯೪೭ರಿಂದ ಈವರೆಗಿನ ಯಾವುದೇ ಪ್ರಧಾನಿ ತೋರದಿರುವುದು ದೇಶದ ದುರಂತ.

ಸಂವಿಧಾನವನ್ನು ಅರ್ಥೈಸಿಕೊಡಿ ಎಂದು ಸುಪ್ರೀಂ ಕೋರ್ಟ್‌ಅನ್ನು ೧೯೯೩ರಲ್ಲಿ ಕೇಳಿಸಿಕೊಂಡಾಗ ನ್ಯಾಯಾಂಗ, ಒಂದು ಹೊಸ ರಾಜಕೀಯ ನೀತಿಯನ್ನೇ ಹುಟ್ಟುಹಾಕಿ, ದೇಶದ ಸಂವಿಧಾನದ ಭಾಗವೊಂದನ್ನು ಅದಲು ಬದಲು ಮಾಡಿತು. ದೇಶದ ಒಳಿತಿಗಾಗಿ ಈ ಕ್ರಮ ಅನುಸರಿಸುತ್ತಿರುವುದಾಗಿ ನ್ಯಾಯಾಂಗ ಹೇಳುತ್ತಿದೆಯಾದರೂ, ಅದನ್ನು ಪ್ರಶ್ನೆ ಮಾಡಬೇಕಾದ ಪ್ರಬಲ ಪ್ರಧಾನಿಯೊಬ್ಬ ಸಿಗುವವರೆಗೂ ನ್ಯಾಯಾಂಗಕ್ಕೆ ತನ್ನ ತಪ್ಪಿನ ಅರಿವಾಗುವ ಲಕ್ಷಣಗಳು ಕಾಣುತ್ತಿಲ್ಲ.

******

ಪ್ರಧಾನಿ ಮತ್ತು ವಿರೋಧ ಪಕ್ಷದ ನಾಯಕ

– ಕೆ.ಎಂ.ನಟರಾಜ್

(ಹೆಚ್ಚುವರಿ ಸಾಲಿಸಿಟರ್ ಜನರಲ್)

ಸಂವಿಧಾನದ ೯೯ನೇ ತಿದ್ದುಪಡಿ ಅಸಾಂವಿಧಾನಿಕ ಎಂದು ಹೇಳಿ ಸುಪ್ರೀಂ ಕೋರ್ಟ್, ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ (ಎನ್‌ಜೆಎಸಿ) ಕಾಯ್ದೆಯನ್ನು ಅಸಿಂಧುಗೊಳಿಸಿದೆ. ಎನ್‌ಜೆಎಸಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದಾಗ ನಾನು ಅದರ ಪರ ನಿಲುವು ತಾಳಿದ್ದೆ. ಈಗಲೂ ನನ್ನ ಒಲವು ಎನ್‌ಜೆಎಸಿ ಪರವಾಗಿಯೇ ಇದೆ.

ಈ ತೀರ್ಪು ನೀಡುವ ಸಂದರ್ಭದಲ್ಲಿ, ಎನ್‌ಜೆಎಸಿ ಕಾಯ್ದೆ ಸಂವಿಧಾನದ ಮೂಲ ಸ್ವರೂಪಕ್ಕೆ ನಿಜಕ್ಕೂ ಧಕ್ಕೆ ತರುತ್ತದೆಯೇ ಎಂಬುದನ್ನು ಸೂಕ್ಷ್ಮವಾಗಿ ಗುರುತಿಸುವಲ್ಲಿ

ಸಂವಿಧಾನ ಪೀಠ ಎಡವಿದೆ. ನ್ಯಾಯಾಂಗ ಮತ್ತು ನ್ಯಾಯಮೂರ್ತಿಗಳ ಬಗ್ಗೆ ಅಪರಿಮಿತ ಗೌರವ ಇಟ್ಟುಕೊಂಡೇ ನಾನು ಈ ಮಾತು ಹೇಳುತ್ತಿದ್ದೇನೆ. ಕೇಶವಾನಂದ ಭಾರತಿ ಮತ್ತು ಕೇರಳ ಸರ್ಕಾರದ ನಡುವಿನ ಪ್ರಕರಣದಲ್ಲಿ ಮೈದಳೆದ 'ಸಂವಿಧಾನದ ಮೂಲ ಸ್ವರೂಪ'ವನ್ನು, ಈ ಪ್ರಕರಣದಲ್ಲಿ ಸರಿಯಾಗಿ ವ್ಯಾಖ್ಯಾನಿಸದಿರುವುದು ಒಂದು ಸಾಂವಿಧಾನಿಕ ಪ್ರಮಾದ.

ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳಿಗೆ ಪ್ರತ್ಯೇಕ ಅಸ್ತಿತ್ವ ಮತ್ತು ಅವುಗಳದ್ದೇ ಆದ ಕಾರ್ಯವ್ಯಾಪ್ತಿಯನ್ನು ಸಂವಿಧಾನ ನೀಡಿದೆ. ಮೂರು ಅಂಗಗಳಿಗೆ ನೀಡಿರುವ ಪ್ರತ್ಯೇಕ ಕಾರ್ಯವ್ಯಾಪ್ತಿ ಕೂಡ ಸಂವಿಧಾನದ 'ಮೂಲ ಸ್ವರೂಪ' ಗಳಲ್ಲಿ ಒಂದು. 'ನ್ಯಾಯಾಂಗದ ಸ್ವಾತಂತ್ರ್ಯ' ವು ಸಂವಿಧಾನದ ಮೂಲ ಸ್ವರೂಪಗಳಲ್ಲಿ ಒಂದು ಎಂಬ ಬಗ್ಗೆ ಅನುಮಾನವೇ ಇಲ್ಲ. ಆದರೆ, 'ನ್ಯಾಯಾಂಗವೇ ಪರಮೋಚ್ಚ' ಎಂಬುದನ್ನು 'ಮೂಲ ಸ್ವರೂಪ'ಗಳ ಭಾಗವಾಗಿ ಅರ್ಥೈಸುವಂತಿಲ್ಲ. ನ್ಯಾಯಾಂಗದ ಪರಮೋಚ್ಚತೆ ಸಂವಿಧಾನದ ಮೂಲ ಸ್ವರೂಪಗಳಲ್ಲಿ ಒಂದು ಎಂಬುದೇ ತಪ್ಪು ತಿಳಿವಳಿಕೆ. ನ್ಯಾಯಾಂಗವೇ ಪರಮೋಚ್ಚ ಎಂದು ಸಂವಿಧಾನದಲ್ಲಿ ಎಲ್ಲಿಯೂ ಹೇಳಿಲ್ಲ.

ನ್ಯಾಯಾಂಗದ ಉನ್ನತ ಹುದ್ದೆಗಳಿಗೆ ನೇಮಕಾತಿ ಮಾಡುವವರು ರಾಷ್ಟ್ರಪತಿಗಳು. ಇವರು ಕಾರ್ಯಾಂಗದ ಮುಖ್ಯಸ್ಥರು. ಅವರು ನೇಮಕಾತಿ ಮಾಡುವಾಗ ಅನುಸರಿಸಬೇಕಾದ ಪ್ರಕ್ರಿಯೆಗಳ ಬಗ್ಗೆ ಸಂವಿಧಾನದಲ್ಲಿ ಸ್ಪಷ್ಟ ಮಾರ್ಗದರ್ಶನ ಇರಲಿಲ್ಲ. ನೇಮಕಾತಿ ಪ್ರಕ್ರಿಯೆಯಲ್ಲಿ ಸುಧಾರಣೆ ತರಬೇಕು. ಇದರಲ್ಲಿ ಕೆಲವು ಸ್ಪಷ್ಟ ಮಾರ್ಗಸೂಚಿಗಳು ಇರಬೇಕು ಎಂಬ ಮಾತು ಕೇಳಿಬರುತ್ತಿದ್ದ ಕಾಲದಲ್ಲಿ, ಅಂದರೆ ೧೯೯೨-೯೩ರಲ್ಲಿ, ಸುಪ್ರೀಂ ಕೋರ್ಟ್ ಒಂದು ತೀರ್ಪು ನೀಡಿತು. ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ ಪರಮೋಚ್ಚ ತೀರ್ಮಾನ ನ್ಯಾಯಾಂಗದ್ದೇ ಆಗಿರಬೇಕು, ನೇಮಕಾತಿಯನ್ನು ಮಾಡಬೇಕಿರುವುದು ಕೊಲಿಜಿಯಂ (ನ್ಯಾಯಮೂರ್ತಿಗಳ ಸಮಿತಿ) ಎಂದು ಆ ತೀರ್ಪಿನಲ್ಲಿ ಹೇಳಿತು. ಕೊಲಿಜಿಯಂ ವ್ಯವಸ್ಥೆ ಮೂಲಕ ನೇಮಕ ಆಗಬೇಕು ಎಂದು ಸಂವಿಧಾನದಲ್ಲಿ ಹೇಳಿಲ್ಲ. ಹಾಗಾಗಿ, ೧೯೯೨-೯೩ರ ತೀರ್ಪು ಸಾಂವಿಧಾನಿಕ ಪ್ರಮಾದಕ್ಕೆ ತಳಹದಿ ರೂಪಿಸಿತು.

ಸಂವಿಧಾನಕ್ಕೆ ಅನುಗುಣವಾಗಿ, ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆ ಹೇಗಿರಬೇಕು ಎಂಬುದನ್ನು ಎನ್‌ಜೆಎಸಿ ಕಾಯ್ದೆ ವಿವರಿಸಿತ್ತು. ಆ ಕಾಯ್ದೆಗೆ ಅನುಗುಣವಾಗಿ ನ್ಯಾಯಮೂರ್ತಿಗಳ ನೇಮಕ ನಡೆಯುವ ಮುನ್ನವೇ, ಇದರ ಪರಿಣಾಮಗಳ ಬಗ್ಗೆ ವಿಮರ್ಶಿಸುವುದು ಅಪಕ್ವವಾಗುತ್ತದೆ. ಎನ್‌ಜೆಎಸಿಯಲ್ಲಿ ನ್ಯೂನತೆಗಳು ಕಂಡು ಬಂದರೆ ಅದನ್ನು ಸರಿಪಡಿಸಲು ಅವಕಾಶ ಇದ್ದೇ ಇತ್ತು. ಎನ್‌ಜೆಎಸಿ ಪರಿಪೂರ್ಣವೇ, ಅಲ್ಲವೇ ಎಂಬುದನ್ನು ಪರಿಶೀಲಿಸಬಹುದಿತ್ತು. ಆದರೆ ಈಗ ಅದಕ್ಕೆ ಒಂದು ಅವಕಾಶ ಕೂಡ ಸಿಗದಂತಾಗಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೇರಿದಂತೆ ಮೂವರು ನ್ಯಾಯಮೂರ್ತಿಗಳು, ಇಬ್ಬರು ಹಿರಿಯ ವ್ಯಕ್ತಿಗಳು ಮತ್ತು ದೇಶದ ಕಾನೂನು ಸಚಿವರು ಎನ್‌ಜೆಎಸಿಯಲ್ಲಿ ಇರುತ್ತಿದ್ದರು. ಇಬ್ಬರು ಹಿರಿಯ ವ್ಯಕ್ತಿಗಳು ಮತ್ತು ಕಾನೂನು ಸಚಿವರಿಂದ

ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ಬರುತ್ತಿತ್ತು ಎಂಬ ಮಾತುಗಳಿವೆ. ಹಾಗಾದರೆ, ನ್ಯಾಯಾಂಗದ ಸ್ವಾತಂತ್ರ್ಯ ಅಂದರೆ ಏನು?

ತನ್ನ ಕರ್ತವ್ಯ ನಿರ್ವಹಿಸಲು ನ್ಯಾಯಾಂಗಕ್ಕೆ ಸಂಪೂರ್ಣ ಸ್ವಾತಂತ್ರ್ಯ ಇರಬೇಕು ಎಂಬುದು ನಿಜ. ಆದರೆ ಆಡಳಿತಗಾರನ ಕೆಲಸವನ್ನು ನ್ಯಾಯಾಂಗ ಮಾಡಬಾರದು. ಎನ್‌ಜೆಎಸಿ ಪ್ರಕರಣದ ವಿಚಾರಣೆ ವೇಳೆ ಕೇಂದ್ರ ಸರ್ಕಾರ ಒಂದು ವಾದ ಮುಂದಿಟ್ಟಿತ್ತು. ನ್ಯಾಯಮೂರ್ತಿಗಳ ನೇಮಕ ಆದ ನಂತರವಷ್ಟೇ ನ್ಯಾಯಾಂಗದ ಸ್ವಾತಂತ್ರ್ಯ ಎಂಬ ಪ್ರಶ್ನೆ ಮುನ್ನೆಲೆಗೆ ಬರುತ್ತದೆ. ನೇಮಕಾತಿಗೂ ಮೊದಲಿನ ಹಂತಗಳಲ್ಲಿ 'ನ್ಯಾಯಾಂಗದ ಸ್ವಾತಂತ್ರ್ಯ' ಎಂಬ ಮಾತು ಅನ್ವಯವಾಗದು ಎಂದು ಕೇಂದ್ರ ಹೇಳಿತ್ತು.

ನೇಮಕಾತಿ ಪ್ರಕ್ರಿಯೆ ಸಂವಿಧಾನ ಹೇಳಿರುವಂತೆಯೇ ಆಗಬೇಕು. ನ್ಯಾಯಮೂರ್ತಿಗಳ ನೇಮಕ ಪೂರ್ಣಗೊಂಡ ನಂತರ, ಅವರ ಕರ್ತವ್ಯ ನಿರ್ವಹಣೆಗೆ ಯಾವುದೇ ಅಡಚಣೆಗಳು ಇರಬಾರದು. ಆದರೆ, ನೇಮಕಾತಿಗಳನ್ನು ನಿರ್ಧರಿಸುವಲ್ಲಿ ನ್ಯಾಯಾಂಗವೇ ಪರಮೋಚ್ಚ ಎಂಬುದು ಸಂವಿಧಾನದ ಮೂಲ ಸ್ವರೂಪಕ್ಕೆ ವ್ಯತಿರಿಕ್ತವಾಗಿದೆ.

ಅಶಿಕ್ಷಿತ ಕೂಡ ಕಾನೂನು ಸಚಿವ ಆಗಲು ಸಂವಿಧಾನ ಅವಕಾಶ ಕಲ್ಪಿಸಿದೆ. ಎನ್‌ಜೆಎಸಿಯಲ್ಲಿ ಕಾನೂನು ಸಚಿವ ಇರಬೇಕು ಎಂಬುದು ಸಂಸತ್ತಿನ ತೀರ್ಮಾನವಾಗಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಚಿವರಾಗಲು ಜನರ ಆದೇಶ ಅಂತಿಮವೇ ಹೊರತು, ಅವರ ವಿದ್ಯಾರ್ಹತೆಯೊಂದೇ ಮಾನದಂಡ ಅಲ್ಲ. ನ್ಯಾಯಮೂರ್ತಿಗಳ ಸ್ಥಾನಕ್ಕೆ ಅರ್ಹರು ಯಾರು ಎಂಬುದನ್ನು ತೀರ್ಮಾನಿಸುವ ಅರಿವು, ವಿವೇಕ ಕಾನೂನು ಸಚಿವರಿಗೆ ಇರುತ್ತದೆ. ದೇಶದ ಯಾವುದೋ ಮೂಲೆಯಲ್ಲಿರುವ ವಕೀಲನೊಬ್ಬನ ಪ್ರತಿಭೆ ಏನು, ಆತನನ್ನು ನ್ಯಾಯಮೂರ್ತಿ ಸ್ಥಾನಕ್ಕೆ ನೇಮಿಸಬಹುದೇ ಎಂಬ ಬಗ್ಗೆ ಮಾಹಿತಿ ಪಡೆಯುವ ಶಕ್ತಿ ಕಾನೂನು ಸಚಿವರಿಗೆ ಖಂಡಿತ ಇರುತ್ತದೆ.

ನಮ್ಮದು ಪ್ರಜಾಸತ್ತೆ. ಸಾಂವಿಧಾನಿಕ ಹುದ್ದೆಯಾದ ಸಚಿವ ಸ್ಥಾನ ಹೊಂದಿರುವವರನ್ನು 'ರಾಜಕಾರಣಿ' ಎಂದು ಸಡಿಲ ಮಾತುಗಳಲ್ಲಿ ಕರೆದರೂ, ಕಾನೂನಿನ ಕಣ್ಣಿಗೆ ಆತ 'ಸಾಂವಿಧಾನಿಕ ಹುದ್ದೆ ನಿರ್ವಹಿಸುತ್ತಿರುವ ವ್ಯಕ್ತಿ'. ಸಾಂವಿಧಾನಿಕ ಹುದ್ದೆ ಹೊಂದಿರುವ ವ್ಯಕ್ತಿಯ ಮೇಲೆ ಭರವಸೆ ಇಡಲು ಕೆಲವರಿಗೆ ಸಾಧ್ಯವಿಲ್ಲದಿದ್ದರೆ, ಸಂವಿಧಾನದ ಮೇಲೆ ಅವರು ಯಾವ ಬಗೆಯ ಗೌರವ ಹೊಂದಲು ಸಾಧ್ಯ?

ಇಬ್ಬರು ಹಿರಿಯ ವ್ಯಕ್ತಿಗಳಿಗೆ ನೀಡಿದ 'ವೀಟೊ' ಅಧಿಕಾರದ ಬಗ್ಗೆ ಅನುಮಾನಪಡುವ ಅಗತ್ಯ ಇರಲಿಲ್ಲ. ಹಿರಿಯ ವ್ಯಕ್ತಿಗಳು ಒಬ್ಬ ವ್ಯಕ್ತಿಯ ನೇಮಕವನ್ನು ತಡೆಯಬಹುದಿತ್ತು ಎಂಬುದು ನಿಜ. ಆದರೆ ವೀಟೊ ಬಳಸಿ ಅನರ್ಹರೊಬ್ಬರನ್ನು ನ್ಯಾಯಮೂರ್ತಿಯನ್ನಾಗಿ ನೇಮಿಸುವ ಅಧಿಕಾರವಂತೂ ಹಿರಿಯ ವ್ಯಕ್ತಿಗಳಿಗೆ ಇರಲಿಲ್ಲವಲ್ಲ? ಅಸಮರ್ಥರನ್ನು ನೇಮಿಸುವ ಪ್ರಕ್ರಿಯೆಗೆ ತಡೆ ನೀಡಲು ಈ ವೀಟೊ ಸದ್ಬಳಕೆ ಆಗುವ ಸಾಧ್ಯತೆ ಇತ್ತಲ್ಲವೇ?

ಇಬ್ಬರು ಹಿರಿಯ ವ್ಯಕ್ತಿಗಳನ್ನು ನೇಮಿಸುವುದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ), ಪ್ರಧಾನಿ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ಇರುವ ಸಮಿತಿ. ಅವರೆಲ್ಲ ಸಾಂವಿಧಾನಿಕ ಹುದ್ದೆ ಹೊಂದಿರುವವರು. ದೇಶದ ಉನ್ನತ

ನ್ಯಾಯಾಂಗಕ್ಕೆ ನ್ಯಾಯಮೂರ್ತಿಗಳನ್ನು ನೇಮಿಸುವ ಸಮಿತಿಗೆ 'ಹಿರಿಯ ವ್ಯಕ್ತಿ'ಗಳನ್ನಾಗಿ ಯಾರನ್ನು ನೇಮಿಸಬೇಕು ಎಂದು ತಿಳಿಯದಷ್ಟು ಪ್ರಧಾನಿ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ದಡ್ಡರೇ? ಹಿರಿಯ ವ್ಯಕ್ತಿ ಹೆಸರಿನಲ್ಲಿ ಅನರ್ಹರು ನೇಮಕಗೊಳ್ಳುತ್ತಿರಲಿಲ್ಲ, ನ್ಯಾಯಶಾಸ್ತ್ರ ತಜ್ಞರೇ ಅಲ್ಲಿಗೆ ಬರುತ್ತಿದ್ದರು. ದೇಶದ ಪ್ರಧಾನಿಯ ಮೇಲೆ, ಲೋಕಸಭೆಯ ವಿರೋಧ ಪಕ್ಷದ ನಾಯಕರ ಮೇಲೆ, ಅವರಿರುವ ಸಮಿತಿ ಕೈಗೊಳ್ಳುವ ತೀರ್ಮಾನದ ಮೇಲೆ ನಂಬಿಕೆ ಇಲ್ಲದಿದ್ದರೆ ಹೇಗೆ? ಪ್ರಧಾನಿಯನ್ನು, ಲೋಕಸಭೆ ವಿರೋಧ ಪಕ್ಷದ ನಾಯಕನನ್ನು ನಂಬಲಾರೆ ಎನ್ನುವುದು ಸಾಂವಿಧಾನಿಕ ಹುದ್ದೆಯ ಘನತೆಯನ್ನು ಕಡಿಮೆ ಮಾಡುವುದಕ್ಕೆ ಸಮ.

೧೯೯೩ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು, ಆನಂತರ ಬಂದ ಕೆಲವು ತೀರ್ಪುಗಳ ಗೊಡವೆಗೆ ಹೋಗದೆ ಒಮ್ಮೆ ಸಂವಿಧಾನವನ್ನು ಓದಿ. ನ್ಯಾಯಮೂರ್ತಿಗಳನ್ನು ನೇಮಿಸುವ ಅಧಿಕಾರವನ್ನು ಸಂವಿಧಾನ ನೀಡಿರುವುದು ಯಾರಿಗೆ? ರಾಷ್ಟ್ರಪತಿಯವರಿಗೆ. ಅವರು ನ್ಯಾಯಾಂಗಕ್ಕೆ ಸೇರಿದ ವ್ಯಕ್ತಿ ಅಲ್ಲ. ನ್ಯಾಯಮೂತಿಗಳನ್ನು ಪದಚ್ಯುತಿಗೊಳಿಸುವ ಪ್ರಕ್ರಿಯೆಯಲ್ಲಿ ರಾಷ್ಟ್ರಪತಿ ಅಂತಿಮ ನಿರ್ಧಾರ ಕೈಗೊಳ್ಳುತ್ತಾರೆ. ಪದಚ್ಯುತಗೊಳಿಸುವಲ್ಲಿ ಇರುವಂಥ ಸ್ವಾತಂತ್ರ್ಯ ನೇಮಕಾತಿ ಪ್ರಕ್ರಿಯೆಯಲ್ಲಿ ಶಾಸಕಾಂಗ ಅಥವಾ ಕಾರ್ಯಾಂಗಕ್ಕೆ ಇಲ್ಲ ಎನ್ನುವುದು ವಿಪರ್ಯಾಸವಲ್ಲವೇ? ಎನ್‌ಜೆಎಸಿಯಿಂದ ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆ ಆಗುವುದಾದರೆ, ಈಗಿರುವ 'ನ್ಯಾಯಮೂರ್ತಿಗಳ ಪದಚ್ಯುತಿ ಪ್ರಕ್ರಿಯೆ'ಯೂ ಮೂಲ ಸ್ವರೂಪಕ್ಕೆ ಧಕ್ಕೆ ತರುವಂತಿದೆ, ಅಲ್ಲವೇ? ಇದರ ಬಗ್ಗೆ ಚಿಂತನೆ ಅಗತ್ಯ.

ಸಂವಿಧಾನದ ಆಶಯಗಳನ್ನೆಲ್ಲ ಕಾಯುವ ಹೊಣೆ ಇರುವುದು ನ್ಯಾಯಾಂಗಕ್ಕೆ ಮಾತ್ರವಲ್ಲ. ಕಾರ್ಯಾಂಗ ಮತ್ತು ಶಾಸಕಾಂಗ ತಮ್ಮ ಕೆಲಸ ಮಾಡಲು ವಿಫಲವಾದಾಗ, ಪ್ರಜೆಗಳ ಮೂಲಭೂತ ಹಕ್ಕುಗಳು ಮೊಟಕಾದ ಸಂದರ್ಭದಲ್ಲಿ ಮಾತ್ರ ನ್ಯಾಯಾಂಗ ಮುಂದೆ ಬರಬಹುದು. ಕಾನೂನು ಮಾಡುವ ಅಧಿಕಾರ ಕೂಡ ನ್ಯಾಯಾಂಗಕ್ಕೆ ಇಲ್ಲ. ಸುಪ್ರೀಂ ಕೋರ್ಟ್ ಬಗ್ಗೆ ಗೌರವ ಭಾವನೆ ಇಟ್ಟುಕೊಂಡೇ ಒಂದು ಮಾತು ಹೇಳುವೆ : ಈ ತೀರ್ಪಿನ ಮೂಲಕ ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆ ಆಗಿದೆ. ತೀರ್ಪು ಸಾಂವಿಧಾನಿಕ ಸಂಸ್ಥೆಯೊಂದನ್ನು ದುರ್ಬಲಗೊಳಿಸುವಂತಿದೆ.

ಕಾನೂನುಗಳನ್ನು ರೂಪಿಸುವುದು ಶಾಸಕಾಂಗದ ಕೆಲಸ. ಅದು ಸಂವಿಧಾನದ ಮೂಲ ಸ್ವರೂಪಗಳಲ್ಲಿ ಒಂದು. ಈ ತೀರ್ಪು ಅದಕ್ಕೇ ಧಕ್ಕೆ ತಂದಿದೆ. ಕೊಲಿಜಿಯಂ ವ್ಯವಸ್ಥೆ ಹೋಗಿ, ಎನ್‌ಜೆಎಸಿ ಜಾರಿಗೆ ಬಂದಿದ್ದರೆ ಆಗುವುದೇನಿತ್ತು ಎಂಬ ಪ್ರಶ್ನೆಗಳಿದ್ದವು. ಕೊಲಿಜಿಯಂ ಮೂಲಕ ಆಗುವ ಕೆಲವು ನೇಮಕಾತಿಗಳು ತಮಗೇ ಗೊತ್ತಾಗುತ್ತಿರಲಿಲ್ಲ ಎಂಬ ಮಾತನ್ನು, ಸಂವಿಧಾನ ಪೀಠದಲ್ಲಿದ್ದ ನ್ಯಾಯಮೂರ್ತಿ ಜೆ.ಚಲಮೇಶ್ವರ್ ಹೇಳಿದ್ದಾರೆ. ಹಾಗಿರುವಾಗ, ನೇಮಕಾತಿ ಬಗ್ಗೆ ಜನಸಾಮಾನ್ಯನಿಗೆ ಎಲ್ಲಿಂದ ತಿಳಿಯುತ್ತದೆ? ಆದರೆ, ಎನ್‌ಜೆಎಸಿಯ ಚಟುವಟಿಕೆಗಳು ಅದರಲ್ಲಿನ ಎಲ್ಲ ಸದಸ್ಯರ ಅರಿವು, ಪ್ರಜ್ಞೆಯ ಆಧಾರದಲ್ಲಿ ನಡೆಯುತ್ತಿದ್ದವು. ಅದರಲ್ಲಿ ಪಾರದರ್ಶಕತೆ ಕಾಣಬಹುದಿತ್ತು. ಕೊಲಿಜಿಯಂ ಎಂಬುದು ನ್ಯಾಯಾಲಯದ ಸೃಷ್ಟಿ. ನೇಮಕಾತಿ ಪ್ರಕ್ರಿಯೆಯಲ್ಲಿ ಇಂತಿಂಥ ನಿಯಮಗಳನ್ನು ಪಾಲಿಸಬೇಕು ಎಂದು ಎನ್‌ಜೆಎಸಿ ಹೇಳಿತ್ತು.

ಈ ತೀರ್ಪಿನಲ್ಲೂ ಒಂದಿಷ್ಟು ಒಳ್ಳೆಯ ಅಂಶಗಳು ಬೆಳಕಿಗೆ ಬಂದಿವೆ. ಕೊಲಿಜಿಯಂ ವ್ಯವಸ್ಥೆಯಲ್ಲಿ ಎಲ್ಲವೂ ಸರಿ ಇರಲಿಲ್ಲ ಎಂಬುದನ್ನು ಕೋರ್ಟ್ ಮನಗಂಡಿರುವಂತಿದೆ. ಹಾಗಾಗಿ, ಅದರ ಸುಧಾರಣೆಗೆ ಸಲಹೆಗಳನ್ನು ನೀಡಿ ಎಂದು ಸರ್ಕಾರಕ್ಕೆ, ವಕೀಲ ಸಮುದಾಯಕ್ಕೆ ಸೂಚಿಸಿ, ನವೆಂಬರ್ ೩ಕ್ಕೆ ವಿಚಾರಣೆ ನಿಗದಿ ಮಾಡಿದೆ.

ನಿಜ, ಹಿಂದೆ ಸೇವಾ ಹಿರಿತನ ಕಡೆಗಣಿಸಿ ಕೆಲವರನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳನ್ನಾಗಿ ನೇಮಿಸಿದ ನಿದರ್ಶನ ಇದೆ. ಎಪ್ಪತ್ತರ ದಶಕದಲ್ಲಿ ಇಂಥ ವಿದ್ಯಮಾನಗಳನ್ನು ದೇಶ ಕಂಡಿದೆ. ಆದರೆ ಅಂದಿನ ಸ್ಥಿತಿಗೂ, ಇಂದಿನ ಸ್ಥಿತಿಗೂ ಸಾಕಷ್ಟು ವ್ಯತ್ಯಾಸಗಳಿವೆ. ಆಗ, ನ್ಯಾಯಮೂರ್ತಿಗಳ ನೇಮಕ, ಬಡ್ತಿಗೆ ಸ್ಪಷ್ಟ ನಿಯಮ ಇರಲಿಲ್ಲ. ಎನ್‌ಜೆಎಸಿ ಹಾಗಲ್ಲ. ಇಲ್ಲಿ ನಿಯಮಗಳು ನಿರೂಪಣೆಗೊಂಡಿದ್ದವು. ೧೯೭೦ರ ದಶಕದಲ್ಲಿ ಆದ ಬೆಳವಣಿಗೆಗಳು ಎನ್‌ಜೆಎಸಿ ನೆವದಲ್ಲಿ ಮರುಕಳಿಸುವ ಸಾಧ್ಯತೆಯೇ ಇರಲಿಲ್ಲ. ಎಪ್ಪತ್ತರ ದಶಕದಲ್ಲಿ ಕಾರ್ಯಾಂಗ ಪರಿಸ್ಥಿತಿಯ ಲಾಭ ಪಡೆದು ನ್ಯಾಯಾಂಗದ ನೇಮಕದಲ್ಲಿ ವಿವೇಚನಾರಹಿತವಾಗಿ ಕಾರ್ಯ ನಿರ್ವಹಿಸಿತ್ತು. ಆದರೆ ಎನ್‌ಜೆಎಸಿ ಸಾಮೂಹಿಕ ವಿವೇಕದ ನೆಲೆಯಲ್ಲಿ ಕೆಲಸ ಮಾಡುತ್ತಿತ್ತು. ಪಾರದರ್ಶಕತೆ, ಉತ್ತರದಾಯಿತ್ವ, ಇತಿಮಿತಿಗಳ ವ್ಯಾಖ್ಯಾನ ಇತ್ತು. ಸಾಂವಿಧಾನಿಕ ವ್ಯವಸ್ಥೆ ಬಲಪಡಿಸುವ ದಿಟ್ಟ ಹೆಜ್ಜೆಯಾಗಿತ್ತು.

ಕಾನೂನು ಯಾವತ್ತಿಗೂ ಹರಿಯುವ ನೀರಿನಂತೆ ಇರಬೇಕು. ಅದು ನಿಂತ ನೀರಾಗಬಾರದು. ಜನರ ಸಂವೇದನೆಗಳನ್ನು ಗುರುತಿಸಿ ಕಾನೂನು ಮಾಡುವ ಅಧಿಕಾರ ಇರುವುದು ಸಂಸತ್ತು ಮತ್ತು ವಿಧಾನಸಭೆಗಳಿಗೆ. ಸಂಸತ್ತಿನಲ್ಲಿ ಎಲ್ಲ ಪಕ್ಷಗಳೂ ಬೆಂಬಲಿಸಿದ್ದ, ಬಹುತೇಕ ರಾಜ್ಯಗಳ ವಿಧಾನಸಭೆಗಳು ಅನುಮೋದಿಸಿದ್ದ ಕಾಯ್ದೆಯನ್ನು 'ಅಸಂವಿಧಾನಿಕ' ಎಂದು ಹೇಳುವುದು ಪ್ರಜಾಸತ್ತೆಯ ಆಶಯಗಳಿಗೆ ವಿರುದ್ಧವಲ್ಲವೇ? ಈ ಕಾಯ್ದೆಯನ್ನು ರೂಪಿಸುವಾಗ ಸಂಸತ್ತಿನ ಆಶಯ (ಅಂದರೆ ಜನರ ಆಶಯ) ಸಂವಿಧಾನದ ಆಶಯಗಳಿಗೆ ಪೂರಕವಾಗಿ ಇರಲಿಲ್ಲ ಎಂದು ಸುಪ್ರೀಂ ಕೋರ್ಟ್ ಅರ್ಥೈಸಿದೆ. ಆದರೆ ನನ್ನ ಅಭಿಪ್ರಾಯದಲ್ಲಿ, ಸಂಸತ್ತಿನ ಆಶಯ ಸಂವಿಧಾನದ ಆಶಯಗಳಿಗೆ ಪೂರಕವಾಗಿಯೇ ಇತ್ತು. ಇಡೀ ದೇಶ ಒಂದು ಬದಲಾವಣೆ ಬಯಸಿತ್ತು. ಸಂಸತ್ತು ಅನುಮೋದಿಸಿದ ತಿದ್ದುಪಡಿಯನ್ನು ರಾಷ್ಟ್ರಪತಿಯವರೂ ಒಪ್ಪಿದ್ದರು. ತಿದ್ದುಪಡಿ ತರುವಾಗ ತನ್ನ ಮೂಲ ಆಶಯಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳುವ ವ್ಯವಸ್ಥೆಯನ್ನು ಸಂವಿಧಾನವೇ ರೂಪಿಸಿಕೊಂಡಿದೆ.

ಸಾಂವಿಧಾನಿಕ ನೇಮಕಾತಿಗಳನ್ನು ನಡೆಸುವುದು ಶಾಸಕಾಂಗದ ಕೆಲಸವೇ ಹೊರತು ನ್ಯಾಯಾಂಗದ ಕೆಲಸ ಅಲ್ಲ. ಮುಂದೊಂದು ಕಾಲಘಟ್ಟದಲ್ಲಿ ಎನ್‌ಜೆಎಸಿ ಕೂಡ ವಿಫಲವಾಗುವ ಸಾಧ್ಯತೆ ಇತ್ತು. ಆದರೆ ಈ ವ್ಯವಸ್ಥೆಗೆ ಒಂದು ಅವಕಾಶ ಸಿಗಬೇಕಿತ್ತು. ಭಾರತದ ಪ್ರಜಾಸತ್ತೆಯ 'ಅಂತಃಸತ್ವ' ಬಹಳ ಗಟ್ಟಿಯಾಗಿದೆ. ಈ ತೀರ್ಪಿನ ಕಾರಣದಿಂದ ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವೆ ಸಂಘರ್ಷ ಖಂಡಿತ ತಲೆದೋರದು. ಆದರೆ ತೀರ್ಪಿನ ಪರಿಣಾಮ ಏನಾಗಲಿದೆ ಎಂಬ ಪ್ರಶ್ನೆಗೆ ಕಾಲವೇ ಉತ್ತರ ಹೇಳಬೇಕು.

******

ಸಂಸತ್ತಿನ ಅಧಿಕಾರ ಅ–ನಿರ್ಬಂಧಿತವೇ?

– ಎಚ್.ಎನ್.ನಾಗಮೋಹನದಾಸ್
(ನಿವೃತ್ತ ನ್ಯಾಯ ಮೂರ್ತಿ)

೧೯೭೫ರಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ ಕೇಂದ್ರ ಸರ್ಕಾರದ ಕ್ರಮವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಐವರು ನ್ಯಾಯಮೂರ್ತಿಗಳಿದ್ದ ಪೀಠ ಇದರ ವಿಚಾರಣೆ ನಡೆಸಿತ್ತು. ತುರ್ತು ಪರಿಸ್ಥಿತಿಯನ್ನು ಯಾರೂ ಪ್ರಶ್ನಿಸುವಂತಿಲ್ಲ. ಅದನ್ನು ಹೇರಿರುವುದು ಕಾನೂನು ಬಾಹಿರವಲ್ಲ ಎಂದು ಪೀಠದಲ್ಲಿದ್ದ ನಾಲ್ವರು ನ್ಯಾಯಮೂರ್ತಿಗಳು ತೀರ್ಪು ನೀಡಿದ್ದರು.

ಆದರೆ ನ್ಯಾಯಮೂರ್ತಿ ಎಚ್.ಆರ್.ಖನ್ನಾ ಅವರು ಈ ನಿಲುವಿಗೆ ವಿರುದ್ಧವಾದ ತೀರ್ಪು ಬರೆದಿದ್ದರು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಕೂಡ ಮೂಲಭೂತ ಹಕ್ಕುಗಳನ್ನು ಬದಲಾಯಿಸುವಂತಿಲ್ಲ ಎಂದು ಅವರು ಹೇಳಿದ್ದರು.

ಇದು ಅಂದಿನ ಸರ್ಕಾರಕ್ಕೆ ವಿರುದ್ಧವಾದ ನಿಲುವಾಗಿತ್ತು. ಅದಾದ ಕೆಲವು ಕಾಲದ ನಂತರ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸ್ಥಾನಕ್ಕೆ, ನ್ಯಾಯಮೂರ್ತಿ ಖನ್ನಾ ಅವರ ಹಿರಿತನ ಮತ್ತು ಅರ್ಹತೆ ಕಡೆಗಣಿಸಿ, ಅವರಿಗಿಂತ ಕಿರಿಯರಾದವರೊಬ್ಬರನ್ನು ನೇಮಿಸಲಾಯಿತು. ಸರ್ಕಾರದ ಹಸ್ತಕ್ಷೇಪದಿಂದ ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ಆಗುತ್ತಿದೆ ಎಂಬ ಆತಂಕಗಳು ವ್ಯಕ್ತವಾದವು. ನಂತರದ ದಿನಗಳಲ್ಲೂ ಈ ಆತಂಕ ಹಲವು ಬಾರಿ ವ್ಯಕ್ತವಾಯಿತು.

೧೯೯೩ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ಒಂದು ತೀರ್ಪು, ನ್ಯಾಯಮೂರ್ತಿಗಳನ್ನು ನ್ಯಾಯಮೂರ್ತಿಗಳ ಸಮಿತಿಯೇ (ಕೊಲಿಜಿಯಂ) ನೇಮಕ ಮಾಡುವ ವ್ಯವಸ್ಥೆಗೆ ಜನ್ಮ ನೀಡಿತು. ಅದಾದ ನಂತರದ ತೀರ್ಪುಗಳು ಕೊಲಿಜಿಯಂ ಬಗೆಗಿನ ಕೆಲವು ಅನುಮಾನಗಳನ್ನು ಪರಿಹರಿಸಿದವು. ಆದರೆ, ಕಾಲಾನಂತರದಲ್ಲಿ ಈ ವ್ಯವಸ್ಥೆಯಲ್ಲೂ ದೋಷಗಳು ಕಂಡುಬಂದವು. ಕೊಲಿಜಿಯಂ ವ್ಯವಸ್ಥೆ ಪಾರದರ್ಶಕವಾಗಿಲ್ಲ, ಅದು ಅನುಸರಿಸಬೇಕಾದ ನಿಯಮಗಳ ಬಗ್ಗೆ ಸ್ಪಷ್ಟತೆ ಇಲ್ಲ, ಪ್ರಜಾಸತ್ತಾತ್ಮಕವಾಗಿ ಇಲ್ಲ, ನೈಜ ಪ್ರತಿಭೆಯನ್ನು ಗುರುತಿಸಲು ಆಗುತ್ತಿಲ್ಲ, ಕೆಲವು ಭ್ರಷ್ಟರೂ ನ್ಯಾಯಮೂರ್ತಿಗಳಾಗಿ ನೇಮಕಗೊಂಡರು ಎಂಬ ಮಾತುಗಳು ಕೇಳಿಬಂದವು. ಈ ಪರಿಸ್ಥಿತಿಯಲ್ಲಿ ಕೊಲಿಜಿಯಂ ವ್ಯವಸ್ಥೆಗೆ ಪರ್ಯಾಯ ಬೇಕು ಎಂಬ ಧ್ವನಿ ಕೇಳಿಬಂತು.

ನ್ಯಾಯಮೂರ್ತಿಗಳ ವಿರುದ್ಧ ಆರೋಪಗಳು ಕೇಳಿ ಬಂದಾಗ, ಅವರಿಗೆ ಶಿಕ್ಷೆ ವಿಧಿಸುವ 'ವಾಗ್ದಂಡನೆ' ಪ್ರಕ್ರಿಯೆ ತೀರಾ ಕ್ಲಿಷ್ಟಕರ. ಅದು ಪೂರ್ಣಗೊಳ್ಳಲು ಬಹಳ ಕಾಲ ಬೇಕು. 'ವಾಗ್ದಂಡನೆ' ಪ್ರಕ್ರಿಯೆಗೆ ಪರ್ಯಾಯ ವ್ಯವಸ್ಥೆ ರೂಪಿಸುವತ್ತ ಚಿಂತನೆ ನಡೆಯಿತು. ನ್ಯಾಯಮೂರ್ತಿ ಎಮ್.ಎನ್.ವೆಂಕಟಾಚಲಯ್ಯ ನೇತೃತ್ವದ ಸಂವಿಧಾನ ಪರಾಮರ್ಶೆ ಸಮಿತಿ ತನ್ನ ವರದಿಯಲ್ಲಿ, ನ್ಯಾಯಮೂರ್ತಿಗಳ ನೇಮಕಕ್ಕೆ ಸ್ವತಂತ್ರವಾದ ವ್ಯವಸ್ಥೆಯೊಂದು ಬೇಕು ಎಂದು ಹೇಳಿತು. ಇದು ಚರ್ಚೆಗೆ ಒಳಗಾಯಿತು. ನಂತರ ಯುಪಿಎ ಸರ್ಕಾರದ ಅವಧಿಯಲ್ಲಿ ಎರಡು ಮಸೂದೆಗಳನ್ನು ಸಂಸತ್ತಿನಲ್ಲಿಡಲಾಯಿತು. ಮೊದಲನೆಯದು ನ್ಯಾಯಮೂರ್ತಿಗಳ ನೇಮಕ ಮಸೂದೆ, ಎರಡನೆಯದು

ನ್ಯಾಯಮೂರ್ತಿಗಳ ವಿಚಾರಣಾ ಮಸೂದೆ. ಅವುಗಳಿಗೆ ಅಂಗೀಕಾರ ದೊರೆತಿರಲಿಲ್ಲ.

ನಂತರ ಬಂದ ಎನ್‌ಡಿಎ ಸರ್ಕಾರ ಎರಡೂ ಮಸೂದೆಗಳನ್ನು ಹಿಂಪಡೆಯಿತು. ನ್ಯಾಯಮೂರ್ತಿಗಳ ನೇಮಕ, ವರ್ಗಾವಣೆ ಮತ್ತು ಬಡ್ತಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ (ಎನ್‌ಜೆಎಸಿ) ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿತು. ಬೆಳಿಗ್ಗೆ ಮಂಡನೆಯಾದ ಈ ಮಸೂದೆಗೆ ಸಂಜೆ ವೇಳೆ ಅಂಗೀಕಾರ ದೊರೆಯಿತು! ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದು ಇದರ ಸಾಂವಿಧಾನಿಕ ಮಾನ್ಯತೆಯನ್ನು.

ಸಂವಿಧಾನದ ೩೬೮ನೇ ಅನುಚ್ಛೇದದ ಅನ್ವಯ, ಸಂವಿಧಾನಕ್ಕೆ ತಿದ್ದುಪಡಿ ತರುವ ಅಧಿಕಾರ ಸಂಸತ್ತಿಗೆ ಇದೆ. ಈ ಅಧಿಕಾರ ಬಳಸಿ ಸಂಸತ್ತು ಸಂವಿಧಾನವನ್ನು ಹೇಗೆ ಬೇಕಿದ್ದರೂ ತಿದ್ದಬಹುದೇ? ಈ ಪ್ರಶ್ನೆ ಸುಪ್ರೀಂ ಕೋರ್ಟ್ ಎದುರು ಹಿಂದೊಮ್ಮೆ ಬಂದಿತ್ತು – ಕೇಶವಾನಂದ ಭಾರತಿ ಪ್ರಕರಣದಲ್ಲಿ. ಆವಾಗ, ಸುಪ್ರೀಂ ಕೋರ್ಟ್ ತನಗೆ ತಾನೇ ಕೆವು ಪ್ರಶ್ನೆಗಳನ್ನು ಕೇಳಿಕೊಂಡಿತು.

'ತಿದ್ದುಪಡಿ ತರುವ ಸಂಸತ್ತಿನ ಅಧಿಕಾರ ಅನಿರ್ಬಂಧಿತವೇ? ದೇಶದ ಸಾರ್ವಭೌಮತೆಯನ್ನು ಹಾಳುಮಾಡುವಂತಹ ತಿದ್ದುಪಡಿ ತರುವ ಅಧಿಕಾರ ಇದೆಯೇ? ಈ ದೇಶವನ್ನು ಇನ್ನೊಂದು ದೇಶದ ಭಾಗವನ್ನಾಗಿ ಮಾಡಬಹುದೇ? ಸಂಸದೀಯ ಪ್ರಜಾಪ್ರಭುತ್ವ ಕಿತ್ತೊಗೆದು, ರಾಜಪ್ರಭುತ್ವವನ್ನು ತರಬಹುದೇ? ದೇಶ ಒಡೆದು, ಹಲವಾರು ಸ್ವತಂತ್ರ ರಾಷ್ಟ್ರಗಳನ್ನು ರಚಿಸಬಹುದೇ? ಜಾತ್ಯಾತೀತ ಸ್ವರೂಪವನ್ನು ಹಾಳುಮಾಡಿ, ಇಲ್ಲಿ ಧರ್ಮಾಧಾರಿತ ಸರ್ಕಾರ ಅಸ್ತಿತ್ವಕ್ಕೆ ತರಬಹುದೇ? ಜನರಿಗೆ, ಅಲ್ಪಸಂಖ್ಯಾತರಿಗೆ ನೀಡಿರುವ ಹಕ್ಕುಗಳನ್ನು ಮೊಟಕುಗೊಳಿಸಬಹುದೇ? ಲೋಕಸಭೆ, ರಾಜ್ಯಸಭೆಗಳ ಅವಧಿ ಶಾಶ್ವತಗೊಳಿಸಬಹುದೇ? ಈಗ ಸಂವಿಧಾನಕ್ಕೆ ಒಂದು ತಿದ್ದುಪಡಿ ತಂದು, ಮುಂದೆಂದೂ ತಿದ್ದುಪಡಿ ತರಬಾರದು ಎಂದು ಸಂಸತ್ತು ಹೇಳಬಹುದೇ?'

ಇಂಥ ಪ್ರಶ್ನೆಗಳನ್ನು ಕೇಳಿಕೊಂಡ ಸುಪ್ರೀಂಕೋರ್ಟ್, ಸಂವಿಧಾನಕ್ಕೆ ತರುವ ಯಾವುದೇ ತಿದ್ದುಪಡಿ ಅದರ ಮೂಲ ಸ್ವರೂಪಕ್ಕೆ ಧಕ್ಕೆ ತರುವಂತಿರಬಾರದು ಎಂದು ಕೇಶವಾನಂದ ಭಾರತಿ ಪ್ರಕರಣದಲ್ಲಿ ಹೇಳಿತು. ಹಾಗಾದರೆ ಸಂವಿಧಾನದ ಮೂಲ ಸ್ವರೂಪ ಎಂದರೆ ಏನು? ಇಡೀ ಸಂವಿಧಾನವನ್ನು ಓದಿದಾಗ, 'ಮೂಲ ಸ್ವರೂಪ' ಎನ್ನುವ ಕೆಲವನ್ನು ಗುರುತಿಸಬಹುದು. ಕೇಶವಾನಂದ ಭಾರತಿ ಪ್ರಕರಣದಲ್ಲಿ ಕೋರ್ಟ್ ಇಂಥ ಕೆಲವು ಅಂಶಗಳನ್ನು ಪಟ್ಟಿಮಾಡಿತು. ನಂತರ ಬಂದ ಕೆಲವು ತೀರ್ಪುಗಳು ಇನ್ನಷ್ಟು ಅಂಶಗಳನ್ನು ಮೂಲ ಸ್ವರೂಪಗಳ ಪಟ್ಟಿಗೆ ಸೇರಿಸಿದವು.

ಜಾತ್ಯಾತೀತತೆ, ಸಾಮಾಜಿಕ ನ್ಯಾಯ, ನ್ಯಾಯಾಂಗದ ಸ್ವಾತಂತ್ರ್ಯ, ಸಹಜ ನ್ಯಾಯದ ಪಾಲನೆ, ಕಾಲಕಾಲಕ್ಕೆ ಚುನಾವಣೆ ನಡೆಸುವುದು...ಇವೆಲ್ಲ ನಮ್ಮ ಸಂವಿಧಾನದ ಮೂಲ ಸ್ವರೂಪಗಳು. ಕೇಶವಾನಂದ ಭಾರತಿ ಪ್ರಕರಣವನ್ನು ಹಿನ್ನೆಲೆಯಲ್ಲಿ ಇಟ್ಟುಕೊಂಡು, ಸಂವಿಧಾನ ಮೂಲ ಸ್ವರೂಪಗಳಲ್ಲಿ ಒಂದಾದ ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಎನ್‌ಜೆಎಸಿ ಕಾಯ್ದೆ ಧಕ್ಕೆ ತಂದಿದೆಯೇ ಎಂದು ಸುಪ್ರೀಂ ಕೋರ್ಟ್ ಪರಿಶೀಲಿಸಿತು. ಈ ಕಾಯ್ದೆಯಲ್ಲಿ ಕಾರ್ಯಾಂಗಕ್ಕೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಅಂದರೆ, ಇದರಿಂದ ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ಬರುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳ ನೇಮಕಕ್ಕೆ ಸ್ವತಂತ್ರ ಆಯೋಗ ಬೇಕು ಎಂಬ ಮಾತು ಕೇಳಿಬಂದಿದ್ದು ಕೊಲಿಜಿಯಂ ವ್ಯವಸ್ಥೆಯಲ್ಲಿ ದೋಷಗಳಿವೆ ಎಂಬ ಕಾರಣಕ್ಕೆ. ಕೊಲಿಜಿಯಂ ದೋಷ ಪರಿಹರಿಸುವುದು ಹೇಗೆ ಎಂಬುದನ್ನು ಹೊಸ ವ್ಯವಸ್ಥೆ ಕಂಡುಕೊಳ್ಳಬೇಕಿತ್ತು. ಎನ್‌ಜೆಎಸಿಯು ಪ್ರಜಾಸತ್ತಾತ್ಮಕವಾಗಿ, ಪ್ರತಿಭೆಯನ್ನು ಎಲ್ಲ ಬಗೆಯಿಂದಲೂ ಗುರುತಿಸುವಂಥದ್ದಾಗಿರಬೇಕಿತ್ತು. ಆದರೆ, ಅದು ಹಾಗಿರಲಿಲ್ಲ.

ಎನ್‌ಜೆಎಸಿ ಹೆಸರಿನಲ್ಲಿ ಕಾರ್ಯಾಂಗಕ್ಕೆ ಹೆಚ್ಚಿನ ಅಧಿಕಾರ ನೀಡುವ ಮಸೂದೆ ಮಂಡನೆಯಾಗಿ, ಅಂಗೀಕಾರ ಪಡೆದುಕೊಂಡಿತು. ಈ ಮಸೂದೆ ಕಾರ್ಯಾಂಗಕ್ಕೆ ಹೆಚ್ಚಿನ ಅಧಿಕಾರ ನೀಡುತ್ತದೆ ಎಂಬ ಮಾತು ಬಂದಾಗ, ಇದರಿಂದ ನ್ಯಾಯಾಂಗದ ಸ್ವಾತಂತ್ರ್ಯಕ್ಕೆ (ಅಂದರೆ ಸಂವಿಧಾನದ ಮೂಲ ಸ್ವರೂಪಕ್ಕೆ) ಧಕ್ಕೆ ಆಗುತ್ತದೆಯೇ ಎಂಬ ಪ್ರಶ್ನೆಯೂ ಮುನ್ನೆಲೆಗೆ ಬಂತು. ಎನ್‌ಜೆಎಸಿ ಕಾಯ್ದೆ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದ ಸಂದರ್ಭದಲ್ಲಿ ನಾನು ಅಲ್ಲೇ ಇದ್ದೆ. ಕಾನೂನಿನ ಜ್ಞಾನ ಇಲ್ಲದವರನ್ನೂ ಕೇಂದ್ರ ಸರ್ಕಾರ, ಕಾನೂನು ಸಚಿವರನ್ನಾಗಿ ನೇಮಿಸಬಹುದು. ಅದನ್ನು ತಡೆಯಲು ಕೋರ್ಟ್‌ಗಳಿಗೆ ಸಾಧ್ಯವಿಲ್ಲ. ಕಾನೂನಿನ ಗಂಧವೇ ಇಲ್ಲದವರು, ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯಲ್ಲಿ ಪಾಲ್ಗೊಂಡರೆ ಏನಾಗಬಹುದು? ಈ ಪ್ರಶ್ನೆ ಪ್ರಕರಣದ ವಿಚಾರಣೆ ವೇಳೆ ಉದ್ಭವ ಆಗಿತ್ತು.

ಅಷ್ಟೇ ಅಲ್ಲ, 'ಅಟಾರ್ನಿ ಜನರಲ್ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸುತ್ತಾರೆ. ಅವರು ಕಾನೂನು ತಜ್ಞರೇ ಆಗಿರುತ್ತಾರೆ. ಕಾನೂನು ಸಚಿವರಿಗೆ ಪರ್ಯಾಯವಾಗಿ ಎನ್‌ಜೆಎಸಿಯಲ್ಲಿ ಅವರು ಇರಬಹುದಲ್ಲವೇ?' ಎಂಬ ಮಾತು ಕೂಡ ವಿಚಾರಣೆ ವೇಳೆ ಕೇಳಿಬಂದಿತ್ತು.

ಇಬ್ಬರು ಹಿರಿಯ ವ್ಯಕ್ತಿಗಳನ್ನು ಆಯ್ಕೆ ಮಾಡುವುದು ಪ್ರಧಾನಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಇರುವ ಸಮಿತಿ. ಪ್ರಧಾನಿ ಮತ್ತು ವಿರೋಧ ಪಕ್ಷದ ನಾಯಕ (ಅಂದರೆ ಇಬ್ಬರು ರಾಜಕೀಯ ವ್ಯಕ್ತಿಗಳು) ಒಂದಾಗಿ ಇಬ್ಬರು ಹಿರಿಯ ವ್ಯಕ್ತಿಗಳನ್ನು ನೇಮಿಸುತ್ತಾರೆ. ಅದನ್ನು ತಡೆಯುವ ಸಾಮರ್ಥ್ಯ ಸುಜೆಐಗೆ ಇರುವುದಿಲ್ಲ. ಈ ಇಬ್ಬರು ಹಿರಿಯ ವ್ಯಕ್ತಿಗಳು ನೇಮಕಾತಿ ಆಯೋಗದಲ್ಲಿ ವೀಟೊ ಅಧಿಕಾರ ಚಲಾಯಿಸಿ, ನೇಮಕಾತಿ ತಡೆದರೆ? ಅದರಿಂದ ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದೇ? ಹಿರಿಯ ವ್ಯಕ್ತಿಗಳು ಎಂದಷ್ಟೇ ಇರುವ ಬದಲು, 'ಹಿರಿಯ ನ್ಯಾಯಶಾಸ್ತ್ರಜ್ಞರು' ಎಂಬ ವ್ಯಾಖ್ಯಾನ ಕಾನೂನಿನಲ್ಲಿ ಇರಬೇಕಿತ್ತು.

ಈ ಕಾಯ್ದೆಗೆ ಸಂಸತ್ತಿನ ಬೆಂಬಲ, ೨೦ಕ್ಕೂ ಹೆಚ್ಚು ರಾಜ್ಯಗಳ ವಿಧಾನಸಭೆಗಳ ಬೆಂಬಲ ಇತ್ತು. ಆದರೂ ಕಾಯ್ದೆ ಅಸಾಂವಿಧಾನಿಕ ಎಂದು ಹೇಳುವ ಮೂಲಕ ಸುಪ್ರೀಂಕೋರ್ಟ್ ಜನಪ್ರತಿನಿಧಿಗಳ ಇಚ್ಛೆಗೆ ವಿರುದ್ಧವಾಗಿ ವರ್ತಿಸಿದೆ ಎಂಬ ಮಾತಿದೆ. ಆದರೆ, ಜನಪ್ರತಿನಿಧಿಗಳ ಇಚ್ಛೆ ಬೇರೆ, ಸಂವಿಧಾನದ ಆಶಯ ಬೇರೆ. ಜನಪ್ರತಿನಿಧಿಗಳ ಆಶಯ ಮತ್ತು ಸಂವಿಧಾನದ ಆಶಯಗಳ ನಡುವೆ ಭಿನ್ನಮತ ಎದುರಾದಾಗ, ಅಂತಿಮವಾಗಿ ಸಂವಿಧಾನದ ಆಶಯವೇ ಉಳಿದುಕೊಳ್ಳಬೇಕು. ಜನಪ್ರತಿನಿಧಿಗಳ ಆಶಯ

ಯಾವತ್ತಿಗೂ ಸಂವಿಧಾನಕ್ಕೆ ಪೂರಕವಾಗಿಯೇ ಇರಬೇಕು.

ಕೊಲಿಜಿಯಂನಲ್ಲಿ ದೋಷಗಳಿವೆ. ಈಗ ಪುನಃ ಅದೇ ವ್ಯವಸ್ಥೆಗೆ ಮರಳುವುದು ಸರಿಯಲ್ಲ. ಹಾಗಾಗಿ, ಕೊಲಿಜಿಯಂ ವ್ಯವಸ್ಥೆಯನ್ನು ಸುಧಾರಿಸಲು, ಬಲಪಡಿಸಲು ಸಲಹೆ ನೀಡಿ ಎಂದು ವಕೀಲ ಸಮೂಹಕ್ಕೆ, ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. ಇದರ ವಿಚಾರಣೆ ನವೆಂಬರ್ ೩ಕ್ಕೆ ನಿಗದಿಯಾಗಿದೆ. ಈ ವ್ಯವಸ್ಥೆಯಲ್ಲಿನ ದೋಷಗಳು ನಿವಾರಣೆ ಆಗಬೇಕು. ನಿರ್ದಿಷ್ಟ ನಿಯಮಗಳಿಗೆ ಅನುಗುಣವಾಗಿ ಕೊಲಿಜಿಯಂ ಕಾರ್ಯ ನಿರ್ವಹಿಸುವಂತೆ ಆಗಬೇಕು. ಈಗ ಬಂದಿರುವ ತೀರ್ಪು ನ್ಯಾಯಾಂಗ ಮತ್ತು ಕಾರ್ಯಾಂಗದ ನಡುವಿನ ಸಂಘರ್ಷಕ್ಕೆ ಕಾರಣವಾಗಬಾರದು. ದೇಶ ಅಳವಡಿಸಿಕೊಳ್ಳುವ ಯಾವುದೇ ಪರ್ಯಾಯ ವ್ಯವಸ್ಥೆ ನ್ಯಾಯಾಂಗದ ಸ್ವಾತಂತ್ರ್ಯವನ್ನು ಕಾಯಬೇಕು. ನ್ಯಾಯಮೂರ್ತಿಗಳನ್ನು ನೇಮಿಸುವ ಯಾವುದೇ ಸಂಸ್ಥೆ ಪಾರದರ್ಶಕವಾಗಿ, ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡಬೇಕು.


ಕೊಲಿಜಿಯಂನಲ್ಲಿರುವ ನ್ಯಾಯಮೂರ್ತಿಗಳ ಕಣ್ಣಿಗೆ ಕಾಣಿಸುವ ವಕೀಲರು ಮಾತ್ರವೇ ಬುದ್ಧಿವಂತರಲ್ಲ. ಸಮರ್ಥರು, ಅರ್ಹರು ಅನೇಕರಿದ್ದಾರೆ. ಅಂಥ ಪ್ರತಿಭೆಗಳನ್ನು ಗುರುತಿಸುವಂತೆ ಆಗಬೇಕು. ನ್ಯಾಯಮೂರ್ತಿಗಳ ನೇಮಕಾತಿಯಲ್ಲೂ ಬಹುತ್ವ, ಪ್ರಾತಿನಿಧ್ಯಕ್ಕೆ ಆದ್ಯತೆ ಬರಬೇಕು. ಮೀಸಲಾತಿಯೇ ಬೇಕು ಎಂದು ನಾನು ಹೇಳುತ್ತಿಲ್ಲ. ಆದರೆ ಮಹಿಳೆಯರಿಗೆ, ವಿವಿಧ ಪ್ರದೇಶಗಳಿಗೆ, ಹಿಂದುಳಿದವರಿಗೆ, ಶೋಷಿತ ವರ್ಗಗಳಿಗೆ ಪ್ರಾತಿನಿಧ್ಯ ಸಿಗುವಂತೆ ಆಗಬೇಕು.

ಸ್ವಾತಂತ್ರ್ಯೋತ್ತರ ಭಾರತ ಕಟ್ಟಿದ ಅತ್ಯಂತ ಪ್ರಬಲ ಸಂಸ್ಥೆ ನ್ಯಾಯಾಂಗ. ನ್ಯಾಯಾಂಗ ತನ್ನ ಸ್ವಾತಂತ್ರ್ಯವನ್ನು ಕಾಯ್ದುಕೊಂಡಿರುವುದು ಕೂಡ ಅದು ಪ್ರಬಲವಾಗಿರುವುದಕ್ಕೆ ಕಾರಣ. ಈ ಸಂಸ್ಥೆಯ ಸಮಗ್ರ ಕೆಲಸವನ್ನು ನೋಡಿ ಜನ ಗೌರವ ಕೊಟ್ಟಿದ್ದಾರೆ, ವಿಶ್ವಾಸವಿಟ್ಟಿದ್ದಾರೆ.

ನ್ಯಾಯಾಂಗವು ಕಾನೂನುಗಳನ್ನು ವ್ಯಾಖ್ಯಾನಿಸಿದೆ. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಶಾಸಕಾಂಗ ಕಾನೂನು ರೂಪಿಸಿದಾಗ, ಅದನ್ನು ಮುಲಾಜಿಲ್ಲದೆ ರದ್ದುಪಡಿಸಿದೆ. ನ್ಯಾಯಶಾಸ್ತ್ರದ ವಿಕಸನದಲ್ಲಿ ದೇಶದ ನ್ಯಾಯಾಂಗ ನೀಡಿರುವ ಕೊಡುಗೆ ಮಹತ್ವದ್ದು. ನ್ಯಾಯಶಾಸ್ತ್ರವನ್ನು ಕಟ್ಟುವಾಗ, ಹಿಂದೊಂದು ಕಾಲದಲ್ಲಿ ಭಾರತದ ನ್ಯಾಯಾಂಗ ಅಮೆರಿಕ, ಇಂಗ್ಲೆಂಡ್, ಆಸ್ಟ್ರೇಲಿಯಾ ನ್ಯಾಯಾಂಗಗಳು ನೀಡಿರುವ ತೀರ್ಪುಗಳನ್ನು ಪೂರ್ವ ನಿದರ್ಶನಗಳನ್ನಾಗಿ ಉಲ್ಲೇಖಿಸುತ್ತಿತ್ತು. ಆದರೆ ಇವತ್ತು, ನಮ್ಮ ಸುಪ್ರೀಂ ಕೋರ್ಟ್ ನೀಡಿದ ತೀರ್ಪುಗಳನ್ನು ಅಮೆರಿಕದ ನ್ಯಾಯಾಂಗ ಉಲ್ಲೇಖಿಸುತ್ತಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯ ಎಂದರೆ ಬರೆದು ಹೇಳುವುದು ಮಾತ್ರವಲ್ಲ. ಮೌನವಾಗಿದ್ದು ಏನನ್ನೋ ಹೇಳುವುದು ಕೂಡ ಅಭಿವ್ಯಕ್ತಿ ಸ್ವಾತಂತ್ರ್ಯದ ಅಡಿಯಲ್ಲೇ ಬರುತ್ತದೆ. ಪ್ರಕರಣಗಳು ತ್ವರಿತವಾಗಿ ಇತ್ಯರ್ಥವಾಗಬೇಕಾಗಿರುವುದು ಜನರ ಹಕ್ಕು. ಜೀವಿಸುವ ಹಕ್ಕು ಎಂದರೆ, ಪ್ರಾಣಿಗಳಂತೆ ಬದುಕುವುದಲ್ಲ, ಘನತೆಯಿಂದ ಬದುಕುವುದು. ಗೌರವದಿಂದ ಅಂತಿಮ ಸಂಸ್ಕಾರ ಪಡೆದುಕೊಳ್ಳುವ ಹಕ್ಕು ಒಂದು ಶವಕ್ಕೂ ಇದೆ ಎಂಬಂತಹ ನ್ಯಾಯಶಾಸ್ತ್ರಗಳನ್ನು ನಿರ್ವಚಿಸಿದ ಹಿರಿಮೆ ನಮ್ಮ ನ್ಯಾಯಾಂಗಕ್ಕೆ ಇದೆ. ಇಂಥ ಸಂಸ್ಥೆಯ ಸ್ವಾತಂತ್ರ್ಯಕ್ಕೆ ಎಂದೂ ಧಕ್ಕೆ ಬರಬಾರದು.

ಖಾದಿ ವಿಚಾರ



ಕರ್ನಾಟಕ ಸರ್ವೋದಯ ಸಂಘ ರಾಜ್ಯದ ಹೆಮ್ಮೆಯ ಸಂಘ. ಅದು ಕಳೆದ ಐವತ್ತು ವರ್ಷಗಳಿಂದ ಖಾದಿ ಉತ್ಪಾದನೆ ಮತ್ತು ಮಾರಾಟದ ಕೆಲಸವನ್ನು ಮಾಡಿಕೊಂಡು ಬಂದಿದೆ. ಸಂಘವು ತಪ್ಪದೆ ಮೂರು ತಿಂಗಳಿಗೊಮ್ಮೆ ಸಂಚಾಲಕ ಮಂಡಳಿಯ ಸಭೆಯನ್ನು ನಡೆಸುತ್ತದೆ. ಆ ಸಭೆಯಲ್ಲಿ ಸಂಘ ಉತ್ಸಾಹದಿಂದ ಖಾದಿ ಲಡಿಗಳ ಸಂಖ್ಯೆ ಅದರ ಬೆಲೆ ಖಾದಿ ಬಟ್ಟೆಯ ಉತ್ಪಾದನೆ ಮೀಟರ್ ಲೆಕ್ಕದಲ್ಲಿ ಮತ್ತು ಅದರ ಬೆಲೆ. ರೇಷ್ಮೆ ನೂಲಿನ ಉತ್ಪಾದನೆ ಅದರ ತೂಕ ಮತ್ತು ಬೆಲೆ ರೇಷ್ಮೆ ಬಟ್ಟೆಯ ಉತ್ಪಾದನೆ ಮೀಟರ್ ಲೆಕ್ಕದಲ್ಲಿ ಮತ್ತು ಅದರ ಬೆಲೆ. ಚಿಲ್ಲರೆ ಖಾದಿ ಮಾರಾಟದ ಮೊತ್ತ ಮತ್ತು ಸಗಟು ಖಾದಿಮಾರಾಟದ ಮೊತ್ತ ಹಾಗೂ ಕೊನೆಯದಾಗಿ ಗ್ರಾಮೋದ್ಯೋಗದ ಚಿಲ್ಲರೆ ಮಾರಾಟದ ಮೊತ್ತವನ್ನು ಮಂಡಿಸಲಾಗುತ್ತದೆ. ಈ ಕ್ರಮದಿಂದಾಗಿ ಸಂಘದ ಉದ್ದೇಶಿತ ಕಾರ್ಯಕ್ರಮದ ಏರಿಳಿತ ಸಂಚಾಲಕ ಮಂಡಳಿಗೆ ಗೊತ್ತಾಗುತ್ತದೆ. ಇಂಥ ವ್ಯವಸ್ಥೆ ಪ್ರತಿಯೊಂದು ಖಾದಿ ಸಂಸ್ಥೆಯಲ್ಲಿ ಇದೆ ಎಂದು ಭಾವಿಸಬಹುದಾಗಿದೆ. ಒಂದು ವೇಳೆ ಇಲ್ಲದಿದ್ದರೆ ಆ ಪದ್ಧತಿಯನ್ನು ಅನುಸರಿಸುವುದು ಸಂಸ್ಥೆಗೆ ಹಿತಕಾರಿ. ಸರ್ವೋದಯ ಸಂಘದ ಸಂಚಾಲಕ ಮಂಡಳಿ ಸಭೆ ಇತ್ತೀಚೆಗೆ ೦೪.೧೧.೨೦೧೫ರಂದು ನಡೆಯಿತು. ಆ ಸಭೆಯ ಮುಂದೆ ಮಂಡಿಸಲಾದ ಖಾದಿಗೆ ಸಂಬಂಧಿಸಿದ ವರದಿಯಲ್ಲಿ ೨೦೧೫ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಆದ ಖಾದಿ ಉತ್ಪಾದನೆ ಮತ್ತು ಮಾರಾಟದ ಅಂಕಿಸಂಖ್ಯೆಗಳನ್ನು ತಿಳಿಸಲಾಗಿದೆ ಮತ್ತು ೨೦೧೪-೧೫ನೇ ಸಾಲಿನ ಒಟ್ಟು ಅಂಕಿಸಂಖ್ಯೆಯನ್ನು ತಿಳಿಸಲಾಗಿದೆ. ಆ ಪ್ರಕಾರ ಖಾದಿ ಲಡಿಗಳ ಉತ್ಪಾದನೆ ೩೧.೫೨೫೫ ಅದರ ಬೆಲೆ ೩೨.೪೪೭೯೮. ಖಾದಿ ಬಟ್ಟೆ ಉತ್ಪಾದನೆ ೩೫೭೭೪ಮೀಟರ್ ಅದರ ಬೆಲೆ ೩೭೬೧೨೫೦ ರೇಷ್ಮೆ ಬಟ್ಟೆ ಉತ್ಪಾದನೆ ೮೨೮ಕೆ.ಜಿ. ಅದರ ಬೆಲೆ ೨೭, ೦೮,೭೮೫ ಖಾದಿ ಗ್ರಾಮೋದ್ಯೋಗ ಮಾರಾಟದ ಬೆಲೆ ೮೯೪೪೭.

ಜನಪದ ವಿಚಾರವು ಕರ್ನಾಟಕದಲ್ಲಿರುವ ಎಲ್ಲ ಸಂಸ್ಥೆಗಳ ಕಾರ್ಯವರದಿ ಮತ್ತು ಪರಿಚಯ ಪ್ರಕಟಿಸಲು ಇಷ್ಟ ಪಡುತ್ತದೆ. ಆದ್ದರಿಂದ ಖಾದಿ ಸಂಸ್ಥೆಗಳವರು ತಮ್ಮ ಸಂಘದ ವರದಿ ಇತ್ಯಾದಿ ಕಳುಹಿಸಿಕೊಡಬೇಕಾಗಿ ವಿನಂತಿ.

ಜನಪದ ನಿಲಯದ ಅಂತರಂಗದಲ್ಲಿ – ೧೪೦



ಸರ್ವೋದಯ ಸಿದ್ಧಾಂತಕ್ಕೂ ಮತ್ತು ಸಮಾಜವಾದಿ ಸಿದ್ಧಾಂತಕ್ಕೂ ಆತ್ಮೀಯ ಸಂಬಂಧವಿದೆ. ಕೆಲವು ಭಿನ್ನತೆಗಳಿರಬಹುದು. ಅವು ಗುರಿಯನ್ನು ತಲುಪಲು ಇರುವ ಮಾರ್ಗಗಳ ಬಗ್ಗೆ ಇರಬಹುದು. ಆದರೆ ಗುರಿ ಅಥವಾ ಗಮ್ಯದ ಬಗ್ಗೆ ಭಿನ್ನಾಭಿಪ್ರಾಯ ಇರಲಾರದು. ಸಮಾಜವಾದ ಒಂದು ಹಂತದಲ್ಲಿ ರಾಜ್ಯಶಕ್ತಿಯನ್ನು ಅವಲಂಬಿಸುತ್ತದೆ. ಆ ರಾಜ್ಯಶಕ್ತಿಯೇ ಸಮಾಜವನ್ನು ಒಡೆಯಲು ಕಾರಣವಾಗುತ್ತದೆ. ಸರ್ವೋದಯ ಸಿದ್ಧಾಂತ ರಾಜ್ಯಶಕ್ತಿಯನ್ನು ಒಪ್ಪದೆ ಜನಶಕ್ತಿಗೆ ಮಹತ್ವ ಕೊಟ್ಟಿದೆ. ಜನಶಕ್ತಿಯ ಮೂಲಕ ಸಮಾಜ ಪರಿಪಕ್ವಗೊಳ್ಳುತ್ತ ಹೋಗಿ ರಾಜ್ಯ ಶಕ್ತಿಯನ್ನು ತನ್ನ ನೈತಿಕ ಶಕ್ತಿಗೆ ಒಳಪಡಿಸಿ ಸರ್ವೋದಯ ಸಮಾಜದ ಸ್ಥಾಪನೆಗೆ ಕಾರಣವಾಗುವಂತೆ ಪ್ರಯತ್ನಿಸುತ್ತದೆ. ಮಾನವೀಯ ಹಿತ ದೃಷ್ಟಿಯನ್ನೇ ಮೂಲವಾಗಿರಿಸಿಕೊಂಡಿರುವ ಸರ್ವೋದಯ ಸಿದ್ಧಾಂತದ ಕಾರ್ಯಕರ್ತನಾದ ನನಗೆ ಕೆಲ ಪ್ರಮುಖ ಸಮಾಜವಾದಿಗಳ ಸಂಪರ್ಕ ಬಂದದ್ದು ಒಂದು ರೀತಿಯಲ್ಲಿ ಲಾಭಕರವೆನಿಸಿತು. ಶ್ರೇಷ್ಠ ಸಮಾಜವಾದಿಗಳೊಂದಿಗೆ ದೀರ್ಘಕಾಲದ ಒಡನಾಟ ಬರಲಿಲ್ಲವಾದರೂ ಅವರ ಭೇಟಿ, ಅವರೊಂದಿಗಿನ ಅಲ್ಪಕಾಲದ ಸಂದರ್ಶನ ಮತ್ತು ಚಿಕ್ಕದಾಗಿ ಸೇವೆ ಮಾಡುವ ಅವಕಾಶವಂತೂ ದೊರೆತುದುದು ವಿಶೇಷ ಅವಕಾಶವೇ ಆಗಿದೆ. ಅತ್ಯಂತ ಪ್ರಾಮಾಣಿಕ, ಪ್ರಖರ ವಿಚಾರದ ಮತ್ತು ರಾಜಕೀಯ ಮುತ್ಸದ್ದಿಯಾಗಿದ್ದು ನಂತರ ಸರ್ವೋದಯ ಸಿದ್ಧಾಂತಕ್ಕೆ ಆಚಾರ್ಯ ವಿನೋಬಾರೊಂದಿಗೆ ಜೀವನದಾನ ಮಾಡಿದ ಜಯಪ್ರಕಾಶ ನಾರಾಯಣರೊಂದಿಗೆ ಐದು ವರ್ಷಗಳಷ್ಟು ದೀರ್ಘ ಕಾಲ ನಿಕಟತೆಯಲ್ಲಿ ಇರುವ ಸದಾವಕಾಶ ದೊರೆಯಿತು. ಆ ಸಮಯದಲ್ಲಿಯೇ ಇನ್ನೂ ಹಲವಾರು ಸಮಾಜವಾದಿ ನಾಯಕರೊಂದಿಗೆ ಒಂದಿಲ್ಲ ಒಂದು ಕಾರಣದಿಂದ ಭೇಟಿಮಾಡುವ, ಮಾತನಾಡುವ, ಕೆಲಸಮಾಡುವ ಅವಕಾಶ ಸಿಕ್ಕಿತು. ಅಂಥವರಲ್ಲಿ ಪ್ರಮುಖರಾದವರು ಅಚ್ಯುತಪಟವರ್ಧನ್. ಇವರು ಕಾಂಗ್ರೆಸ್ ಸಮಾಜವಾದಿ ಪಕ್ಷ ಕಟ್ಟುವವರಲ್ಲಿ ಪ್ರಮುಖರಾಗಿದ್ದರು. ಅವರ ಭೇಟಿ ನನಗಾದುದು ಬನಾರಸ್‌ನಲ್ಲಿ. ಅಲ್ಲಿ ಹಿಂದಿ ಶೀಘ್ರಲಿಪಿ ಕಲಿಯಲು ಜೆ.ಪಿ.ಯವರ ಆದೇಶದಂತೆ ಸುಮಾರು ಆರು ತಿಂಗಳು ಇದ್ದೆ. ಅಚ್ಯುತಪಟವರ್ಧನ್ ರವರು ಆ ನಗರದಲ್ಲೇ ಇದ್ದ ಜೆ.ಕೃಷ್ಣಮೂರ್ತಿಯವರ ಮಹಿಳಾ ಕಾಲೇಜ್‌ನ ಅತಿಥಿ ಗೃಹದಲ್ಲಿ ತಂಗಿದ್ದರು. ಅವರು ಭಗವದ್ಗೀತೆಯನ್ನು ಇಂಗ್ಲೀಷ್‌ಗೆ ಭಾಷಾಂತರಿಸುವ ಕಾರ್ಯದಲ್ಲಿ ತೊಡಗಿದ್ದರು. ಆ ಸಮಯದಲ್ಲಿ ಅಚ್ಯುತಪಟವರ್ಧನ್‌ರವರ ಪರಿಚಯವಾಯಿತು. ಆಗ ಅವರು ತಾವು ಮಾಡುತ್ತಿರುವ ಅನುವಾದದ ಕಾರ್ಯದ ಬಗ್ಗೆ ತಿಳಿಸಿದರು. ತಾವು ಹೇಳುವುದನ್ನು ಬರೆದುಕೊಳ್ಳಲು

ಸಾಧ್ಯವೇ ಎಂದು ಕೇಳಿದರು. ತಕ್ಷಣ ನಾನು ಸಮ್ಮತಿಸಿದೆ. ಅದರಂತೆ ಕೆಲವಾರು ದಿನ ಅವರ ಬಳಿಗೆ ಹೋಗಿ ಬರೆದುಕೊಳ್ಳುತ್ತಿದ್ದೆ. ಆ ಸಂದರ್ಭದಲ್ಲಿ ಹಲವಾರು ಸಲ ಅತಿಥಿಗೃಹದಲ್ಲಿ ಒಟ್ಟಿಗೆ ಊಟಕೂಟ ಮಾಡುತ್ತಿದ್ದೆವು. ಹೀಗೆ ಅಚ್ಯುತಪಟವರ್ಧನ್‌ರವರ ವ್ಯಕ್ತಿತ್ವವನ್ನು ಬಹಳ ಸಮೀಪದಲ್ಲಿ ನೋಡುವ ಮತ್ತು ತಿಳಿಯುವ ಅವಕಾಶ ದೊರೆಯಿತು. ಮುಂದೊಂದು ದಿನ ಅವರ ಸಹೋದರರು ಮತ್ತು ಸಮಾಜವಾದಿಯು ಆಗಿದ್ದ ಅಪ್ಪಾಸಾಹೇಬ್ ಪಟವರ್ಧನ್‌ರವರನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ಆದರೆ ಅವರೊಂದಿಗೆ ಹೆಚ್ಚಿನ ಸಂಪರ್ಕ ಬರಲಿಲ್ಲ. ಅವರು ಪೂರ ಖಾದಿಧಾರಿಯಾಗಿದ್ದು ಗಾಂಧೀ ಟೋಪಿಯನ್ನು ಧರಿಸುತ್ತಿದ್ದುದು ನೆನಪಿದೆ. ಅವರದು ಸ್ವಲ್ಪ ಸ್ಥೂಲ ದೇಹ. ಕೆಲವೇ ಕ್ಷಣಗಳನ್ನು ಭೇಟಿಮಾಡುವ ಅವಕಾಶ ಸಿಕ್ಕಿದ್ದು. ಸಮಾಜವಾದಿ ಲೇಖಕ ಮೀನು ಮಸಾನಿಯವರು ಮುಂಬಯಿನಲ್ಲಿ ಜೆ.ಪಿ.ಯವರೊಂದಿಗೆ ಮಲಬಾರ್‌ಹಿಲ್ಸ್‌ನ ನೇಚರ್‌ಕ್ಯೂರ್ ಸೆಂಟರ್‌ನಲ್ಲಿ ಜೆ.ಪಿ.ಯುವರೊಂದಿಗೆ ಇದ್ದಾಗ ಅವರು ಮೀನುಮಸಾನಿಯವರಿಗೆ ಬರೆದ ಒಂದು ರಾಜಕೀಯ ವಿಷಯದ ಪತ್ರವನ್ನು ಕೊಟ್ಟು ಬರಲು ನನ್ನನ್ನು ಮಸಾನಿಯವರ ಬಳಿಗೆ ಕಳುಹಿಸಿದ್ದರು. ಆಗ ಅವರು ಕಲ್ಚರಲ್ ಫ್ರೀಡಮ್‌ನ ಅಧ್ಯಕ್ಷರಾಗಿದ್ದರು. ಅವರ ಆಫೀಸ್ ಆರ್ಮಿ ಅಂಡ್ ನೇವಿ ಕಟ್ಟಡದಲ್ಲಿತ್ತು. ಒಳಗೆ ಹೋಗಿ ಮಸಾನಿಯವರ ಕಛೇರಿಯಲ್ಲಿ ಪ್ರವೇಶ ಪಡೆದು ಜೆ.ಪಿ.ಯವರ ಕಾಗದವನ್ನು ಅವರಿಗೆ ತಲುಪಿಸಿದೆ. ನನ್ನ ಪರಿಚಯವನ್ನು ಮಾಡಿಕೊಂಡೆ. ಅವರು ನನ್ನ ಕೈಕುಲಿಕಿ ಥ್ಯಾಂಕ್ಸ್ ಅಂಥ ಹೇಳಿದರು. ಉದ್ದನೆಯ ತೆಳುವಾದ ಗುಲಾಬಿ ಬಣ್ಣದ ಮುಖ. ಸ್ವಲ್ಪ ಹೆಚ್ಚು ಅಗಲವಾದ ಹಣೆ ಅವರ ಸ್ಫುರದ್ರೂಪ ವ್ಯಕ್ತಿತ್ವ ಇನ್ನೂ ಮನಸ್ಸಿನಲ್ಲಿ ಹಸಿರಾಗಿದೆ. ಮಸಾನಿಯವರು ಕೂಡ ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪಿಸಿದವರಲ್ಲಿ ಒಬ್ಬರು. ಅವರು ಬರೆದ "ಮದರ್ ಇಂಡಿಯಾ" ಬಹಳ ಪ್ರಸಿದ್ಧಿ ಪಡೆದ ಪುಸ್ತಕವಾಗಿತ್ತು. ಇದೇ ರೀತಿ ಬಹಳ ಅಲ್ಪಕಾಲ ಸಂಪರ್ಕಕ್ಕೆ ಬಂದ ವ್ಯಕ್ತಿ ನಾಥ್ ಪೈ ಮುಂಬಯಿಯಲ್ಲಿ ತಂಗಿದ್ದಾಗ ಜೆ.ಪಿ.ಯವರನ್ನು ಭೇಟಿಮಾಡಲು ಅವರು ಬಂದಿದ್ದರು. ಜೆ.ಪಿ.ಯವರು ಮನೆಯ ಒಳಗಡೆ ಇದ್ದುದರಿಂದ ನಾಥ್‌ಪೈ ಅವರನ್ನು ಡ್ರಾಯಿಂಗ್ ರೂಮ್‌ನಲ್ಲಿ ಇರುವಂತೆ ಹೇಳಿದೆ. ಅವರೊಂದಿಗೆ ನಾನು ಕುಳಿತಿದ್ದೆ. ಆಗ ಅವರು ನನ್ನ ವಿಷಯವಾಗಿ ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದರು. ನನ್ನ ವಿದ್ಯಾಭ್ಯಾಸದ ಬಗ್ಗೆಯೂ ಕೇಳಿದರು. ಪದವೀಧರನಲ್ಲ ಎಂದು ಹೇಳಿದಾಗ ಅವರು ನಗುತ್ತಾ ಜೆ.ಪಿ.ಯವರೊಂದಿಗೆ ಇದ್ದ ಮೇಲೆ ಇನ್ಯಾವ ಪದವಿ ಬೇಕೆಂದು ಕೇಳಿದರು. ಅವರು ಅಂದ ಮಾತು ಇಂದಿಗೂ ನಿಜವೆನಿಸುತ್ತದೆ ಮತ್ತು ನೆನಪಿದೆ.

ಜೆ.ಪಿ.ಯವರೊಂದಿಗೆ ಬೆಂಗಳೂರಿಗೆ ಬಂದಿದ್ದಾಗ ಅವರ ಸಹಪಾಠಿಯು ಮತ್ತು ಸಮಾಜವಾದಿ ಚಿಂತಕರು ಆಗಿದ್ದ ಬೋಲಾ ಡಿ. ಪಂಥ್ ಅವರನ್ನು ನೋಡುವ ಅವರ ಮನೆಯಲ್ಲಿ ಇರುವ ಅವಕಾಶ ದೊರೆಯಿತು. ಆಗ ಬೆಂಗಳೂರಿನ ಲಾಂಗ್ ಫಾರ್ಡ್ಸ್ ಸರ್ಕಲ್ ಬಳಿ ಅವರ ಮನೆಯಿತ್ತು. ಸ್ನೇಹ ಪರವಾಗಿ ಮತ್ತು ಹೆಚ್ಚು ಸಮಯ ಕಳೆದ ಸಮಾಜವಾದಿ ಎಂದರೆ ಗಂಗಾಶರಣ್‌ಸಿನ್ಹಾ. ಅವರ ಭೇಟಿ ಬಿಹಾರ್‌ನಲ್ಲಿ ಆಗದೆ ಮೇಲುಕೋಟೆಯಲ್ಲೇ ಆದದ್ದು ವಿಶೇಷ ಸಂಗತಿ. ಜೆ.ಪಿ.ಯವರ ಬಳಿ ಇದ್ದಾಗ ಅವರನ್ನು ಒಂದೆರಡು ಬಾರಿ ನೋಡಿದ್ದೆ. ಅವರು ಹಿಂದಿ ಸಾಹಿತ್ಯ ಪರಿಷತ್‌ನ ಅಧ್ಯಕ್ಷರು ಆಗಿದ್ದರು.

ಪರಿಷತ್ತಿನ ಕಾರ್ಯನಿಮಿತ್ತವಾಗಿ ಬೆಂಗಳೂರಿಗೆ ಬಂದಿದ್ದಾಗ ಅವರು ಮೇಲುಕೋಟೆಗೆ ಬಂದರು. ಅವರಿಗೆ ದೇವರು ಮತ್ತು ದೇವಸ್ಥಾನವೆಂದರೆ ಆಸಕ್ತಿ. ಮೇಲುಕೋಟೆಗೆ ಬರುವುದನ್ನು ನನಗೆ ತಿಳಿಸಿದ್ದರು. ಅವರ ಊಟ ಮತ್ತು ವಸತಿಯ ಏರ್ಪಾಟು ಮಾಡಿದ್ದೆ. ದೇವಸ್ಥಾನಕ್ಕೂ ಕರೆದುಕೊಂಡು ಹೋಗಿದ್ದೆ. ಏತನ್ಮಧ್ಯೆ ಅನೇಕ ವಿಷಯಗಳ ಬಗ್ಗೆ ಮಾತನಾಡುತ್ತಿದ್ದೆ. ಅವರು ಬಹಳ ಲವಲವಿಕೆಯ ಮನುಷ್ಯರಾಗಿದ್ದರು. ಪೂರ್ಣ ಖಾದಿಧಾರಿ ಕಚ್ಚೆ ಪಂಚೆ ಜುಬ್ಬಾ ತೊಟ್ಟಿದ್ದರು. ಅವರದು ಸ್ಥೂಲ ಶರೀರ, ಸ್ವಲ್ಪ ಎತ್ತರ ಕಡಿಮೆ. ಗಂಗಾಶರಣ್ ಸಿನ್ಹಾರವರೊಂದಿಗೆ ಕಳೆದ ಸಮಯ ತುಂಬಾ ಮಧುರವಾಗಿತ್ತು ಮತ್ತು ಜ್ಞಾಪಕದಲ್ಲಿ ಉಳಿಯುವಂಥದ್ದಾಗಿತ್ತು. ಇನ್ನೋರ್ವ ಅತಿ ಮುಖ್ಯ ಸಮಾಜವಾದಿ ನಾಯಕರಾಗಿದ್ದ ಡಾ.ರಾಮ ಮನೋಹರ ಲೋಹಿಯಾರವರೊಂದಿಗೆ ಆದ ಚುಟುಕ ಸಂಪರ್ಕವನ್ನು ದೀರ್ಘ ಕಾಲದವರೆಗೂ ನೆನೆಯುವಂಥದ್ದಾಗಿದೆ. ಅವರನ್ನು ನೋಡಿದ ಮತ್ತು ಅವರೊಂದಿಗೆ ಅಲ್ಪಕಾಲದ ಸಂಪರ್ಕ ಬಂದಿದ್ದು ಐತಿಹಾಸಿಕ ಸಂದರ್ಭದಲ್ಲಿ. ಜೆ.ಪಿ.ಯವರು ಸಮಾಜವಾದಿ ಪಕ್ಷವನ್ನು ತ್ಯಜಿಸಿ ಸಕ್ರಿಯ ರಾಜಕಾರಣದಿಂದ ಸರಿದು ಸರ್ವೋದಯ ಆಂದೋಲನಕ್ಕೆ ಬಂದಿದ್ದ ಸಮಯವದು. ದೇಶದ ಅಂದಿನ ಎಲ್ಲ ಸಮಾಜವಾದಿಗಳು ಜೆ.ಪಿ.ಯವರು ತೆಗೆದುಕೊಂಡ ನಿಲುವಿನ ಬಗ್ಗೆ ಅತ್ಯಂತ ಅಸಂತೋಷವುಳ್ಳವರಾಗಿದ್ದರು. ಅವರ ಆ ನಿಲುವಿನಿಂದ ಸಮಾಜವಾದ ಆಂದೋಲನಕ್ಕೂ ಮತ್ತು ರಾಷ್ಟ್ರ ರಾಜಕಾರಣಕ್ಕೂ ಬಹಳ ದೊಡ್ಡ ಹಾನಿಯಾಗಿದೆಯೆಂದು ಎಲ್ಲರೂ ಭಾವಿಸುತ್ತಿದ್ದರು. ಆದ್ದರಿಂದ ಜೆ.ಪಿ.ಯವರ ಮನ ಒಲಿಸಿ ಅವರನ್ನು ಪುನಃ ಸಮಾಜವಾದದ ಕಕ್ಷೆಗೆ ಮತ್ತು ರಾಷ್ಟ್ರದ ರಾಜಕಾರಣಕ್ಕೆ ತರಬೇಕೆಂಬ ಪ್ರಯತ್ನದ ಅಂಗವಾಗಿ ಡಾ.ಲೋಹಿಯಾರವರು ಹೈದರಾಬಾದ್ ಬಳಿಯಿದ್ದ ಒಂದು ಏಕಾಂತ ಸ್ಥಳದಲ್ಲಿ ಜೆ.ಪಿ.ಯವರೊಂದಿಗೆ ಸಂವಾದ ನಡೆಸುತ್ತಿದ್ದರು. ಆ ಸಂವಾದ ಎರಡು ಮೂರು ದಿನಗಳ ಕಾಲ ನಡೆಯಿತು. ಆ ಸಂದರ್ಭದಲ್ಲಿಯೇ ಲೋಹಿಯಾರವರನ್ನು ತುಂಬಾ ಹತ್ತಿರದಿಂದ ನೋಡಿದ್ದು ಮತ್ತು ಕಿಂಚಿತ್ ಸೇವೆ ಮಾಡಿದ್ದು. ಮಾತುಕತೆ ಮುಗಿಸಿ ಅವರಿಬ್ಬರು ತೋಟದ ಕಾಲ್ದಾರಿಯಲ್ಲಿ ನಡೆದುಕೊಂಡು ಬರುತ್ತಿದ್ದ ದೃಶ್ಯ ಮನಮೋಹಕವಾಗಿತ್ತು. ಕೆಲಕಾಲದ ನಂತರ ಲೋಹಿಯಾರವರು ಬರೆದ ತಮ್ಮ ಒಂದು ಪತ್ರದಲ್ಲಿ ಕೊನೆಸಾಲಿನಲ್ಲಿ ನನ್ನ ಹೆಸರನ್ನು ಬರೆದು ನನ್ನ ಬಗ್ಗೆ ವಿಚಾರಿಸಿದ್ದರು. ಕರ್ನಾಟಕದ ಕೆಲ ಸಮಾಜವಾದಿಗಳ ಸಂಪರ್ಕ ಕೂಡ ಬಂದಿತು. ಅವರಲ್ಲಿ ಮುಖ್ಯರಾದವರು ಎಸ್.ಗುರುಪಾದಸ್ವಾಮಿ, ಖಾದ್ರಿ ಶಾಮಣ್ಣ ಮತ್ತು ಬಾಸು ಕೃಷ್ಣಮೂರ್ತಿ. ಖಾದ್ರಿಶಾಮಣ್ಣನವರ ಹೆಸರನ್ನು ಮೊದಲ ಬಾರಿಗೆ ಜೆ.ಪಿ.ಯವರಿಂದಲೇ ಬಿಹಾರ್‌ನಲ್ಲಿದ್ದಾಗಲೇ ಕೇಳಿದ್ದೆ. ಉಳಿದವರ ಪರಿಚಯ ಕರ್ನಾಟಕಕ್ಕೆ ಬಂದಾದ ಮೇಲೆ ಆಯಿತು. ವೈಚಾರಿಕವಾಗಿ ತಾದ್ಯಾತ್ಮಕ ಸಂಬಂಧ ಉಂಟಾದುದು ಸಮಾಜವಾದಿ ಚಿಂತಕರಾದ ಡಿ.ಎಸ್.ನಾಗಭೂಷಣ್ ಮತ್ತು ಬಾಪುಹೆದ್ದೂರಶೆಟ್ಟಿ, ಸಮಾಜವಾದದಿಂದ ಸರ್ವೋದಯದೆಡೆಗೆ ಸಾಗುವ ಪಥದಲ್ಲಿ ಸಹಪಥಿಕರಾದ ಸಮಾಜವಾದಿಗಳನ್ನು ಜ್ಞಾಪಿಸುವುದಕ್ಕೆ ಕಾರಣವಾದ ಈ ಘಳಿಗೆಗೆ ಕೃತಜ್ಞತಾ ನಮನಗಳು.

ಸರ್ವೋದಯ ಆಂದೋಲನದ ಮುನ್ನಡೆ

ಸರ್ವೋದಯ ಸಮಾಜ ರಚನೆಯ ವಾಹಕ ರಚನಾತ್ಮಕ ಕಾರ್ಯಗಳು. ಗಾಂಧೀಜಿ ಪ್ರತಿಪಾದಿಸಿದ್ದ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಬಹು ಮುಖ್ಯವಾದುದು ಖಾದಿ ಕಾರ್ಯ. ಈ ಕಾರ್ಯಕ್ಕಾಗಿ ತನ್ನನ್ನೇ ಪೂರ್ಣವಾಗಿ ತೊಡಗಿಸಿಕೊಂಡಿದ್ದ ವ್ಯಕ್ತಿ ಜಮ್ನಾಲಾಲ್ ಬಜಾಜ್. ಅವರ ಹೆಸರಿನಲ್ಲಿ ಪ್ರತಿವರ್ಷ ರಚನಾತ್ಮಕ ಕಾರ್ಯಕ್ಕಾಗಿ ಕೊಡಲ್ಪಡುವ ರಾಷ್ಟ್ರೀಯ ಪ್ರತಿಷ್ಟಿತ ಜಮ್ನಾಲಾಲ್ ಪ್ರಶಸ್ತಿಯನ್ನು ೨೦೧೫ನೇ ಸಾಲಿಗೆ ಉತ್ತಾರಖಂಡ್ ರಾಜ್ಯದ ಸರ್ವೋದಯ ಕಾರ್ಯಕರ್ತರಾದ ಶ್ರೀ.ಮಾನ್‌ಸಿಂಹರಾವತ್ ರವರಿಗೆ ಇದೇ ನವೆಂಬರ್ ತಿಂಗಳಲ್ಲಿ ಕೊಡಲಾಯಿತು. ರಾವತ್‌ರವರನ್ನು ಜನಪದ ವಿಚಾರವು ಅಭಿನಂದಿಸುತ್ತದೆ. ಕಳೆದ ವರ್ಷ ಇಂಥದೇ ಪ್ರಶಸ್ತಿಯನ್ನು ಸುರೇಂದ್ರ ಕೌಲಗಿಯವರಿಗೆ ಕೊಡಲಾಗಿತ್ತು ಎಂಬುದನ್ನು ಜ್ಞಾಪಿಸಿಕೊಳ್ಳಬಹುದು. ಶ್ರೀರಾವತ್ ಮತ್ತು ಅವರ ಸಹಧರ್ಮಿಣಿ ಶಶಿಪ್ರಭಾ ಕಳೆದ ಆರು ದಶಕಗಳಿಂದ ಭೂದಾನ, ಮಧ್ಯಪಾನ ನಿಷೇಧ, ಅರಣ್ಯ ಸಂರಕ್ಷಣೆ, ಬಾಲಕಿಯರ ಶಿಕ್ಷಣ ಮತ್ತು ಮಹಿಳಾ ಸಂಘಟನೆಯ ಕಾರ್ಯಗಳಲ್ಲಿ ಅನವರತ ತೊಡಗಿಸಿಕೊಂಡಿದ್ದಾರೆ. ಸರ್ವೋದಯ ವಿಚಾರವನ್ನು ಪ್ರಚಾರ ಮಾಡಿ ಸಮಾಜದ ಅಂತಿಮ ವ್ಯಕ್ತಿಯ ಜೀವನದಲ್ಲಿ ಭರವಸೆಯನ್ನು ತುಂಬಿದ್ದಾರೆ. ಅವರಿಗೆ ಬಜಾಜ್ ಪ್ರಶಸ್ತಿ ದೊರೆತ ಸಂದರ್ಭದಲ್ಲಿ ನಾಗರೀಕ ಅಭಿನಂದನೆಯನ್ನು ಏರ್ಪಡಿಸಲಾಗಿತ್ತು. ಈ ಸಭೆ ಉತ್ತರಾಖಂಡದ ಮುಖ್ಯಮಂತ್ರಿಯವರ ನಿವಾಸದಲ್ಲಿ ಮಾಡಲಾಗಿತ್ತು. ಮುಖ್ಯ ಅತಿಥಿಗಳಾಗಿ ವಿಧಾನಸಭಾಧ್ಯಕ್ಷ ಶ್ರೀ.ಗೋವಿಂದ ಸಿಂಹ ಕುಜ್ವಾಲ್ ಆಗಮಿಸಿದ್ದರು.

ಭಯೋತ್ಪಾದಕತೆ ಮತ್ತು ಸಂಕೀರ್ಣತೆಯ ಈ ಕಾಲದಲ್ಲಿ ಸರ್ವೋದಯ ವಿಚಾರ ಅಹಿಂಸಾ ಸಿದ್ಧಾಂತ ಮೊದಲಿಗಿಂತಲೂ ಹೆಚ್ಚು ಪ್ರಾಸಂಗಿಕವಾಗಿವೆ ಎಂದು ಮುಖ್ಯಮಂತ್ರಿ ತಮ್ಮ ಭಾಷಣದಲ್ಲಿ ಹೇಳಿದರು. ಶ್ರೀ.ಮಾನಸಿಂಹ ರಾವತ್‌ರವರು ಜೀವನ ಪೂರ್ತ ಮಾಡಿದ ಮಧ್ಯಪಾನ ನಿಷೇಧದ ಕೆಲಸವನ್ನು ಶ್ರೀ.ಕುಂಚ್‌ವಾಲ್‌ರವರು ತಮ್ಮ ಭಾಷಣದಲ್ಲಿ ಉಲ್ಲೇಖಿಸುತ್ತ ನವಯುವಕರು ಮದ್ಯವ್ಯಸನಿಗಳಾಗುತ್ತಿರುವುದಕ್ಕೆ ಚಿಂತೆ ವ್ಯಕ್ತಪಡಿಸಿದರು. ಹಾಗೂ ಸರ್ಕಾರ ಮತ್ತು ಸಮಾಜಗಳೆರಡು ಈ ವಿಷಯವನ್ನು ಗಂಭೀರತೆಯಿಂದ ಪರಿಗಣಿಸಬೇಕೆಂದು ಹೇಳಿದರು. ೮೭ ವರ್ಷದ ಮಾನಸಿಂಹರಾವತ್‌ರವರು ಅಮೇರಿಕಾಕ್ಕೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ಹೋಗಬೇಕಿತ್ತು. ಆದರೆ ವಿನೋಬಾರವರ ವಿಚಾರದಿಂದ ಪ್ರೇರಿತರಾಗಿ ಹಾಗೂ ದೇಶದ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಒಂದು ವರ್ಷ ಸರ್ವೋದಯದ ಕೆಲಸಮಾಡಲು ನಿಶ್ಚಯಿಸಿದರು. ಆದರೆ ಮುಂದೆ ೧೯೫೪ರಲ್ಲಿ ತಮ್ಮ ಜೀವನವನ್ನು ಸರ್ವೋದಯ ಆಂದೋಲನಕ್ಕೆ ದಾನಮಾಡಿದರು.

ಸಾದರ – ಸ್ವೀಕಾರ

೧) ಪುಸ್ತಕದ ಹೆಸರು : ರೈತರ ಆತ್ಮಹತ್ಯೆ –ಕಾರಣಗಳು ಮತ್ತು ಪರಿಹಾರಗಳು
ಲೇಖಕರು : ಬಿ.ಆರ್.ರಮೇಶ್
ಪ್ರಕಾಶಕರು : ಎಮ್.ಕೆ.ಕಮಲ, #೧೦೮, ಪಾದುಕೆ,
ಕೆ.ಹೆಚ್.ಬಿ.ಕಾಲೋನಿ, ಚಿಟ್ಟನಹಳ್ಳಿ ಬಡಾವಣೆ,
ಹೊಳೆನರಸೀಪುರ – ೫೭೩ ೨೧೧.
ದೂರವಾಣಿ ಸಂಖ್ಯೆ : ೮೧೨೩೪೪೯೬೧೨(ಮೊ)
ಪುಟ : ೪೯,
ಬೆಲೆ : ೧೦/– ಪ್ರಕಟಣೆಯ ವರ್ಷ: ೨೦೧೫

ರೈತರ ಆತ್ಮಹತ್ಯೆಗಳು ನಿರಂತರವಾಗಿ ನಡೆಯುತ್ತಿರುವ ಸಮಯದಲ್ಲಿ ಆ ಸಮಸ್ಯೆ ಕುರಿತಾಗಿ ವಿಮರ್ಶೆಮಾಡುವ ಕೃತಿ ಈ ಪುಸ್ತಕ. "ರೈತನ ಆತ್ಮಹತ್ಯೆಗೆ ಅವನೊಬ್ಬನನ್ನೆ ಹೊಣೆಮಾಡುವುದು ತಪ್ಪು. ಇಂದು ನಾವೆಲ್ಲರು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಒಂದಲ್ಲ ಒಂದು ರೀತಿಯಲ್ಲಿ ನಾವೆಲ್ಲರು ಅವನ ಈ ಸ್ಥಿತಿಗೆ ಕಾರಣರಾಗಿದ್ದೇವೆ" ಎಂದು ಹೇಳುವ ಲೇಖಕರ ಈ ಮಾತು ಸತ್ಯವಾಗಿದೆ. ಆಧುನಿಕ ಬೇಸಾಯ ಕ್ರಮದಲ್ಲಿಯೇ ರೈತರ ಆತ್ಮಹತ್ಯೆಯ ಬೀಜ ಅಡಗಿದೆ ಎಂದು ಲೇಖಕರು ಹೇಳಿರುವ ಮಾತನ್ನು ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ನಿಮ್ಮ ಉದ್ಧಾರವಾಗಬೇಕಾದರೆ, ಹಣಗಳಿಸಬೇಕಾದರೆ ಆಧುನಿಕ ಬೇಸಾಯ ಕ್ರಮವೊಂದೆ ದಾರಿ ಎಂದು ಹೇಳಿ ಅವರನ್ನು ದಾರಿತಪ್ಪಿಸಲಾಯಿತು. ಎಂಬ ಕಟು ಮಾತನ್ನು ಲೇಖಕರು ಹೇಳಿದ್ದಾರೆ. ಅಂತರ್‌ಜಲವನ್ನು ನಾಶಮಾಡಿದ ಕೀರ್ತಿಗೆ ಸಕ್ಕರೆ ಕಾರ್ಖಾನೆಯವರು ಸೇರುತ್ತಾರೆ. ಇಂಥ ಅನೇಕ ನೈಜ ಸಂಗತಿಗಳನ್ನು ಮತ್ತು ಮಾತುಗಳನ್ನು ಹೇಳಿರುವ ಈ ಪುಸ್ತಕವನ್ನು ರೈತರ ಆತ್ಮಹತ್ಯೆಯ ಬಗ್ಗೆ ಚಿಂತಿತರಾಗಿರುವವರೆಲ್ಲರೂ ಓದಬೇಕು.

೨) ಪುಸ್ತಕದ ಹೆಸರು : ಪಾರಂಪರಿಕ ಕೆರೆ ಕಟ್ಟೆಗಳು –(ಅಳಿವು – ಉಳಿವು)
ಲೇಖಕರು : ತೈಲೂರು ವೆಂಕಟಕೃಷ್ಣ
ಪ್ರಕಾಶಕರು : ಬಾನುಪ್ರಕಾಶನ,೨೯೫೮, ನೆಹರು ನಗರ, ಮಂಡ್ಯ,
ದೂರವಾಣಿ ಸಂಖ್ಯೆ : ೯೮೪೪೮೦೦೪೦೦೪(ಮೊ)
ಪುಟ : ೧೩೬,
ಬೆಲೆ : ೧೫೦/– ಪ್ರಕಟಣೆಯ ವರ್ಷ: ೨೦೧೪

ಆಧುನಿಕ ಅಭಿವೃದ್ಧಿಯ ನೀತಿಯ ಕಾರಣದಿಂದಾಗಿ ನೀರಿನ ಸಂಗ್ರಹಗಳಾಗಿದ್ದ ಕೆರೆಗಳು ನಾಶಹೊಂದುತ್ತಿವೆ. ಇದು ಜ್ವಲಂತ ಸಮಸ್ಯೆ. ಕೆರೆಗಳನ್ನು ಉಳಿಸದಿದ್ದರೆ ಮತ್ತು ಸಾಧ್ಯವಾದಲ್ಲಿ ಹೊಸದಾಗಿ ಕೆರೆಗಳನ್ನು ನಿರ್ಮಿಸದಿದ್ದರೆ ದೇಶದ ವ್ಯವಸಾಯ ಸಾಯುವುದರಲ್ಲಿ ಸಂದೇಹವಿಲ್ಲ. ಇಂಥ ಆಪತ್‌ಕಾಲಿನಲ್ಲಿ ಜನರಿಗೆ ಮತ್ತು ಸರ್ಕಾರಕ್ಕೆ ಕೆರೆಗಳ ಇತಿಹಾಸ ಮತ್ತು ಮಹತ್ತ್ವವನ್ನು ತಿಳಿಸುವ ಈ ಕೃತಿಯನ್ನು ಎಲ್ಲರೂ ಸ್ವಾಗತಿಸಬೇಕು ಮತ್ತು ಓದಬೇಕು. ಈ ಪುಸ್ತಕವು ಕರ್ನಾಟಕದ ಅನೇಕ ಕೆರೆಗಳ ಇತಿಹಾಸವನ್ನು ದಾಖಲಿಸಿದೆ. ರೋಚಕವಾದ ಕಥೆಗಳಿವೆ ಮತ್ತು ವಿಷಯಗಳಿವೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ.ಕೆ.ನಾಗಪ್ಪ – ಮದ್ದೂರು

ಶ್ರೀ.ಎಸ್.ರಘು, ಶ್ರೀ.ಎನ್.ಕಲ್ಲಪ್ಪ, ಶ್ರೀ.ನಾಗಭೂಷಣ್ – ಬೆಂಗಳೂರು

ಶ್ರೀ.ಸುಬ್ಬರಾವ್, ಶ್ರೀ.ಎಮ್.ಎನ್.ಶಿವಶಂಕರ್ – ಮೈಸೂರು

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಡಾ.ಶಿವರಾಮ್.ಎಸ್.ಕೆ – ಮೈಸೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820



5·12·15

ಶ್ರೀಮತಿ/ ಶ್ರೀ.

259 ಆರ್.ನಾಗರಾಜು
~~ರಾಘವೇಂದ್ರ ಟೆಕ್ಸ್‌ಟೈಲ್~~,
ಸಂಖ್ಯೆ.19,
ಎಸ್.ಸಿ.ಕೆ.ಎಮ್.ರೋಡ್,
ಕೊಳ್ಳೇಗಾಲ – 571440
ಚಾಮರಾಜನಗರ ಜಿಲ್ಲೆ.
9916226039(ಮೊ)

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237